ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ತಂತ್ರಜ್ಞಾನದಲ್ಲಿ ಕ್ಷಿಪ್ರವಾಗಿ ಬದಲಾವಣೆಗಳು ಆಗುತ್ತಿವೆ. ಆದ್ದರಿಂದ ಮಕ್ಕಳು ಕೂಡ ಬದಲಾಗುತ್ತಿರುವ ಜ್ಞಾನ, ಸಾಮರ್ಥ್ಯದ ಜೊತೆಗೆ ವಿವಿಧ ಕೌಶಲಗಳನ್ನು ಬೆಳೆಸಿಕೊಂಡರೆ ಅವರ ಭವಿಷ್ಯಕ್ಕೆ ಅನುಕೂಲ.

ಕಾಂಗ್ರೆಸ್‌ಗೆ ಬೇಕಿದೆ ಕಾಯಕಲ್ಪ: ಸಿಬಲ್ 7 | ದೊಡ್ಡಮಳೂರು ಗ್ರಾಮದಲ್ಲಿ ಕೋವಿಡ್‌ನಿಂದ ತಾಯಿ ಸಾವು

ಆಳ-ಅಗಲ: ಐಪಿಒ: ಲಾಭ ನಷ್ಟದ ಲೆಕ್ಕಾಚಾರ | ರಾಜ್ಯದ ವಿವಿಧೆಡೆ ಭಾರಿ ಮಳೆ 4 | 'ಕೆಲಸ ಹಿಡಿದು ತಮ್ಮನನ್ನು ಸಾಕುವೆ' 4

ಪೂರ್ತಿ ಶುಲ್ಕ ಅನಿವಾರ್ಯ: ಖಾಸಗಿ ಶಾಲಾಡಳಿತ • ಸರ್ಕಾರವೇ ತೀರ್ಮಾನಿಸಲಿ: ಪೋಷಕರು

ಶುಲ್ಕ ಗೊಂದಲ: ಮತ್ತೆ ಗುದ್ದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಶಾಲೆಗಳ ಶುಲ್ಕ ನಿಗದಿ ವಿಚಾರ ಕಗ್ಗಂಟಾಗಿದ್ದು, ಪೋಷಕರು ಪೂರ್ಣ ಶುಲ್ಕ ಪಾವತಿಸಲು ಸಾಧ್ಯವಿಲ್ಲ ಎಂದು ಪ್ರತಿಭಟನೆ ಹಾದಿ ತುಳಿದಿದ್ದರೆ, ಪೂರ್ಣ ಶುಲ್ಕ ಪಾವತಿಸಲೇಬೇಕು ಎಂದು ಶಾಲಾ ಆಡಳಿತ ಮಂಡಳಿಗಳು ಪಟ್ಟು ಹಿಡಿದಿವೆ. ಈ ಬಿಕ್ಕಟ್ಟು ಬಗೆಹರಿಸಲು ಸರ್ಕಾರದ ಮಧ್ಯ ಪ್ರವೇಶ ಅನಿವಾರ್ಯವಾಗಿದೆ.

ಇದರಿಂದಾಗಿ ಈ ವರ್ಷವೂ (2021–22) ಖಾಸಗಿ ಶಾಲಾ ಶುಲ್ಕ ಗೊಂದಲ ಮುಂದುವರಿಯುವುದು ನಿಚ್ಚಳವಾಗಿದೆ. ಜುಲೈ 1ರಿಂದ ಶೈಕ್ಷಣಿಕ ವರ್ಷದ ತರಗತಿ ಆರಂಭಿಸಲು ಹಾಗೂ ಮಂಗಳವಾರದಿಂದ (ಜೂನ್ 15) ದಾಖಲಾತಿ ಪ್ರಕ್ರಿಯೆ ಆರಂಭಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಈಗಾಗಲೇ ಅಧಿಸೂಚನೆ ಹೊರಡಿಸಿದೆ. ಆದರೆ, ಶುಲ್ಕದ ಬಗ್ಗೆ ಯಾವುದೇ ಸ್ಪಷ್ಟನೆ ನೀಡಿಲ್ಲ.

ಕೋವಿಡ್ ಕಾರಣಕ್ಕೆ ಖಾಸಗಿ ಶಾಲೆಗಳು ಹಿಂದಿನ ಶೈಕ್ಷಣಿಕ ಸಾಲಿನ (2020–21) ಶುಲ್ಕದಲ್ಲಿ ಶೇ 70ರಷ್ಟು ಬೋಧನಾ ಶುಲ್ಕ ಮಾತ್ರ ಪಡೆಯಬೇಕೆಂದು 2021ರ ಜ. 29 ರಂದು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಖಾಸಗಿ ಶಾಲೆಗಳ ಸಂಘಗಳು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿವೆ.

ಈ ಮಧ್ಯೆ, ಈ ಸಾಲಿಗೆ ಪೂರ್ತಿ ಶುಲ್ಕ ಪಡೆಯಲು ಖಾಸಗಿ ಶಾಲಾಡಳಿತ ಮಂಡಳಿಗಳು ಶಿಕ್ಷಕ, ಶಿಕ್ಷಕೇತರ ಸಮನ್ವಯ ಸಮಿತಿ ನಿರ್ಧರಿಸಿದೆ. 'ಸರ್ಕಾರ ಶೇ 30ರಷ್ಟು ಶುಲ್ಕ ಕಡಿತ ಮಾಡಿರುವುದು 2020-21ನೇ ಸಾಲಿಗೆ ಮಾತ್ರ ಸೀಮಿತ. 2018-19ನೇ ಸಾಲಿನಲ್ಲಿ (ಕೋವಿಡ್ ಪೂರ್ವ) ಯಾವ ಶುಲ್ಕ ವಿತ್ತೋ ಅದೇ ಶುಲ್ಕವನ್ನು ಪಡೆಯಲು ನಿರ್ಧರಿಸಿದ್ದೇವೆ' ಎಂದು ಸಮಿತಿಯ ಸಂಚಾಲಕ ಡಿ. ಶಶಿಕುಮಾರ್ ಹೇಳಿದರು.

'ಈ ಬಾರಿ ಕೂಡಾ ಸರ್ಕಾರ ಶೇ 30 ರಷ್ಟು ಶುಲ್ಕ ಕಡಿತಗೊಳಿಸಿದರೆ, ಆ ಆದೇಶ ಪ್ರಶ್ನಿಸಿ ಮತ್ತೆ ನ್ಯಾಯಾಲಯದ ಮೆಟ್ಟಿಲೇರುತ್ತೇವೆ. ಪೂರ್ಣ ಶುಲ್ಕ ಪಡೆಯುವುದು ಅನಿವಾರ್ಯ. ಶುಲ್ಕದಲ್ಲಿ ಯಾವುದೇ ಹೆಚ್ಚಳ ಮಾಡುತ್ತಿಲ್ಲ. ಎರಡು ವರ್ಷದ ಹಿಂದೆ ಎಷ್ಟು ಶುಲ್ಕವಿತ್ತೊ ಅದನ್ನು ಪಡೆಯುತ್ತೇವೆ' ಎಂದರು.

ಅದಕ್ಕೆ ಪೋಷಕರ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. 'ಅನೇಕ ಶಾಲೆಗಳು ಪೂರ್ಣ ಶುಲ್ಕ ಪಾವತಿಗೆ ಮೇಲಿಂದ ಮೇಲೆ ಒತ್ತಾಯಿಸುತ್ತಿವೆ. ಆನ್‌ಲೈನ್ ತರಗತಿಗೆ ಪೂರ್ಣ ಶುಲ್ಕ ಪಡೆಯುವುದು ಎಷ್ಟು ಸರಿ? ಸರ್ಕಾರ ಈ ಕುರಿತು ಶೀಘ್ರ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕು' ಎಂದು ಖಾಸಗಿ ಶಾಲಾ ವಿದ್ಯಾರ್ಥಿಗಳ ಪಾಲಕ, ಪೋಷಕ ಸಂಘಟನೆಗಳು ಆಗ್ರಹಿಸಿವೆ.

'ಎ.ಜಿ ಜೊತೆ ಚರ್ಚಿಸಿ ತೀರ್ಮಾನ'

'ಶುಲ್ಕ ವಿಷಯದಲ್ಲಿ ಖಾಸಗಿ ಶಾಲೆಯವರು ಮತ್ತು ಪೋಷಕರು ಹೊಂದಾಣಿಕೆಗೆ ಬರಬೇಕು. ಪೋಷಕರ ಸ್ಥಿತಿಗತಿಯನ್ನು ಶಾಲೆಯವರು ಅರ್ಥ ಮಾಡಿಕೊಳ್ಳಬೇಕು. ಶುಲ್ಕ ಕಟ್ಟದಿದ್ದರೆ ಶಿಕ್ಷಕರಿಗೆ ಸಂಬಳ ಕೊಡುವವರು ಯಾರು ಎನ್ನುವುದು ಖಾಸಗಿ ಶಾಲೆಯವರ ಪ್ರಶ್ನೆ. ಪೂರ್ತಿ ಶುಲ್ಕ ತೆಗೆದುಕೊಂಡವರೂ ಪೂರ್ತಿ ವೇತನ ಕೊಟ್ಟಿಲ್ಲವೆನ್ನುವುದು ಬೇರೆ ವಿಚಾರ. ಶುಲ್ಕ ವಿಚಾರದಲ್ಲಿ ಶಾಲೆಗಳ ಮೇಲೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳಬಾರದು, ಶಾಲೆಗಳು ಪೋಷಕರಿಗೆ ಯಾವುದೇ ತೊಂದರೆ ಕೊಡಬಾರದು. ಶುಲ್ಕ ಕಟ್ಟಿಲ್ಲವೆಂದು ಆನ್‌ಲೈನ್ ಶಿಕ್ಷಣ ಸ್ಥಗಿತಗೊಳಿಸಬಾರದು, ಫಲಿತಾಂಶ ತಡೆ ಹಿಡಿಯಬಾರದು, ಪೋಷಕರಿಂದ ಮುಚ್ಚಳಿಕೆ ತೆಗೆದುಕೊಂಡು ಶಿಕ್ಷಣ ಕೊಡಬೇಕು ಎಂದು ಮಧ್ಯಂತರ ಆದೇಶದಲ್ಲಿ ಕೋರ್ಟ್ ಹೇಳಿದೆ. ಕೋರ್ಟ್ ಇನ್ನೂ ಅಂತಿಮ ತೀರ್ಪು ಕೊಟ್ಟಿಲ್ಲ. ಮತ್ತೆ ಸಮಸ್ಯೆ ಎದುರಾಗಿದೆ. ಹೀಗಾಗಿ, ಅಡ್ವೊಕೇಟ್ ಜನರಲ್ (ಎ.ಜಿ) ಜೊತೆ ಚರ್ಚಿಸಿ ಈ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇನೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ತಿಳಿಸಿದರು.

ಶಾಲಾ ಶುಲ್ಕ ವಿಚಾರದಲ್ಲಿ ಸಚಿವ ಸುರೇಶ್‌ಕುಮಾರ್ ಜೊತೆ ಮಾತನಾಡುತ್ತೇನೆ. ಶಾಲೆಗಳ ಕಷ್ಟ–ಸುಖ ವಿಚಾರಿಸಿ, ಅಗತ್ಯ ಕ್ರಮ ತೆಗೆದುಕೊಳ್ಳುತ್ತೇನೆ

ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ

2021-22ನೇ ಸಾಲಿಗೆ ಪೂರ್ಣ ಶುಲ್ಕ ಪಡೆಯಲು ತೀರ್ಮಾನಿಸಿದ್ದೇವೆ. ಶುಲ್ಕ ಕಡಿತಗೊಳಿಸಿ ಸರ್ಕಾರ ಆದೇಶ ಹೊರಡಿಸಿದರೆ ಮತ್ತೆ ನ್ಯಾಯಾಲಯದ ಮೆಟ್ಟಿಲೇರುತ್ತೇವೆ

ಡಿ. ಶಶಿಕುಮಾರ್, ಸಂಚಾಲಕ, ಖಾಸಗಿ ಶಾಲಾಡಳಿತ ಸಮನ್ವಯ ಸಮಿತಿ

ಪ್ರಜಾವಾಣಿ DH DECCAN HERALD

ಡಿಎಚ್–ಪಿವಿ ಕೋವಿಡ್–19 ಪರಿಹಾರ ಟ್ರಸ್ಟ್

ಡಿಎಚ್-ಪಿವಿ ಕೋವಿಡ್ ಪರಿಹಾರ ನಿಧಿಯಿಂದ ಎನ್‌ಜಿಒಗಳಿಗೆ ನೆರವು

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೋವಿಡ್ ಪರಿಹಾರ ಕಾರ್ಯ ಮತ್ತು ಜನರ ಜೀವನೋಪಾಯಕ್ಕೆ ನೆರವು ಕಲ್ಪಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಏಳು ಎನ್‌ಜಿಒಗಳಿಗೆ ಆರ್ಥಿಕ ನೆರವು ನೀಡಲು 'ಡೆಕ್ಕನ್ ಹೆರಾಲ್ಡ್ – ಪ್ರಜಾವಾಣಿ ಪರಿಹಾರ ಟ್ರಸ್ಟ್' ನಿರ್ಧರಿಸಿದೆ. ಈ ಉದ್ದೇಶಕ್ಕಾಗಿ ಡಿಎಚ್-ಪಿವಿ ಕೋವಿಡ್ ಪರಿಹಾರ ನಿಧಿಗೆ ನಮ್ಮ ಗೌರವಾನ್ವಿತ ಓದುಗರಿಂದ ದೇಣಿಗೆ ಸ್ವೀಕರಿಸಲಾಗಿದೆ. ಮೊದಲ ಹಂತದಲ್ಲಿ ಕೆಳಕಂಡ ಏಳು ಸಂಸ್ಥೆಗಳಿಗೆ ತಲಾ ₹ 5 ಲಕ್ಷ ನೆರವು ನೀಡಲಾಗುವುದು.

ಆ ಸಂಸ್ಥೆಗಳು:

1) ಇಂಡಿಯಾ ಕೇರ್ಸ್ ಫೌಂಡೇಷನ್ 2) ಸಹಯೋಗ್ 3) ರೈಟ್ ಟು ಲಿವ್ 4) ರೋಟರಿ ಬೆಂಗಳೂರು ಸೌತ್ ವೆಸ್ಟ್ ಚಾರಿಟಬಲ್ ಟ್ರಸ್ಟ್ 5) ರೋಟರಿ ಬೆಂಗಳೂರು ಲೇಕ್ ಸೈಡ್ 6) ಕಾಪುಚಿನ್ ಕೃಷಿಕ್ ಸೇವಾ ಕೇಂದ್ರ 7) ರೀಚ್

ಈ ಎನ್‌ಜಿಒಗಳ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪುಟ 9ರಲ್ಲಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಇನ್ನಷ್ಟು ಸಂಸ್ಥೆಗಳನ್ನು ಗುರುತಿಸಿ ಆರ್ಥಿಕ ನೆರವು ನೀಡಲಾಗುವುದು.

ಬಿಜೆಪಿ: ಇಬ್ಬಣಗಳ ಚಟುವಟಿಕೆ ಬಿರುಸು

ಬೆಂಗಳೂರು: ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಭೇಟಿ ನಿಗದಿಯಾಗುತ್ತಿದ್ದಂತೆಯೇ ರಾಜ್ಯ ಬಿಜೆಪಿಯಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪರ ಮತ್ತು ವಿರೋಧಿ ಬಣಗಳ ಚಟುವಟಿಕೆ ಮತ್ತಷ್ಟು ಬಿರುಸಾಗಿದೆ. ಇದೇ 16 ರಂದು ಅರುಣ್ ಸಿಂಗ್ ಬೆಂಗಳೂರಿಗೆ ಭೇಟಿ ನೀಡುವುದು ಶನಿವಾರವಷ್ಟೇ ಅಧಿಕೃತಗೊಂಡಿತ್ತು. 8

ಇಸ್ರೇಲ್ ನೂತನ ಪ್ರಧಾನಿ ನಫ್ತಾಲಿ

ಜೆರುಸಲೇಂ (ಪಿಟಿಐ): ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಭಾನುವಾರ ಪದಚ್ಯುತಗೊಳಿಸಲಾಗಿದ್ದು, ನಫ್ತಾಲಿ ಬೆನೆಟ್ ಅವರು ನೂತನ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದರು. 3

ಒಳ ಪುಟ

ಬಡ ರಾಷ್ಟ್ರಗಳಿಗೆ ಲಸಿಕೆ ಪೂರೈಕೆಗೆ ಸಂಕಲ್ಪ 8

ರಾಜ್ಯ ಕೋವಿಡ್ ಅಂಕಿ–ಅಂಶ

27,65,134 ಒಟ್ಟು ಸೋಂಕಿತರು (27,51,324 ನಿನ್ನೆಯ ವಿವರ)

1,80,835 ಸಕ್ರಿಯ ಪ್ರಕರಣಗಳು

25,51,365 ಗುಣಮುಖರಾದವರು

32,913 ಒಟ್ಟು ಸಾವು

ದಿನದ ಏರಿಕೆ	
ಹೊಸ ಪ್ರಕರಣ	7,810
ಗುಣಮುಖ	18,648
ಸಾವು	125

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

20 ಜಿಲ್ಲೆಗಳಲ್ಲಿ ಹಲವು ವಿನಾಯ್ತಿ • ನಗರಗಳತ್ತ ಮರು ವಲಸೆ ಸಾಧ್ಯತೆ

ಇಂದಿನಿಂದ ಲಾಕ್‌ಡೌನ್ ಭಾಗಶಃ ಸಡಿಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸೋಂಕಿನ ಕಡಿಮೆ ಪ್ರಕರಣಗಳಿರುವ ರಾಜ್ಯದ 20 ಜಿಲ್ಲೆಗಳಲ್ಲಿ ಸೋಮವಾರದಿಂದ ಲಾಕ್‌ಡೌನ್ ಭಾಗಶಃ ಸಡಿಲಿಕೆಯಾಗಲಿದೆ. ಕೋವಿಡ್ ಪ್ರಕರಣಗಳು ಹೆಚ್ಚಾಗಿರುವ 11 ಜಿಲ್ಲೆಗಳಲ್ಲಿ ಲಾಕ್‌ಡೌನ್‌ನ ಕಠಿಣ ನಿರ್ಬಂಧಗಳು ಯಥಾಸ್ಥಿತಿಯಲ್ಲಿ ಮುಂದುವರಿಯಲಿವೆ.

ಬೆಂಗಳೂರು ನಗರ ಸೇರಿದಂತೆ 20 ಜಿಲ್ಲೆಗಳಲ್ಲಿ ಸೋಮವಾರದಿಂದ ಹಲವು ಚಟುವಟಿಕೆಗಳಿಗೆ ಅವಕಾಶ ದೊರಕಲಿದೆ. ಈ ಕಾರಣದಿಂದ ಜಿಲ್ಲೆಗಳ ಮಧ್ಯೆ ಜನರ ಓಡಾಟ ಹೆಚ್ಚಲಿದ್ದು, ರಾಜ್ಯ ಸರ್ಕಾರದ ನಿರ್ಧಾರದಂತೆ ಲಾಕ್‌ಡೌನ್ ಸಡಿಲಿಕೆ ಮಾಡಲು ಈ ಎಲ್ಲ ಜಿಲ್ಲೆಗಳಲ್ಲೂ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಜಿಲ್ಲೆಗಳಲ್ಲಿ ರಾತ್ರಿ 7ರಿಂದ ಬೆಳಿಗ್ಗೆ 5ರವರೆಗೆ ರಾತ್ರಿ ಕರ್ಫ್ಯೂ ಇರಲಿದೆ. ಜೂನ್ 18ರ ರಾತ್ರಿ 7ರಿಂದ ಜೂನ್ 21ರ ಬೆಳಿಗ್ಗೆ 5ರವರೆಗೆ ವಾರಾಂತ್ಯದ ಕರ್ಫ್ಯೂ ಇರಲಿದೆ.

ಬದಲಾವಣೆ ಏನು?: 20 ಜಿಲ್ಲೆಗಳಲ್ಲಿ ದಿನಸಿ, ತರಕಾರಿ, ಮೀನು, ಮಾಂಸ ಸೇರಿದಂತೆ ಅಗತ್ಯ ವಸ್ತುಗಳ ಮಾರಾಟದ ಅವಧಿ ಬೆಳಿಗ್ಗೆ 6ರಿಂದ 10 ಗಂಟೆಯ ಬದಲಿಗೆ ಮಧ್ಯಾಹ್ನ 2ರವರೆಗೂ ವಿಸ್ತರಣೆ ಆಗಲಿದೆ. ಬೀದಿ ಬದಿ ವ್ಯಾಪಾರಿಗಳಿಗೂ ಈ ಅವಧಿ ಅನ್ವಯವಾಗಲಿದೆ. ಮದ್ಯ ಮಾರಾಟದ ಅವಧಿಯನ್ನೂ ಮಧ್ಯಾಹ್ನ 2ರವರೆಗೆ ವಿಸ್ತರಿಸಲಾಗಿದೆ.

ಮೇ 7ರ ಲಾಕ್‌ಡೌನ್ ಆದೇಶದಲ್ಲಿ ಅನುಮತಿಸಿದ್ದವರ ಜತೆಗೆ ಕೈಗಾರಿಕೆಗಳ ಶೇ 50ರಷ್ಟು ಮತ್ತು ಸಿದ್ಧ ಉಡುಪು ಕಾರ್ಖಾನೆಗಳ ಶೇ 30ರಷ್ಟು ಸಿಬ್ಬಂದಿಗೆ ಕೆಲಸಕ್ಕೆ ಹಾಜರಾಗಲು ಅವಕಾಶ ದೊರಕಲಿದೆ. ಆಟೊ ಮತ್ತು ಟ್ಯಾಕ್ಸಿ ಸೇವೆ ಲಭ್ಯವಿರಲಿದ್ದು, ಅನುಮತಿಸಿರುವ ಗುಂಪಿಗೆ ಸೇರಿದವರು ಬಳಸಿಕೊಳ್ಳಬಹುದು.

8ನೇ ಪುಟ ನೋಡಿ

11 ಜಿಲ್ಲೆಗಳಲ್ಲಿ ಬದಲಾವಣೆ ಇಲ್ಲ

ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಮೈಸೂರು, ಚಾಮರಾಜನಗರ, ಹಾಸನ, ದಕ್ಷಿಣ ಕನ್ನಡ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಬೆಳಗಾವಿ, ಕೊಡಗು ಜಿಲ್ಲೆಗಳಲ್ಲಿ ಇನ್ನೂ ಒಂದು ವಾರ ಕಾಲ ಲಾಕ್‌ಡೌನ್‌ನ ಕಠಿಣ ನಿಯಮಗಳು ಜಾರಿಯಲ್ಲಿ ಇರಲಿವೆ. ಕೋವಿಡ್ ಪಾಸಿಟಿವಿಟಿ ದರ ಶೇ 5ಕ್ಕಿಂತ ಕಡಿಮೆ ಆದರೆ ಆ ಜಿಲ್ಲೆಗಳಲ್ಲಿ ಜೂನ್ 21ರಿಂದ ಲಾಕ್‌ಡೌನ್ ಭಾಗಶಃ ಸಡಿಲಿಕೆ ಆಗುವ ಸಾಧ್ಯತೆ ಇದೆ.

ಸೇವೆಗೆ ಸಜ್ಜು

ಲಾಕ್‌ಡೌನ್ ನಿರ್ಬಂಧಗಳು ಸೋಮವಾರದಿಂದ ಸಡಿಲವಾಗುವ ಕಾರಣ ಬೆಂಗಳೂರಿನ ಗೋಪಾಲಪುರದಲ್ಲಿ ಆಟೊ ಚಾಲಕರು ಭಾನುವಾರ ಸಂಚಾರಕ್ಕಾಗಿ ಸಿದ್ಧತೆ ನಡೆಸಿದರು ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

'ಅಕ್ರಮ ವಲಸಿಗರನ್ನು ರಾಜ್ಯದಿಂದ ಹೊರಗೆ ಕಳುಹಿಸುವೆ'

ಶಿಕಾರಿಪುರ: ರಾಜ್ಯದ ಕೆಲ ಜಿಲ್ಲೆಗಳಲ್ಲಿ ಬಾಂಗ್ಲಾದ ಅಕ್ರಮ ವಲಸಿಗರು ನೆಲೆಸಿದ್ದು, ಇಂಥವರನ್ನು ರಾಜ್ಯದಿಂದ ಹೊರಕಳುಹಿಸುವ ಪ್ರಯತ್ನ ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

'ರಾಜ್ಯದಲ್ಲಿ ವಲಸಿಗರ ಸಂಖ್ಯೆ ಹೆಚ್ಚುತ್ತಿದೆ. ಅಕ್ರಮವಾಗಿ ಬಂದಿರುವ ಅನೇಕ ವಿದೇಶಿಗರು ಇಲ್ಲಿಯೇ ನೆಲೆಸಿರುವುದು ನನ್ನ ಗಮನಕ್ಕೆ ಬಂದಿದೆ' ಎಂದರು.

8ನೇ ಪುಟ ನೋಡಿ

ಇಂದಿನ ಪಾಡ್‌ಕಾಸ್ಟ್ ವಿಶೇಷ

ವಚನವಾಣಿ

ಪ್ರತಿ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಅಪಘಾತ: ನಟ ಸಂಚಾರಿ ವಿಜಯ್ ಸ್ಥಿತಿ ಗಂಭೀರ

ಬೆಂಗಳೂರು: ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಟ ಸಂಚಾರಿ ವಿಜಯ್ ಅವರು ಜೆ.ಪಿ. ನಗರದ 7ನೇ ಹಂತದಲ್ಲಿ ಶನಿವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದು, ಅವರನ್ನು ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಮಿದುಳಿಗೆ ಬಲವಾದ ಪೆಟ್ಟುಬಿದ್ದಿದ್ದು, ಕೋಮಾ ಸ್ಥಿತಿಯಲ್ಲಿರುವ ಅವರ ಆರೋಗ್ಯ ತೀರಾ ಗಂಭೀರವಾಗಿದೆ ಎಂದು ಆಸ್ಪತ್ರೆಯ ತಿಳಿಸಿದೆ.

ಸಂಚಾರಿ ವಿಜಯ್

'ಸ್ನೇಹಿತ ನವೀನ್ ಜೊತೆಯಲ್ಲಿ ರಾತ್ರಿ 11.45ರ ಸುಮಾರಿಗೆ ಬೈಕ್‌ನಲ್ಲಿ ವಿಜಯ್ ಹೊರಟಿದ್ದಾಗಲೇ ಈ ಅಪಘಾತ ಸಂಭವಿಸಿದೆ. ವಿಜಯ್ ತಲೆ ಹಾಗೂ ತೊಡೆಗೆ ತೀವ್ರ ಪೆಟ್ಟು ಬಿದ್ದಿದೆ. ನವೀನ್ ಅವರ ಬೆನ್ನು ಮೂಳೆಗೆ ಪೆಟ್ಟಾಗಿದೆ. ಇಬ್ಬರನ್ನೂ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಜಯನಗರ ಸಂಚಾರ ಠಾಣೆ ಪೊಲೀಸರು ಹೇಳಿದರು.

'ನವೀನ್ ಅವರೇ ಬೈಕ್ ಓಡಿಸುತ್ತಿದ್ದರು. ಹಿಂಬದಿಯಲ್ಲಿ ವಿಜಯ್ ಕುಳಿತಿದ್ದರು. ಸವಾರನ ನಿಯಂತ್ರಣ ತಪ್ಪಿ ಬೈಕ್ ಉರುಳಿಬಿದ್ದಿತ್ತು. ರಸ್ತೆಗೆ ಉಜ್ಜಿಕೊಂಡು ಹೋಗಿ ಪಕ್ಕದ ವಿದ್ಯುತ್ ಕಂಬಕ್ಕೆ ಗುದ್ದಿತ್ತು ಎಂಬುದಾಗಿ ಗೊತ್ತಾಗಿದೆ.'

'ರಸ್ತೆಯಲ್ಲೇ ಬಿದ್ದು ನರಳಿದ್ದ ವಿಜಯ್, ಸ್ಥಳದಲ್ಲೇ ಪ್ರಜ್ಞೆ ತಪ್ಪಿದರು. ನರಳುತ್ತ ಬಿದ್ದಿದ್ದ ನವೀನ್ ಅವರೇ ಕರೆ ಮಾಡಿ ಸ್ನೇಹಿತರಿಗೆ ವಿಷಯ ತಿಳಿಸಿದ್ದರು. ಸ್ಥಳಕ್ಕೆ ಬಂದ ಸ್ನೇಹಿತರು, ಅವರಿಬ್ಬರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ' ಎಂದೂ ಪೊಲೀಸರು ತಿಳಿಸಿದರು.

9ನೇ ಪುಟ ನೋಡಿ

ರಾಯ್ ಡಿಸೋಜಾ ಸಾವಿನ ಪ್ರಕರಣ: ಪೊಲೀಸರ ವಿಚಾರಣೆ

ಮಡಿಕೇರಿ/ವಿರಾಜಪೇಟೆ: ಪೊಲೀಸರ ಅಮಾನುಷ ಹಲ್ಲೆಯಿಂದ ಮೃತಪಟ್ಟ ಪಟ್ಟಣದ ರಾಯ್ ಡಿಸೋಜಾ ಸಾವಿನ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದ್ದು, ಪೊಲೀಸ್ ಸಿಬ್ಬಂದಿಯ ವಿಚಾರಣೆ ಭಾನುವಾರ ನಡೆಯಿತು.

ರಾಯ್ ಡಿಸೋಜಾ

ಡಿವೈಎಸ್‌ಪಿ ದರ್ಜೆಯ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ನಾಲ್ವರು ಸಿಐಡಿ ಅಧಿಕಾರಿಗಳು ವಿರಾಜಪೇಟೆಗೆ ಬಂದಿದ್ದು ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಕಲೆ ಹಾಕಿದರು.

ಪ್ರಕರಣದಲ್ಲಿ ಅಮಾನತುಗೊಂಡಿರುವ ಪೊಲೀಸ್ ಸಿಬ್ಬಂದಿಯಾದ ನೆಹರು, ಎ.ಎಸ್.ಐ.ಸುನೀಲ್, ರಮೇಶ್, ಪ್ರದೀಪ್, ಲೋಕೇಶ್, ತನುಕುಮಾರ್, ಎಎಸ್.ಐ.ಸುನೀಲ್ ಹಾಗೂ ಸತೀಶ್ ಅವರನ್ನು ವಿಚಾರಣೆಗೆ ಒಳಪಡಿಸಲಾಯಿತು. ಘಟನೆ ನಡೆದ ಸ್ಥಳದಲ್ಲಿ ಮಹಜರು ನಡೆಸಿದರು. ಡಿವೈಎಸ್‌ಪಿ ಜಯಕುಮಾರ್ ಅವರು ಎಸ್‌ಪಿಗೆ ಸಲ್ಲಿಸಿದ್ದ ಪ್ರಾಥಮಿಕ ವರದಿಯನ್ನೂ ಸಿಐಡಿ ತಂಡವು ಪಡೆದುಕೊಂಡಿತು.

'ಇನ್ನೂ ಎರಡು ದಿನ ತನಿಖೆ ನಡೆಯಲಿದ್ದು, ರಾಯ್ ಅವರ ಕುಟುಂಬಸ್ಥರು ಹಾಗೂ ಕ್ರೈಸ್ತ ಧರ್ಮದ ಮುಖಂಡರಿಂದ ತಂಡವು ಮಾಹಿತಿ ಪಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ರಾಯ್ ಡಿಸೋಜಾ ಅವರ ಅಂತ್ಯಕ್ರಿಯೆ ಸೇಂಟ್ ಅನ್ನಮ್ಮ ದೇವಾಲಯಕ್ಕೆ ಸೇರಿದ ರುದ್ರಭೂಮಿಯಲ್ಲಿ ನೆರವೇರಿತು.

8ನೇ ಪುಟ ನೋಡಿ

ಯಲ್ಲಾಪುರ ತಾಲ್ಲೂಕಿನ ಕುಂಬ್ರಾಳ: ಲಾಕ್‌ಡೌನ್ ಸಂದರ್ಭದಲ್ಲಿ ಕಾಮಗಾರಿ

ಜಲಪಾತದ ದಾರಿಗಾಗಿ ಮರಗಳ ಹನನ

ಪ್ರಜಾವಾಣಿ ವಾರ್ತೆ

ಯಲ್ಲಾಪುರ (ಉತ್ತರ ಕನ್ನಡ): ಲಾಕ್‌ಡೌನ್ ಸಂದರ್ಭದಲ್ಲಿ ತಾಲ್ಲೂಕಿನ ಕುಂಬ್ರಾಳದ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿರುವ ನೂರಾರು ಮರಗಳ ಹನನ ಮಾಡಿ ಜಲಪಾತಕ್ಕೆ ರಸ್ತೆ ನಿರ್ಮಿಸಲಾಗಿದೆ. ಅರಣ್ಯ ಇಲಾಖೆಯವರು ಈ ಮೊದಲೇ ನೀಡಿದ್ದ ಎಚ್ಚರಿಕೆಯನ್ನೂ ಕಡೆಗಣಿಸಿ ರಾತ್ರಿ ಕಾಮಗಾರಿ ನಡೆಸಲಾಗಿದೆ.

ಒಂದು ಕಿಮೀ ಉದ್ದದ ಈ ರಸ್ತೆಯನ್ನು ದೇಹಳ್ಳಿ ಗ್ರಾಮ ಪಂಚಾಯಿತಿಯು ನಿರ್ಮಿಸಿದ್ದು, ಶಿವಪುರದ ತೂಗುಸೇತುವೆ ಪಕ್ಕದಿಂದ ಸಾಗುತ್ತದೆ. ಕಾಮಗಾರಿಗಾಗಿ ಸೀಸಂ, ಸಾಗವಾನಿಯಂಥ ಬೆಲೆ ಬಾಳುವ ಮರಗಳನ್ನು ಉರುಳಿಸಲಾಗಿದೆ. ಒಂದಷ್ಟು ಮರಗಳು ಮಣ್ಣಿನಡಿ ಹೂತು ಹೋಗಿವೆ. ಕೆಲವು ಕಾಳಿ ನದಿಯ ಹಿನ್ನೀರಿನ ಪಾಲಾಗಿವೆ. ಇನ್ನೂ ಕೆಲವು ಹೊಸ ರಸ್ತೆಯ ಪಕ್ಕದಲ್ಲಿ ಬಿದ್ದಿವೆ. ಅಂದಾಜು 500 ಮರಗಳು ನಾಶವಾಗಿವೆ. ಹೊಸ ರಸ್ತೆಯ ಎಡಭಾಗದ ಗುಡ್ಡದ ಮಣ್ಣು ಸಡಿಲವಾಗಿದ್ದು, ಅಲ್ಲಿರುವ ಮರಗಳೂ ಮಳೆಗಾಲದಲ್ಲಿ ನೆಲಕ್ಕುರುಳುವ ಸಾಧ್ಯತೆಯಿದೆ.

'ನಮ್ಮ ಭಾಗದ ಅರಣ್ಯದಲ್ಲಿ ಬೇಸಿಗೆಯಲ್ಲಿ ಬತ್ತುವ ಇಂತಹ ಹಲವು ಜಲಪಾತಗಳಿವೆ. ಎಲ್ಲವಕ್ಕೂ ರಸ್ತೆ ನಿರ್ಮಿಸಲು ಹೊರಟರೆ ಕಾಡು ಸಂಪೂರ್ಣ ನಾಶವಾಗುತ್ತದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಗ್ರಾಮಸ್ಥರು ಹಾಗೂ ಗ್ರಾಮ ಅರಣ್ಯ ಸಮಿತಿಯ ಮಾಜಿ ಅಧ್ಯಕ್ಷ ಮಂಜುನಾಥ ಮೆಣಸುಮನೆ ಆಗ್ರಹಿಸಿದ್ದಾರೆ.

ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ರಸ್ತೆಗೆ ಅಡ್ಡಲಾಗಿ ಅಗಳ ತೆಗೆದು ಕಾಮಗಾರಿ ನಡೆದ ಸ್ಥಳದಲ್ಲಿ ಗಿಡ ನೆಡಲಾಗುತ್ತಿದೆ

ಗೋಪಾಲಕೃಷ್ಣ ಹೆಗಡೆ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ

ಕುಂಬ್ರಾಳದಲ್ಲಿರುವ ಜಲಪಾತಕ್ಕೆ ಕಾಡಿನ ಮಧ್ಯೆ ಮರಗಳನ್ನು ಕಡಿದು ರಸ್ತೆ ನಿರ್ಮಿಸಿರುವುದು (ಎಡಚಿತ್ರ) ರಸ್ತೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಗಿಡಗಳನ್ನು ನೆಟ್ಟರು

'ಅನುಮತಿ ಪಡೆದಿಲ್ಲ'

ಈ ರಸ್ತೆಯನ್ನು ಗ್ರಾಮ ಪಂಚಾಯಿತಿಯವರು ಅನುಮತಿ ಪಡೆಯದೇ ನಿರ್ಮಿಸಿದ್ದಾರೆ ಎಂಬುದು ಅರಣ್ಯ ಇಲಾಖೆಯ ಅಧಿಕಾರಿಗಳ ಆರೋಪವಾಗಿದೆ.

'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ವಲಯ ಅರಣ್ಯ ಅಧಿಕಾರಿ ಬಾಲಸುಬ್ರಹ್ಮಣ್ಯ, 'ಒಂದು ತಿಂಗಳ ಹಿಂದೆಯೇ ರಸ್ತೆ ನಿರ್ಮಿಸುತ್ತಿರುವುದು ಗಮನಕ್ಕೆ ಬಂದಿತ್ತು. ಆಗ ಎಚ್ಚರಿಕೆ ನೀಡಿ, ಕೆಲಸ ನಿಲ್ಲಿಸಿ ಮಣ್ಣಿನ ಬೇಲಿ ಹಾಕಿ ರಸ್ತೆಯನ್ನು ಮುಚ್ಚಲಾಗಿತ್ತು. ಆದರೆ, ಈ ಲಾಕ್‌ಡೌನ್ ಅವಧಿಯಲ್ಲಿ ಅದನ್ನು ಕಿತ್ತೆಸೆದು ರಾತ್ರಿ ವೇಳೆ ಕಾಮಗಾರಿ ನಡೆಸಿದ್ದಾರೆ. ಹಾಗಾಗಿ ಅರಣ್ಯ ಇಲಾಖೆಯ ಗಮನಕ್ಕೆ ಬಂದಿರಲಿಲ್ಲ' ಎಂದು ತಿಳಿಸಿದ್ದಾರೆ.

'ಅನುಮತಿ ಬೇಕಿಲ್ಲ'

'ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿಗೆ ಅನುಮತಿ ಪಡೆಯಬೇಕಿಲ್ಲ' ಎಂಬುದು ದೇಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ರೀಪತಿ ಮುದ್ದೇಪಾಲ ಅವರ ವಾದವಾಗಿದೆ. 'ಜಲಪಾತವನ್ನು ಪ್ರವಾಸಿ ತಾಣವಾಗಿ ಮಾಡಲು ಈ ಮೊದಲಿದ್ದ ಕಾಲುದಾರಿಯನ್ನು ಅಭಿವೃದ್ಧಿ ಮಾಡಲಾಗುತ್ತಿದೆ. ಐದಾರು ಸಣ್ಣಪುಟ್ಟ ಮರಗಳನ್ನಷ್ಟೇ ತೆರವು ಮಾಡಲಾಗಿದೆ. ಗ್ರಾಮ ಪಂಚಾಯಿತಿ ವಿರುದ್ಧ ರಾಜಕೀಯ ಪ್ರೇರಿತವಾಗಿ ವೃಥಾ ಆರೋಪಿಸಲಾಗುತ್ತಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಕಾಯಿಲೆ ನಿಯಂತ್ರಣಕ್ಕೆ ಬಂದರೂ ಹೆಚ್ಚಿನ ಸಂಖ್ಯೆಯ ಪರೀಕ್ಷೆಗೆ ತಜ್ಞರ ಸಲಹೆ

ಕೋವಿಡ್: ಸೋಂಕು ಇಳಿಕೆ ಬಳಿಕ ಪರೀಕ್ಷೆ ಏರಿಕೆ!

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕು ದೃಢ ಪ್ರಮಾಣವು ಶೇ 40ರ ಗಡಿಯ ಆಸುಪಾಸಿನಲ್ಲಿದ್ದ ಅವಧಿಯಲ್ಲಿ ಪರೀಕ್ಷೆಗಳ ಸಂಖ್ಯೆಯನ್ನು ಇಳಿಕೆ ಮಾಡಿದ್ದ ಸರ್ಕಾರ, ಈಗ ದೃಢ ಪ್ರಮಾಣವು ಶೇ 5ರ ಆಸುಪಾಸಿಗೆ ಬರುತ್ತಿದ್ದಂತೆ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಳ ಮಾಡಿದೆ.

'ದೃಢ ಪ್ರಮಾಣವು ಗರಿಷ್ಠ ಮಟ್ಟಕ್ಕೆ ತಲುಪಿದಾಗ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಳ ಮಾಡಿದ್ದಲ್ಲಿ ಇನ್ನಷ್ಟು ಪ್ರಕರಣಗಳು ವರದಿಯಾಗುವ ಸಾಧ್ಯತೆಯಿತ್ತು' ಎಂದು ಕಳವಳ ವ್ಯಕ್ತಪಡಿಸಿರುವ ವೈದ್ಯಕೀಯ ತಜ್ಞರು, 'ಕಾಯಿಲೆ ನಿಯಂತ್ರಣಕ್ಕೆ ಬಂದರೂ ಪರೀಕ್ಷೆಗಳ ಸಂಖ್ಯೆಯನ್ನು ಇಳಿಕೆ ಮಾಡಬಾರದು' ಎಂದು ಸಲಹೆ ನೀಡಿದ್ದಾರೆ.

ಕಳೆದ ವರ್ಷಾಂತ್ಯಕ್ಕೆ ಎರಡನೇ ಅಲೆಯ ಎಚ್ಚರಿಕೆ ನೀಡಿದ್ದ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ತಜ್ಞರು, ಪ್ರತಿನಿತ್ಯ ಸರಾಸರಿ 1.50 ಲಕ್ಷ ಪರೀಕ್ಷೆಗಳನ್ನು ನಡೆಸಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು.

ಮಾರ್ಚ್ ತಿಂಗಳಲ್ಲಿ ಹೊಸ ಪ್ರಕರಣ ಗಳು ಏರಿಕೆ ಕಂಡ ಕಾರಣ ಕೆಲ ದಿನಗಳು ಲಕ್ಷಕ್ಕೂ ಅಧಿಕ ಪರೀಕ್ಷೆಗಳನ್ನು ನಡೆಸಲಾಗಿತ್ತು. ಆಗ ಸೋಂಕು ದೃಢ ಪ್ರಮಾಣವು ಶೇ 5ರ ಗಡಿಯೊಳಗೇ ಇತ್ತು. ಏಪ್ರಿಲ್ ಎರಡನೇ ವಾರದ ಬಳಿಕ ಸೋಂಕು ದೃಢ ಪ್ರಮಾಣವು ಏರುಗತಿ ಪಡೆದು, ಕಡೆಯ ವಾರದಲ್ಲಿ ಶೇ 25ರ ಗಡಿ ದಾಟಿತ್ತು. ಹೊಸ ಪ್ರಕರಣಗಳ ಸಂಖ್ಯೆ 50 ಸಾವಿರದ ಗಡಿಯ ಆಸುಪಾಸಿಗೆ ತಲುಪಿತ್ತು. ಆ ವೇಳೆ ಪರೀಕ್ಷೆಗಳ ಸಂಖ್ಯೆಯು 1.90 ಲಕ್ಷಕ್ಕೆ ಏರಿಕೆಯಾಗಿತ್ತು.

ಕೊರೊನಾ ಸೋಂಕು ದೃಢ ಪ್ರಮಾಣ ಇಳಿಕೆ ಕಂಡರೂ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗಳನ್ನು ನಡೆಸಬೇಕು. ಆಗ ನಮ್ಮ ನಡುವೆ ಇರುವ ಸೋಂಕಿತರನ್ನು ಪತ್ತೆ ಮಾಡಲು ಸಾಧ್ಯವಾಗುತ್ತದೆ

ಡಾ.ಸಿ.ಎನ್. ಮಂಜುನಾಥ್, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಸೋಂಕು ದೃಢ ಪ್ರಮಾಣವು ಏರಿಕೆ ಕಂಡಾಗ ಲಕ್ಷಣಗಳು ಇದ್ದವರಿಗೆ ಪರೀಕ್ಷೆ ನಡೆಸಲಾಗುತ್ತಿತ್ತು. ಈಗ ಆ ಪ್ರಮಾಣ ಇಳಿಕೆಯಾಗಿರುವ ಕಾರಣ ಎಲ್ಲರಿಗೂ ಪರೀಕ್ಷೆ ನಡೆಸಬೇಕಾಗುತ್ತದೆ

ಡಾ. ಯೋಗಾನಂದ ರೆಡ್ಡಿ, ಸಂಭಾವ್ಯ ಮೂರನೇ ಅಲೆ ತಜ್ಞರ ಸಮಿತಿ ಸದಸ್ಯ

ಪ್ರಜಾವಾಣಿ ವಿಶೇಷ

ಮೇ ಮೊದಲ ವಾರದಲ್ಲಿ ಸೋಂಕು ದೃಢ ಪ್ರಮಾಣವು ಶೇ 30 ರ ಗಡಿ ದಾಟಿದ ಪರಿಣಾಮ ಎರಡನೇ ವಾರದವರೆಗೂ ಬಹುತೇಕ ದಿನ 1.50 ಲಕ್ಷಕ್ಕೂ ಅಧಿಕ ಪರೀಕ್ಷೆಗಳನ್ನು ನಡೆಸಲಾಗಿತ್ತು. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಕೂಡ ಪತ್ತೆಯಾಗಿದ್ದವು. ದೃಢ ಪ್ರಮಾಣವು ಶೇ 40ರ ಗಡಿಯತ್ತ ಹೋದಾಗ ಪರೀಕ್ಷೆಗಳ ಸಂಖ್ಯೆಯನ್ನು 93 ಸಾವಿರಕ್ಕೆ ಇಳಿಕೆ ಮಾಡಲಾಯಿತು.



ಈಗ ಶೇ 10ರೊಳಗಡೆ ದೃಢ ಪ್ರಮಾಣವಿದ್ದು, ಪರೀಕ್ಷೆಗಳ ಸಂಖ್ಯೆ 1.60 ಲಕ್ಷದತ್ತ ಏರಿಕೆ ಕಂಡಿದೆ.

ಹೆಚ್ಚಿನ ಪರೀಕ್ಷೆ ಅಗತ್ಯ: 'ಸೋಂಕು ದೃಢ ಪ್ರಮಾಣವು ಶೇ 5ರ ಗಡಿಯ ಒಳಗಡೆ ಇದ್ದಲ್ಲಿ ಕಾಯಿಲೆ ನಿಯಂತ್ರಣಕ್ಕೆ ಬಂದಿದೆ ಎಂದು ಪರಿಗಣಿಸ ಬಹುದು. ಕಾಯಿಲೆಯನ್ನು ಎದುರಿಸಲು ಪರೀಕ್ಷೆ ಮತ್ತು ಸಂಪರ್ಕ ಪತ್ತೆ ಸಹಕಾರಿ. ಈಗ ಸೋಂಕಿತರನ್ನು ಪತ್ತೆ ಮಾಡಲು ಅಧಿಕ ಸಂಖ್ಯೆಯಲ್ಲಿ ಪರೀಕ್ಷೆಗಳನ್ನು ನಡೆಸಬೇಕಿದೆ. ಪ್ರಕರಣಗಳು ಇಳಿಕೆಯಾಗುತ್ತಿದೆ ಎಂಬ ಕಾರಣಕ್ಕೆ ಪರೀಕ್ಷೆಗಳ ಸಂಖ್ಯೆಯನ್ನು ಕಡಿಮೆ ಮಾಡಬಾರದು' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ತಜ್ಞರು ತಿಳಿಸಿದ್ದಾರೆ.

'ಲಾಕ್‌ಡೌನ್ ಸೇರಿದಂತೆ ವಿವಿಧ ಕಾರಣಗಳಿಂದ ಸೋಂಕು ದೃಢ ಪ್ರಮಾಣ ಅಧಿಕವಿರುವ ಕೆಲವು ದಿನ ಪರೀಕ್ಷೆಗಳ ಸಂಖ್ಯೆ ಇಳಿಕೆ ಕಂಡಿತು. ಜನತೆ ಕೂಡ ಪರೀಕ್ಷೆ ಮಾಡಿಸಿಕೊಳ್ಳಲು ಮುಂದೆ ಬರುತ್ತಿರಲಿಲ್ಲ. ಪರೀಕ್ಷೆ ವರದಿ ವಿಳಂಬವಾಗಕೂಡದು ಎಂಬ ಕಾರಣಕ್ಕೆ ಸಹ ಲಕ್ಷಣ ಇದ್ದವರಿಗೆ ಮಾತ್ರ ಪರೀಕ್ಷೆ ನಡೆಸಲಾಗುತ್ತಿತ್ತು. ಈಗ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗಳನ್ನು ಮಾಡಲಾಗುತ್ತಿದೆ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

11,96,688 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
85,995 ▲	10,95,385 ▲	15,307 ▲

ಭಾನುವಾರದ ಏರಿಕೆ

ಹೊಸ ಪ್ರಕರಣ	1,348 ▼
ಗುಣಮುಖ	4,125 ▼
ಸಾವು	23 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಸುದ್ದಿ 2 ನಿಮಿಷ

ಬೆಂಗಳೂರಿಗೆ ಬರುವವರಿಗೆ ಕೋವಿಡ್ ತಪಾಸಣೆ:ಬಿಎಸ್‌ವೈ

ಬೆಂಗಳೂರು: 'ಲಾಕ್‌ಡೌನ್ ಪ್ರಕ್ರಿಯೆ ಆರಂಭಗೊಳ್ಳುತ್ತಿದ್ದಂತೆ ಬೆಂಗಳೂರಿಗೆ ವಾಪಸಾಗುವವರಿಗೆ ಕೋವಿಡ್ ತಪಾಸಣೆ ನಡೆಸುವ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಹಾಸನ, ಶಿವಮೊಗ್ಗ ಜಿಲ್ಲಾ ಪ್ರವಾಸ ಮುಗಿಸಿ ಬಂದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಲಾಕ್‌ಡೌನ್ ತೆರವುಗೊಂಡ ಬಳಿಕ ಬೆಂಗಳೂರಿಗೆ ಬರುವವರ ಸಂಖ್ಯೆ ಹೆಚ್ಚಳವಾಗಲಿದೆ. ಸೋಂಕು ಹರಡುವ ಸಾಧ್ಯತೆಯೂ ಇದೆ. ಹೀಗಾಗಿ, ಅಧಿಕಾರಿಗಳ ಜೊತೆ ಮಾತನಾಡಿ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಹೇಳಿದರು.

ವಾರಕ್ಕೊಮ್ಮೆ ಜಿಲ್ಲಾ ಪ್ರವಾಸ: 'ವಾರದಲ್ಲಿ ಒಮ್ಮೆಯಾದರೂ ಜಿಲ್ಲೆಗಳಿಗೆ ತೆರಳಿ ಕೋವಿಡ್ ನಿರ್ವಹಣೆ, ಅಭಿವೃದ್ಧಿ ಕಾರ್ಯದ ಪರಿಶೀಲನೆ ನಡೆಸು ತ್ತೇನೆ. ಇದರಿಂದ ಜಿಲ್ಲೆಗಳಲ್ಲಿನ ವಾಸ್ತವ ಸ್ಥಿತಿ ತಿಳಿಯಲು ಅವಕಾಶವಾಗಲಿದೆ' ಎಂದರು.

'ನಗರಕ್ಕೆ ಬರಲು ಕೋವಿಡ್ ಪರೀಕ್ಷಾ ವರದಿ ಕಡ್ಡಾಯವೇನಲ್ಲ'

ಬೆಂಗಳೂರು: ನಗರದಲ್ಲೂ ಸೋಮವಾರದಿಂದ ಲಾಕ್‌ಡೌನ್ ಭಾಗಶಃ ತೆರವಾಗಲಿದೆ. ಹೊರ ಜಿಲ್ಲೆಗಳಿಂದ ಹಾಗೂ ಹೊರರಾಜ್ಯಗಳಿಂದ ಬರುವವರು ತಮಗೆ ಕೋವಿಡ್ ಸೋಂಕು ಇಲ್ಲ ಎಂಬುದನ್ನು ದೃಢಪಡಿಸುವ ಪರೀಕ್ಷಾ ವರದಿಯನ್ನು ಹೊಂದಿರುವುದು ಕಡ್ಡಾಯವೇನಿಲ್ಲ ಎಂದು ಬಿಬಿಎಂಪಿ ಹೇಳಿದೆ.

ನಗರಕ್ಕೆ ಹೆಚ್ಚಿನ ಜನರು ಮರಳುವುದರಿಂದ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಹಾಗೂ ಕೋವಿಡ್ ನಿಯಂತ್ರಣ ನಿಯಮಗಳು ಕಡ್ಡಾಯವಾಗಿ ಪಾಲನೆ ಆಗುತ್ತಿರುವ ಬಗ್ಗೆ ಹೆಚ್ಚಿನ ನಿಗಾ ಇಡುವುದಕ್ಕೆ ಸಿದ್ಧತೆ ಮಾಡಿಕೊಂಡಿದೆ.

'ನಗರಕ್ಕೆ ಬರುವವರು ಕೋವಿಡ್ ಪರೀಕ್ಷೆಯಲ್ಲಿ ಸೋಂಕು ಇಲ್ಲ ಎಂದು ದೃಢಪಟ್ಟ ವರದಿಯನ್ನು ತಮ್ಮ ಜೊತೆ ಹೊಂದಿರಬೇಕು ಎಂದು ಕಡ್ಡಾಯ ಮಾಡಿಲ್ಲ. ಆದರೆ, ರೈಲ್ವೆ ನಿಲ್ದಾಣಗಳು, ಬಸ್‌ನಿಲ್ದಾಣಗಳು ಹಾಗೂ ವಿಮಾನ ನಿಲ್ದಾಣದಲ್ಲಿ ಕೆಲವು ಪ್ರಯಾಣಿಕರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಮಾರುಕಟ್ಟೆಗಳು ಬಂದ್: 'ಕೆ.ಆರ್.ಮಾರುಕಟ್ಟೆಯೂ ಸೇರಿದಂತೆ ಹೆಚ್ಚು ಜನ ಸಂದಣಿಗೆ ಕಾರಣವಾಗುವ ಪ್ರಮುಖ ಮಾರುಕಟ್ಟೆಗಳು ಮುಚ್ಚಿರಲಿವೆ. ಸಾರ್ವಜನಿಕ ಪ್ರದೇಶದಲ್ಲಿ ಓಡಾಡುವವರು ಮಾಸ್ಕ್ ಧರಿಸುವುದು ಹಾಗೂ ಪರಸ್ಪರ ಅಂತರ ಕಾಪಾಡುವುದು ಕಡ್ಡಾಯ' ಎಂದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.65 ಕೋಟಿ ▲	2.95 ಕೋಟಿ ▲
ಸಕ್ರಿಯ ಪ್ರಕರಣ	1.21 ಕೋಟಿ ▼	9.74 ಲಕ್ಷ ▼
ಗುಣಮುಖ	16.06 ಕೋಟಿ ▲	2.81 ಕೋಟಿ ▲
ಸಾವು	38.16 ಲಕ್ಷ ▼	3.74 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.72 ಲಕ್ಷ ▼	67,252 ▼
ಗುಣಮುಖ	4.34 ಲಕ್ಷ ▼	1.10 ಲಕ್ಷ ▼
ಸಾವು	10,027 ▼	3,819 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 75,778 ▼ ಬ್ರೆಜಿಲ್; 29,998 ▲ ಕೊಲಂಬಿಯಾ; 18,057 ▼ ಅರ್ಜೆಂಟಿನಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 53.19 ▼ ಅಮೆರಿಕ; 11.29 ▲ ಬ್ರೆಜಿಲ್; 3.30 ▼ ಅರ್ಜೆಂಟಿನಾ

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 1.11 ಲಕ್ಷ ಮಹಾರಾಷ್ಟ್ರ ▲; 29,547 ತಮಿಳುನಾಡು ▲; 24,823 ದೆಹಲಿ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 58.98 ಮಹಾರಾಷ್ಟ್ರ ▲; 27.28 ಕೇರಳ ▲; 23.53 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಗರ್ಭಿಣಿಯರ ಚಿಕಿತ್ಸೆಗೆ ಮೀಸಲಾದ ಘೋಷಾ ಆಸ್ಪತ್ರೆ ವೈದ್ಯರ ಸಾಧನೆ

ಕೋವಿಡ್: 300 ಸೋಂಕಿತರಿಗೆ ಹೆರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸರ್ಕಾರಿ ಎಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆಯ ವೈದ್ಯರು 78 ದಿನಗಳಲ್ಲಿ ಕೊರೊನಾ ಸೋಂಕಿತ 300 ಗರ್ಭಿಣಿಯರಿಗೆ ಯಶಸ್ವಿಯಾಗಿ ಹೆರಿಗೆಗಳನ್ನು ಮಾಡಿಸಿದ್ದಾರೆ.

ಕೆಲ ದಿನಗಳಿಂದ ಕೋವಿಡ್ ಪೀಡಿತ ಗರ್ಭಿಣಿಯರಿಗೆ ಚಿಕಿತ್ಸೆ ಒದಗಿಸುತ್ತಿರುವ ಅಲ್ಲಿನ ವೈದ್ಯರು, ಶನಿವಾರ 300ನೇ ಹೆರಿಗೆಯನ್ನು ಮಾಡಿಸಿದ್ದಾರೆ. ಇದರೊಂದಿಗೆ ವೈದ್ಯರು ಹಾಗೂ ಶುಶ್ರೂಷಕರು ಸಂಭ್ರಮಿಸಿದ್ದು, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅವರು ಈ ಕಾರ್ಯಕ್ಕೆ ಶುಭಹಾರೈಸಿದ್ದಾರೆ.

ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಈ ಆಸ್ಪತ್ರೆಯಲ್ಲಿ ಮಾರ್ಚ್ 27ರಿಂದ ಕೋವಿಡ್ ಪೀಡಿತ ಗರ್ಭಿಣಿಯರಿಗೆ ಸೇವೆ ಪ್ರಾರಂಭಿಸಲಾಗಿದೆ. ಅಲ್ಲಿ 70 ಹಾಸಿಗೆಗಳಿದ್ದು, ತಜ್ಞ ವೈದ್ಯರ ಜತೆಗೆ ವೈದ್ಯಕೀಯ ವಿದ್ಯಾರ್ಥಿಗಳು ಕೂಡ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನ ಆಸ್ಪತ್ರೆಗಳ ಜತೆಗೆ ಸುತ್ತಮುತ್ತಲಿನ ಜಿಲ್ಲೆಗಳ ಆಸ್ಪತ್ರೆಗಳಿಂದ ಕೂಡ ಕೋವಿಡ್ ಪೀಡಿತ ಗರ್ಭಿಣಿಯರನ್ನು ಶಿಫಾರಸು ಆಧಾರದಲ್ಲಿ ಇಲ್ಲಿಗೆ ಕಳುಹಿಸಲಾಗುತ್ತಿದೆ.

ಕೋವಿಡ್ ಪೀಡಿತ 300 ಗರ್ಭಿಣಿಯರಿಗೆ ಹೆರಿಗೆ ಮಾಡಿಸಿದ ವೈದ್ಯರು ಹಾಗೂ ಶುಶ್ರೂಷಕರ ತಂಡ

141 ಗರ್ಭಿಣಿಯರಿಗೆ ಸಹಜ ಹೆರಿಗೆ

ಆಸ್ಪತ್ರೆಯಲ್ಲಿ ಈವರೆಗೆ ಕೋವಿಡ್ ಪೀಡಿತ 554 ಗರ್ಭಿಣಿಯರು ದಾಖಲಾಗಿದ್ದಾರೆ. ಸದ್ಯ 15 ಮಂದಿ ಕೋವಿಡ್ ಪೀಡಿತ ಗರ್ಭಿಣಿಯರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಯಶಸ್ವಿ 300 ಹೆರಿಗೆಗಳಲ್ಲಿ 159 ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. 141 ಮಂದಿಗೆ ಸಹಜ ಹೆರಿಗೆ ಮಾಡಿಸಲಾಗಿದೆ.

28 ಗರ್ಭಿಣಿಯರು ಸಾವು: ಈವರೆಗೆ ಆಸ್ಪತ್ರೆಗೆ ದಾಖಲಾದ ಕೋವಿಡ್ ಪೀಡಿತ ಗರ್ಭಿಣಿಯರಲ್ಲಿ 28 ಮಂದಿ ಚಿಕಿತ್ಸೆಗೆ ಸ್ಪಂದಿಸದೆಯೇ ಮೃತಪಟ್ಟಿದ್ದಾರೆ. ಇವರಲ್ಲಿ ಬಹುತೇಕರು ಉಸಿರಾಟದ ಸಮಸ್ಯೆ ಸೇರಿದಂತೆ ವಿವಿಧ ಕಾಯಿಲೆಗಳನ್ನು ಕೂಡ ಎದುರಿಸಿದವರಾಗಿದ್ದಾರೆ ಎಂದು ಆಸ್ಪತ್ರೆ ತಿಳಿಸಿದೆ.

'ಅನಾರೋಗ್ಯ ಸಮಸ್ಯೆ ಕಾಣಿಸಿಕೊಂಡಾಗ ಕೆಲವರು ಸ್ವಯಂ ಚಿಕಿತ್ಸೆ ಮಾಡಿಕೊಂಡು ಮನೆಯಲ್ಲಿಯೇ ಇರುತ್ತಾರೆ. ತಡವಾಗಿ ಆಸ್ಪತ್ರೆಗೆ ಬಂದ ಕಾರಣ ಕೆಲವರು ಮೃತಪಟ್ಟಿದ್ದಾರೆ. ಅವರಿಗೆ ನ್ಯುಮೋನಿಯಾ, ಶ್ವಾಸಕೋಶದ ಸೋಂಕು ಕೂಡ ಜೀವಕ್ಕೆ ಅಪಾಯ ತಂದೊಡ್ಡಿತು. ಉಸಿರಾಟದ ಸಮಸ್ಯೆ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಂಡ ಕೂಡಲೇ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕೋವಿಡ್ ಪ್ರಕರಣಗಳು ಇಳಿಕೆಯಾದರೂ ಗರ್ಭಿಣಿಯರು ಅನಗತ್ಯವಾಗಿ ಹೊರಗಡೆ ಓಡಾಟ ನಡೆಸಬಾರದು' ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ತುಳಸಿದೇವಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋವಿಡ್ ಕಾಯಿಲೆ ದೂರವಾಗುವವರೆಗೂ ಸಮಾರಂಭಗಳು ಸೇರಿದಂತೆ ಹೆಚ್ಚು ಜನ ಸೇರುವ ಕಡೆ ಗರ್ಭಿಣಿಯರು ಹೋಗಬಾರದು. ಮನೆಯಲ್ಲಿ ಯಾರಾದರೂ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರೆ ಸ್ವಯಂ ನಿಗಾ ವ್ಯವಸ್ಥೆಗೆ ಒಳಪಡಬೇಕಾಗುತ್ತದೆ' ಎಂದರು.

ಪೊಲೀಸ್ ಅಧಿಕಾರಿಗಳಿಗೆ ಬಿಜೆಪಿ ಬ್ಯಾಡ್ಜ್, ಬಾವುಟ ಕೊಡಿ– ಡಿಕೆಶಿ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ಸಂಕಷ್ಟದಲ್ಲಿರುವವರಿಗೆ ತಮ್ಮ ಹಣದಲ್ಲಿ ಸಹಾಯ ಮಾಡಲು ಕಾಂಗ್ರೆಸ್ ನಾಯಕರು ಫಲಕಗಳನ್ನು ಅಳವಡಿಸಿದ್ದರೆ ಅದನ್ನು ಪೊಲೀಸ್ ಅಧಿಕಾರಿಗಳು ಕಿತ್ತು ಹಾಕಿಸಿದ್ದಾರೆ. ಪೊಲೀಸ್ ಅಧಿಕಾರಿಗಳಿಗೆ ಬಿಜೆಪಿಯ ಬ್ಯಾಡ್ಜ್ ಮತ್ತು ಬಾವುಟ ಕೊಡಿ. ಅವರು ತಮ್ಮ ಸ್ಟಾರ್ ತೆಗೆದು ಬಿಜೆಪಿ ಬ್ಯಾಡ್ಜ್ ಹಾಕಿಕೊಳ್ಳಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಮಹದೇವಪುರ ಹಾಗೂ ಕೆ.ಆರ್. ಪುರ ವಿಧಾನಸಭೆ ಕ್ಷೇತ್ರದ ವರ್ತೂರು, ವೈಟ್ ಫೀಲ್ಡ್, ಮುನೇನಕೊಳಲು, ಕಲ್ಕೆರೆಯಲ್ಲಿ ಬಡವರಿಗೆ ಆಹಾರ ಕಿಟ್ ವಿತರಿಸಿ ಮಾತನಾಡಿದ ಅವರು, 'ಮಂತ್ರಿ, ಶಾಸಕ ಹೇಳಿದ ಮಾತ್ರಕ್ಕೆ ಕಾಂಗ್ರೆಸ್ ಬಾವುಟ ಕಿತ್ತುಹಾಕಲು ಬಂದಿದ್ದೀರಾ. ಕಾಂಗ್ರೆಸ್ ಬಾವುಟ ಕಿತ್ತು ಹಾಕಲು ಹಣೆಯಲ್ಲಿ ಬರೆದಿಲ್ಲ' ಎಂದು ಪೊಲೀಸ್ ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

'ಬಡವರಿಗೆ ನೆರವಾಗಲು ಸಾಧ್ಯವಾದರೆ ನೆರವಾಗಿ. ಅದನ್ನು ಬಿಟ್ಟು ಕಷ್ಟದ ಸಮಯದಲ್ಲಿ ಬಡವರಿಗೆ ನೆರವಾಗುವುದನ್ನು ತಡೆಯುತ್ತೀರಲ್ಲ... ನೀವು ಮನುಷ್ಯರಾ ಅಥವಾ ದನಗಳಾ' ಎಂದೂ ಪ್ರಶ್ನಿಸಿ ಅವರು, 'ನೆರವು ವಿತರಣೆ ಕಾರ್ಯಕ್ರಮ ನಿಲ್ಲಿಸಿದರೆ ಜನರನ್ನು ಕರೆದುಕೊಂಡು ಪೊಲೀಸ್ ಠಾಣೆ ಮುಂದೆ ಧರಣಿ ಮಾಡುತ್ತೇನೆ. ನ್ಯಾಯಾಲಯಕ್ಕೆ ಗೌರವಕೊಡುತ್ತೇವೆ. ಆದರೆ, ಕೇಸ್‌ಗಳಿಗೆ ಹೆದರುವ ಮಕ್ಕಳು ಕಾಂಗ್ರೆಸ್‌ನವರಲ್ಲ' ಎಂದು ಸವಾಲು ಹಾಕಿದರು.

'ಸರ್ಕಾರದ ಕಿಟ್ ಮೇಲೆ ತಮ್ಮ ಫೋಟೋ ಹಾಕಿಕೊಂಡು ಬಿಜೆಪಿ ನಾಯಕರು ಹಂಚುವಾಗ ಈ ಪೊಲೀಸ್ ಅಧಿಕಾರಿಗಳು ಎಲ್ಲಿದ್ದರು? ಮಲಗಿದ್ದರಾ? ಮಾನ ಮರ್ಯಾದೆ ಇದ್ದರೆ ಬಡವರ ಪರಿಸ್ಥಿತಿ ಅರ್ಥ ಮಾಡಿಕೊಳ್ಳಿ' ಎಂದರು.

ಮದ್ಯದ ಅಮಲಿನಲ್ಲಿ ಜಗಳ: ಪತ್ನಿಯ ಕೊಲೆ

ಬೆಂಗಳೂರು: ಹೆಣ್ಣೂರು ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ದಾನಮ್ಮ (45) ಎಂಬುವರನ್ನು ಕತ್ತು ಹಿಸುಕಿ ಕೊಲೆ ಮಾಡಲಾಗಿದ್ದು, ಆರೋಪಿ ಎನ್ನಲಾದ ಅವರ ಪತಿ ವೇಲು (46) ಪರಾರಿಯಾಗಿದ್ದಾನೆ. 'ತಮಿಳುನಾಡಿನ ದಂಪತಿ, ಕಟ್ಟಡ ನಿರ್ಮಾಣ ಕಾರ್ಮಿಕರಾಗಿದ್ದು, ನಿರ್ಮಾಣ ಹಂತದ ಕಟ್ಟಡದ ಬಳಿ ಪುತ್ರನ ಜೊತೆ ವಾಸವಿದ್ದರು. ಇಬ್ಬರೂ ನಿತ್ಯ ಮದ್ಯ ಕುಡಿದು ಜಗಳವಾಡುತ್ತಿದ್ದರು. ಶನಿವಾರ ರಾತ್ರಿ ಆರೋಪಿ, ಪತ್ನಿಯನ್ನು ಕೊಲೆ ಮಾಡಿ, ಪರಾಗಿಯಾಗಿದ್ದಾನೆ' ಎಂದು ಪೊಲೀಸರು ತಿಳಿಸಿದರು.

J&K Bank Serving To Empower

ದಿ ಜಮ್ಮು & ಕಾಶ್ಮೀರ್ ಬ್ಯಾಂಕ್
ಇಡಿಪಿ ಕೋಶ, ವಲಯ ಕಚೇರಿ, ಮುಂಬೈ
ನ್ಯಾಷನಲ್ ಬಿಜನೆಸ್ ಸೆಂಟರ್
ಬಿಕೆಸಿ ಬಾಂದ್ರಾ ಪಶ್ಚಿಮ, ಎಂಎಂಆರ್‌ಡಿಎ
ಮೈದಾನಗಳ ಹತ್ತಿರ, ಮುಂಬೈ–400 051

ಪ್ರಸ್ತಾವನೆಗಾಗಿ ಇ–ಮನವಿ (ಇ–ಆರ್‌ಎಫ್‌ಪಿ)
ಮುಂಬೈ ವಲಯ ಕಚೇರಿಯ ಅಡಿಯಲ್ಲಿನ ವಿವಿಧ ಬ್ಯಾಂಕ್ ಶಾಖೆಗಳು/ಎಟಿಎಂ'ಗಳು/ಕಚೇರಿಗಳಲ್ಲಿ ಅಳವಡಿಸಲಾಗಿರುವ ಯುಪಿಎಸ್ ಸಿಸ್ಟಮ್‌ಗಳ ಎಎಂಸಿ ಕಾಮಗಾರಿಗಾಗಿ ವೆಂಡರ್‌ಗಳ ನಿಯೋಜನೆ

ಟೆಂಡರ್ ಪ್ರಕಟಣೆ ಹಾಗೂ ಸಂಪೂರ್ಣ ಟೆಂಡರ್ ದಸ್ತಾವೇಜುಗಳು ಮತ್ತು ಕನಿಷ್ಠ ಅರ್ಹತೆಗಳ ವಿವರಗಳನ್ನು ಬ್ಯಾಂಕ್‌ನ https://jkbank.abcprocure.com ಇ–ಟೆಂಡರಿಂಗ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಇದೇ ಪೋರ್ಟಲ್‌ನಲ್ಲಿ ಜೂನ್ 14, 2021 ರಂದು 16.00 ಗಂಟೆಯೊಳಗೆ ಬಿಡ್‌ಗಳನ್ನು ಸಲ್ಲಿಸುವುದು. ಟೆಂಡರ್ ದಸ್ತಾವೇಜುಗಳನ್ನು ಬ್ಯಾಂಕ್‌ನ ಅಧಿಕೃತ www.jkbank.com ವೆಬ್‌ಸೈಟ್‌ನಿಂದ ಕೂಡ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್‌ಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಜುಲೈ 07, 2021, 17.00 ಗಂಟೆ.

ಇ–ಆರ್‌ಎಫ್‌ಪಿ ರೆಫ್. ನಂ. ಜೆಕೆಬಿ/ಜೆಡ್‌ಒಎಂ/ಎಎಂಸಿ–ಯುಪಿಎಸ್/2021–089
ದಿನಾಂಕ: 11–06–2021

ನಿಧನ ವಾರ್ತೆ

ಮಹದೇವಪ್ಪ

ಬೆಂಗಳೂರು: ಪತ್ರಿಕಾ ವಿತರಕ ಮಹದೇವಪ್ಪ (63) ಅವರು ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ನವರಂಗ್ ಪ್ರದೇಶದಲ್ಲಿ 35 ವರ್ಷಗಳಿಂದ ಅವರು ಪತ್ರಿಕಾ ವಿತರಣೆ ಮಾಡುತ್ತಿದ್ದರು.

ವೈದ್ಯನ ಮೇಲೆ ಹಲ್ಲೆ; ರೋಗಿಯ ಪುತ್ರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್ ಆಸ್ಪತ್ರೆ ವೈದ್ಯನ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಜಗದೀಶ್ (29) ಎಂಬುವರನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೋಡಿಚಿಕ್ಕನಹಳ್ಳಿಯ ವಿಜಯಶ್ರೀ ಲೇಔಟ್ ನಿವಾಸಿ ಜಗದೀಶ್, ತಮ್ಮ ತಂದೆ ಧನಪಾಲ್ ಅವರನ್ನು ಆಸ್ಪತ್ರೆಗೆ ಸೇರಿಸಿದ್ದರು. ಚಿಕಿತ್ಸೆ ವಿಚಾರವಾಗಿ ಗಲಾಟೆ ಮಾಡಿ ವೈದ್ಯನ ಮೇಲೆ ಹಲ್ಲೆ ಮಾಡಿದ್ದರು. ಈ ಸಂಬಂಧ ಆಸ್ಪತ್ರೆಯ ಆಸ್ಪತ್ರೆ ಆಡಳಿತಾಧಿಕಾರಿ ಪ್ರವೀಣ್ ವಾಲಿ ದೂರು ನೀಡಿದ್ದರು' ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ಹೇಳಿದರು.

'ಕೋವಿಡ್‌ನಿಂದ ಗುಣಮುಖರಾಗಿದ್ದ ಧನಪಾಲ್ ಕಪ್ಪು ಶಿಲೀಂಧ್ರ ರೋಗಕ್ಕೆ ತುತ್ತಾಗಿದ್ದರು. ಅದರ ಚಿಕಿತ್ಸೆಗಾಗಿ ಫೋರ್ಟಿಸ್ ಆಸ್ಪತ್ರೆಗೆ ದಾಖಲಾಗಿದ್ದರು. ಶನಿವಾರ ಆಸ್ಪತ್ರೆಗೆ ಬಂದಿದ್ದ ಜಗದೀಶ್ ಹಾಗೂ ಅವರ ತಾಯಿ, ವೈದ್ಯ ಪದ್ಮಕುಮಾರ್ ಹಾಗೂ ಶುಶ್ರೂಷಕಿ ಮಾಲಾ ಮೇಲೆ ಹಲ್ಲೆ ಮಾಡಿದ್ದರು ಎನ್ನಲಾಗಿದೆ' ಎಂದೂ ತಿಳಿಸಿದರು.

'ಆರೋಗ್ಯ ಸಿಬ್ಬಂದಿ ಮೇಲೆ ಹಲ್ಲೆ ಹಾಗೂ ಆಸ್ಪತ್ರೆಗಳ ಹಾನಿ ತಡೆ ಕಾಯ್ದೆ 2009 ಅಡಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Finance

LOANS: WE Assist To Avail Govt Awaaz Yogana,Rozgar Yogana, Business & Industrial Loans Call: 080-43029162

Business Offers

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411275189

REAL ESTATE SELLING

Industrial & Factory

Jigani

SALE 5.5 acres Industrial land with 2,75,000 sqft building. Ready to occupy in Jigani industrial area Contact 9900083763

To place your ad in Deccan Herald & Prajavani Classifieds

DH Classifieds More value, more impact

For details contact:
Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ಲಾಕ್‌ಡೌನ್ ತೆರವು:ವಸ್ತುಸ್ಥಿತಿ ಬಹಿರಂಗಕ್ಕೆ 'ಸೇಜ್' ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಸರ್ಕಾರ ರಾಜ್ಯದಲ್ಲಿ ಲಾಕ್‌ಡೌನ್ ತೆರವು ಮಾಡುವ ಮುನ್ನ ಈಗಿನ ವಸ್ತುಸ್ಥಿತಿಯ ವರದಿ ಮಂಡಿಸಿ, ಮುಂದಿನ ಕ್ರಮ ಕೈಗೊಳ್ಳಬೇಕು' ಎಂದು ಕರ್ನಾಟಕದಲ್ಲಿ ಕೋವಿಡ್ ವಿಪತ್ತಿನ ವಿರುದ್ಧ ಹೋರಾಟಕ್ಕೆ ಸಮಾಜಮುಖಿ ಕಾರ್ಯಪ್ರವೃತ್ತ ಪರಿಣಿತ ತಂಡ (ಸೇಜ್) ಆಗ್ರಹಿಸಿದೆ.

'ಕೊರೊನಾ ಬಿಕ್ಕಟ್ಟನ್ನು ತಿಳಿಗೊಳಿಸಲು ಕೃಷಿ, ಕಾರ್ಮಿಕ, ಶಿಕ್ಷಣ ತಜ್ಞರನ್ನು ಒಳಗೊಂಡ ಬಹುಮುಖಿ ಸಲಹಾ ವ್ಯವಸ್ಥೆ ಜಾರಿಗೊಳಿಸಿ, ಅದಕ್ಕೆ ಮುಖ್ಯಸ್ಥರನ್ನು ನೇಮಿಸಬೇಕು. ಸಮಗ್ರ ಕಾರ್ಯ ಯೋಜನೆ ಮೂಲಕ ಎಲ್ಲ ಸಂಘ ಸಂಸ್ಥೆಗಳು ಹಾಗೂ ಸ್ಥಳೀಯ ಸರ್ಕಾರಗಳನ್ನು ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಸೇಜ್ ಸಂಚಾಲಕ ಟಿ.ಎನ್.ಪ್ರಕಾಶ್ ಕಮ್ಮರಡಿ ಸಲಹೆ ನೀಡಿದ್ದಾರೆ.

ನಗರದಲ್ಲಿ ಇಂದು

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ರಜತ ಮಹೋತ್ಸವ: ಧನ್ವಂತರಿ ಪ್ರತಿಮೆ ಅನಾವರಣ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಅತಿಥಿ–ಆರೋಗ್ಯ ಸಚಿವ ಕೆ.ಸುಧಾಕರ್, ಸ್ಥಳ–ಧನ್ವಂತರಿ ಸಭಾಂಗಣ, ವಿಶ್ವವಿದ್ಯಾಲಯದ ಆವರಣ, ಜಯನಗರ, ಬೆಳಿಗ್ಗೆ 11

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಬಡವರಿಗೆ ಪಡಿತರ ಕಿಟ್ ವಿತರಣೆ:ಅಧ್ಯಕ್ಷತೆ–ಕಂದಾಯ ಸಚಿವ ಆರ್.ಅಶೋಕ, ಅತಿಥಿಗಳು–ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಗೃಹಸಚಿವ ಬಸವರಾಜ ಬೊಮ್ಮಾಯಿ, ಆರೋಗ್ಯ ಸಚಿವ ಕೆ.ಸುಧಾಕರ್, ಸಚಿವರಾದ ಎಸ್.ಟಿ.ಸೋಮಶೇಖರ್, ಬೈರತಿ ಬಸವರಾಜು, ಶಾಸಕ ಎಂ.ಕೃಷ್ಣಪ್ಪ, ಸತೀಶ್ ರೆಡ್ಡಿ, ಸ್ಥಳ–ಶಾಸಕರ ಕಚೇರಿ, ಪದ್ಮನಾಭನಗರ ವಿಧಾನಸಭಾ ಕ್ಷೇತ್ರ, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 11.30

ಸಿದ್ದಲಿಂಗಯ್ಯ ಅವರಿಗೆ ನುಡಿನಮನ: ಪ್ರಾಸ್ತಾವಿಕ ನುಡಿ–ಬರಗೂರು ರಾಮಚಂದ್ರಪ್ಪ, ನುಡಿನಮನ–ಎಲ್. ಹನುಮಂತಯ್ಯ, ಎಚ್.ಎಲ್.ಪುಷ್ಪಾ, ಬಸವರಾಜ ಸಬರದ, ಕೆ.ಶರೀಫಾ, ರಾಜಪ್ಪ ದಳವಾಯಿ, ಸರಜು ಕಾಟ್ಕರ್, ಹೋರಾಟದ ಹಾಡುಗಳು–ಪಿಚ್ಚಳ್ಳಿ ಶ್ರೀನಿವಾಸ್, ಭಕ್ತರಹಳ್ಳಿ ಕಾಮರಾಜ್, ಬಿ.ರಾಜಶೇಖರ ಮೂರ್ತಿ, ಆಯೋಜನೆ–ಬಂಡಾಯ ಸಾಹಿತ್ಯ ಸಂಘಟನೆ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)



ಬರಗೂರು ರಾಮಚಂದ್ರಪ್ಪ

₹ 7.50 ಲಕ್ಷ ಸಾಲದ ಗಲಾಟೆ: ಎಸಿಪಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಲ್ಲೆ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸುವ ಬದಲು ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಲು ಪೊಲೀಸರ ಮೇಲೆ ಹಲಸೂರು ಗೇಟ್ ಉಪವಿಭಾಗ ಎಸಿಪಿ ನಜ್ಮಾ ಫಾರೂಖಿ ಒತ್ತಡ ಹೇರಿದ್ದು, ಈ ಮೂಲಕ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ' ಎಂದು ಆರೋಪಿಸಿ ಉದ್ಯಮಿ ಇಮ್ರಾನ್ ಷರೀಫ್ ಎಂಬುವರು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ದೂರು ನೀಡಿದ್ದಾರೆ.

ನೃಪತುಂಗ ರಸ್ತೆಯಲ್ಲಿರುವ ಪೊಲೀಸ್ ಪ್ರಧಾನ ಕಚೇರಿಗೆ ತೆರಳಿ ದೂರು ಸಲ್ಲಿಸಿರುವ ಇಮ್ರಾನ್, 'ಎಸಿಪಿ ನಜ್ಮಾ ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಒತ್ತಾಯಿಸಿದ್ದಾರೆ.

'ನನ್ನ ತಮ್ಮ ಇಲಿಯಾಸ್ ಬಳಿ ಫೈಜಲ್ ಎಂಬಾತ ₹ 7.50 ಲಕ್ಷ ಸಾಲ ತೆಗೆದುಕೊಂಡಿದ್ದ. ಹಲವು ವರ್ಷವಾದರೂ ವಾಪಸು ಕೊಟ್ಟಿರಲಿಲ್ಲ. ಇದರ ವಿರುದ್ಧ ಕಮಿಷನರ್‌ಗೆ ದೂರು ನೀಡಿದ್ದೆ. ವಿಚಾರಣೆ ನೆಪದಲ್ಲಿ ಹಲಸೂರು ಗೇಟ್ ಪೊಲೀಸರು ಠಾಣೆಗೆ ಕರೆಸಿ ಇಬ್ಬರ ನಡುವೆ ಸಂಧಾನ ಮಾಡಿದ್ದರು. ಕಾಲಾವಕಾಶ ತೆಗೆದುಕೊಂಡು ಹಣ ನೀಡುವಂತೆ ಫೈಜಲ್‌ಗೆ ತಾಕೀತು ಮಾಡಿದ್ದರು.'

'ಹಣ ನೀಡುವುದಾಗಿ ಹೇಳಿ ತಮ್ಮನಿಗೆ ಆಹ್ವಾನ ನೀಡಿದ್ದ. ಆತನ ಬದಲು ನಾನೇ ಫೈಜಲ್ ಬಳಿ ಹೋಗಿ ವಿಚಾರಿಸಿದ್ದೆ. ಆಗ ಫೈಜಲ್, ಬೆಂಬಲಿಗರ ಜೊತೆ ಸೇರಿ ಜಗಳ ತೆಗೆದು ಹಲ್ಲೆ ಮಾಡಿದ್ದ.ಮುಖಕ್ಕೆ ಪೆಟ್ಟಾಗಿತ್ತು.ಹಲ್ಲೆ ಬಗ್ಗೆ ದೂರು ನೀಡಿದರೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿಲ್ಲ. ಬದಲಿಗೆ ಎನ್‌ಸಿಆರ್ ಮಾತ್ರ ದಾಖಲಿಸಿಕೊಂಡಿದ್ದಾರೆ. ಎಸಿಪಿ ನಜ್ಮಾ ಅವರ ಒತ್ತಡವೇ ಇದಕ್ಕೆ ಕಾರಣ' ಎಂದೂ ಇಮ್ರಾನ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಎಸಿಪಿ ನಜ್ಮಾ, 'ದೂರುದಾರರು ನೀಡಿದ್ದ ಕೃತ್ಯದ ಸಾರಾಂಶ ಹಾಗೂ ಪುರಾವೆ ಆಧರಿಸಿ ಎನ್‌ಸಿಆರ್ ದಾಖಲಿಸಲಾಗಿದೆ. ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡುವೆ' ಎಂದು ಹೇಳಿದರು.

ಕುಡಿದ ಮತ್ತಿನಲ್ಲಿ ಗಲಾಟೆ?

'ಇಲಿಯಾಸ್ ಹಾಗೂ ಇಮ್ರಾನ್ ನಡುವೆ ಹಣದ ವಿಚಾರವಾಗಿ ಕುಡಿದ ಮತ್ತಿನಲ್ಲಿ ಮೇ 11ರಂದು ಎಸ್.ಪಿ ರಸ್ತೆಯಲ್ಲಿ ಗಲಾಟೆ ಆಗಿತ್ತು. ಸ್ಥಳಕ್ಕೆ ಹೋಗಿದ್ದ ಹೊಯ್ಸಳ ವಾಹನದ ಸಿಬ್ಬಂದಿಯು ಗಲಾಟೆ ಬಿಡಿಸಿದ್ದರು. ಕೃತ್ಯದಲ್ಲಿ ಭಾಗಿಯಾಗಿದ್ದ ಬಹುತೇಕರು, ಮದ್ಯ ಕುಡಿದಿದ್ದರೆಂದು ಸಿಬ್ಬಂದಿಯೇ ದಾಖಲಿಸಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಐಎಸ್‌ಡಿ ಕರೆ ಮಾರ್ಪಾಡು: ನಾಲ್ವರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಕರೆಗಳನ್ನು (ಐಎಸ್‌ಡಿ) ಸ್ಥಳೀಯ ಕರೆಗಳನ್ನಾಗಿ ಮಾರ್ಪಾಡಿಸಿ ದೇಶದ ಭದ್ರತೆಗೆ ಧಕ್ಕೆ ತರುತ್ತ ಕೇಂದ್ರ ಸರ್ಕಾರಕ್ಕೆ ನಷ್ಟ ಉಂಟು ಮಾಡುತ್ತಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಸಿಬಿ ಪೊಲೀಸರು, ಕೃತ್ಯದಲ್ಲಿ ಭಾಗಿಯಾಗಿದ್ದರು ಎನ್ನಲಾದ ನಾಲ್ವರನ್ನು ವಶಕ್ಕೆ ಪಡೆದಿದ್ದಾರೆ.

ಸೇನೆಯ ಗುಪ್ತಚರ ವಿಭಾಗ ನೀಡಿದ್ದ ಮಾಹಿತಿ ಆಧರಿಸಿ ಬಿಟಿಎಂ ಬಡಾವಣೆಯಲ್ಲಿ ಕಾರ್ಯಾಚರಣೆ ನಡೆಸಿದ್ದ ಸಿಸಿಬಿ ಭಯೋತ್ಪಾದನಾ ನಿಗ್ರಹ ವಿಭಾಗದ (ಎಟಿಸಿ) ಅಧಿಕಾರಿಗಳು, ಕೇರಳದ ಇಬ್ರಾಹಿಂ ಪುಲ್ಲಟ್ಟಿ (36) ಹಾಗೂ ತಮಿಳುನಾಡಿನ ಗೌತಮ್ (27) ಎಂಬುವರನ್ನು ಬಂಧಿಸಿದ್ದರು. ಅವರಿಂದ 900 ಸಿಮ್ ಕಾರ್ಡ್ ಸಮೇತ ಎಫ್‌ಸಿಟಿ (ಫಿಕ್ಸೆಡ್ ಸೆಲ್ಯುಲರ್ ಟರ್ಮಿನಲ್) ಬಾಕ್ಸ್ ಜಪ್ತಿ ಮಾಡಿದ್ದಾರೆ.

ಅವರಿಬ್ಬರು ನೀಡಿದ್ದ ಮಾಹಿತಿ ಆಧರಿಸಿ ನಾಲ್ವರನ್ನು ವಶಕ್ಕೆ ಪಡೆದಿರುವ ಅಧಿಕಾರಿಗಳು, ಅಜ್ಞಾತ ಸ್ಥಳದಲ್ಲಿ ವಿಚಾರಣೆ ನಡೆಸುತ್ತಿದ್ದಾರೆ.

'ಯುಎಇ, ಪಾಕಿಸ್ತಾನ ಹಾಗೂ ಇತರೆ ದೇಶಗಳಿಂದ ಬರುತ್ತಿದ್ದ ಐಎಸ್‌ಡಿ ಕರೆಗಳನ್ನು ಆರೋಪಿಗಳು ಸ್ಥಳೀಯ ಕರೆಗಳನ್ನಾಗಿ ಮಾರ್ಪಡಿಸುತ್ತಿದ್ದರು. ಇದಕ್ಕೆ ಅಗತ್ಯವಾದ ಸ್ಥಳೀಯ ವಿಳಾಸದ ಸಿಮ್ ಕಾರ್ಡ್‌ಗಳು ಕೊರಿಯರ್ ಮೂಲಕ ಆರೋಪಿಗಳ ಕೈಗೆ ಸಿಗುತ್ತಿದ್ದವು. ಕೊರಿಯರ್ ಕಳುಹಿಸುತ್ತಿದ್ದ ಇಬ್ಬರು ಸೇರಿ ನಾಲ್ವರಿಂದ ಸಿಸಿಬಿ ಮಾಹಿತಿ ಕಲೆಹಾಕುತ್ತಿದೆ' ಎಂದು ಮೂಲಗಳು ಹೇಳಿವೆ.

'ಬಂಧಿತ ಆರೋಪಿಗಳು ವಾಸವಿದ್ದ ಮನೆ ಹಾಗೂ ಕೃತ್ಯಕ್ಕಾಗಿ ಬಾಡಿಗೆ ಪಡೆದಿದ್ದ ಮನೆಗಳಲ್ಲಿ ಪರಿಶೀಲನೆ ನಡೆಸಲಾಗಿದೆ. ಸಿಮ್‌ಕಾರ್ಡ್‌ಗಳು, ದಾಖಲೆಗಳನ್ನು ಜಪ್ತಿ ಮಾಡಲಾಗಿದೆ. ಅವುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ಕಳುಹಿಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಂಡವರು 1.5 ಲಕ್ಷ ಜನ ಮಾತ್ರ • 56 ಸಾವಿರ ಮಂದಿಯಿಂದ ದಂಡ ಪಾವತಿ

ನೆಮ್ಮದಿಯ ನಾಳೆಗಳಿಗೆ ಇಳೆಗಿಳಿಯಲಿ ಮಳೆನೀರು

145 ಕೋಟಿ ಲೀಟರ್ ಕಾವೇರಿ ನದಿಯಿಂದ ನಗರಕ್ಕೆ ದಿನಕ್ಕೆ ಪೂರೈಕೆಯಾಗುವ ನೀರಿನ ಪ್ರಮಾಣ

970 ಮಿ.ಮೀ. ವರ್ಷವೊಂದರಲ್ಲಿ ನಗರದಲ್ಲಿ ಬೀಳುವ ಮಳೆಯ ಸರಾಸರಿ ಪ್ರಮಾಣ

300 ಕೋಟಿ ಲೀಟರ್ ಮಳೆ ನೀರು ಸಂಗ್ರಹಿಸಿದರೆ ನಗರಕ್ಕೆ ನಿತ್ಯ ಸಿಗುವ ನೀರು

200% ಕಾವೇರಿಯಿಂದ ಬರುವ ನೀರಿಗೆ ಹೋಲಿಸಿದರೆ ನಗರದಲ್ಲಿ ಸಂಗ್ರಹಿಸಿ ಬಳಸಬಹುದಾದ ಮಳೆನೀರಿನ ಪ್ರಮಾಣ

ಜಯನಗರದ ಸರ್ ಎಂ. ವಿಶ್ವೇಶ್ವರಯ್ಯ ಮಳೆ ನೀರು ಸುಗ್ಗಿ ಕೇಂದ್ರದಲ್ಲಿರುವ ಮಳೆ ನೀರು ಕೊಯ್ಲು ಮನೆ ಮಾದರಿ ಪ್ರಜಾವಾಣಿ ಚಿತ್ರ ಅನೂಪ್ ರಾಘ್ ಟಿ.

ಮಳೆ ನೀರಿನಿಂದಲೇ ಅಭಿವೃದ್ಧಿ ಪಡಿಸಿರುವ ತಾರಸಿ ತೋಟದಲ್ಲಿ ವಿಶ್ವನಾಥ್

• ಗುರು ಪಿ.ಎಸ್.

ಬೆಂಗಳೂರು: ಮಳೆಗಾಲ ಆರಂಭವಾಗಿದೆ. ಸುರಿಯುವ ಮಳೆ ನೀರು ಕಾಂಕ್ರೀಟ್ ಅಥವಾ ಡಾಂಬರುಗಳ ಮೇಲೆ ಹರಿದು ಹೋಗಿ ವ್ಯರ್ಥವಾಗುತ್ತಿದೆ. ಜಲಮೂಲಗಳನ್ನು ಸಂರಕ್ಷಿಸಿ, ನೀರಿನ ಬಳಕೆಯಲ್ಲಿ ಸ್ವಾವಲಂಬನೆ ಸಾಧಿಸುವ ಸಾಕಷ್ಟು ಅವಕಾಶಗಳನ್ನು ರಾಜಧಾನಿ ಹೊಂದಿದೆ. ಮಳೆನೀರನ್ನು ಜತನದಿಂದ ಬಳಸುವ ಮಾದರಿಗಳು ನಗರದಲ್ಲೇ ಸಾಕಷ್ಟಿದ್ದರೂ ಅವು ಮನೆ ಮನೆಗಳಲ್ಲಿ ಬಳಕೆ ಆಗುವಂತೆ ಮಾಡುವಲ್ಲಿ ನಿರೀಕ್ಷಿತ ಯಶಸ್ಸು ಸಿಕ್ಕಿಲ್ಲ.

95 ಕಿ.ಮೀ. ದೂರದ ಕಾವೇರಿ ನದಿ ನೀರನ್ನೇ ಅವಲಂಬಿಸಿರುವ ಈ ಮಹಾನಗರದಲ್ಲಿ ಬೀಳುವ ಮಳೆ ನೀರನ್ನೇ ಸಂಗ್ರಹಿಸಿದ್ದರೆ, ಬೇಸಿಗೆಯಲ್ಲಿ ಖಾಸಗಿ ಟ್ಯಾಂಕರ್‌ಗಳ 'ಮೆರವಣಿಗೆ' ನೋಡುವುದು ತಪ್ಪುತ್ತಿತ್ತು.

ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ನೀರಿನ ಸಂರಕ್ಷಣೆ ಮತ್ತು ಸದ್ಬಳಕೆಯೂ ಒಂದು. ಯಾವುದೇ ನಗರ ಸಮಗ್ರ ಅಭಿವೃದ್ಧಿ ಸಾಧಿಸಿದೆ ಅಥವಾ ಸಾಧಿಸುವ ಹಾದಿಯಲ್ಲಿದೆ ಎಂದರೆ ಈ ಗುರಿ ಈಡೇರಲೇ ಬೇಕಿದೆ.

ಜಲಮಂಡಳಿಯು ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಕೆಯನ್ನು ಕಡ್ಡಾಯ ಮಾಡಿರುವುದೇನೋ ನಿಜ. ಆದರೆ, ಈ ಕುರಿತು ಆಗಿರುವ ಪ್ರಗತಿ ಮತ್ತು ಈ ವಿಚಾರದಲ್ಲಿ ಜನರ ನಿರಾಸಕ್ತಿ ಗಮನಿಸಿದರೆ ಬೇಸರ ಮೂಡುತ್ತದೆ.

ಇಂತಹದ ಬೇಸರಗಳ ನಡುವೆಯೂ ಕೆಲವರು, ಮಳೆ ನೀರು ಸಂಗ್ರಹಕ್ಕೆ ತಮ್ಮದೇ ಆದ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಆ ಮೂಲಕ ತಮ್ಮ ಮನೆ ಮತ್ತು ನಗರದ 'ನೆಮ್ಮದಿಗೆ' ಪರೋಕ್ಷವಾಗಿ ಕೊಡುಗೆ ನೀಡುತ್ತಿದ್ದಾರೆ.

ಒಮ್ಮೆ ಸಂಗ್ರಹ–ಎರಡು ಬಾರಿ ಬಳಕೆ

ವಿಶ್ವನಾಥ್

ನಗರದ ವಿದ್ಯಾರಣ್ಯಪುರದ ನಿವಾಸಿ, ಸಿವಿಲ್ ಎಂಜಿನಿಯರ್ ವಿಶ್ವನಾಥ್ ಅವರು ತಮ್ಮ ಇಡೀ ಮನೆಯನ್ನೇ 'ಮಳೆ ನೀರು ಸಂಗ್ರಹದ ಮಾದರಿ ಮನೆ'ಯಂತೆ ರೂಪಿಸಿದ್ದಾರೆ. ಮಳೆ ನೀರನ್ನು ಸಂಗ್ರಹಿಸಿ, ಅದನ್ನು ಬಳಸಿದ ನಂತರ, ಆ ನೀರನ್ನೇ ಸಸಿಗಳಿಗೆ ಉಣಿಸುವ ಮೂಲಕ ಮನೆಯ ಮೇಲೆ 'ತಾರಸಿ ತೋಟ'ವನ್ನೇ ಮಾಡಿದ್ದಾರೆ.

ಸುಮಾರು 25 ವರ್ಷಗಳಿಂದ ಮಳೆ ನೀರನ್ನು ಸಂಗ್ರಹಿಸುತ್ತಿದ್ದಾರೆ ವಿಶ್ವನಾಥ್.

'ಮಳೆ ನೀರನ್ನು ಎರಡು ಬಾರಿ ಬಳಸಿಕೊಳ್ಳಲು ಸಾಧ್ಯವಿದೆ. ನೀರು ಎಲ್ಲೆಲ್ಲಿ ಹರಿದು ಹೋಗುತ್ತದೆಯೋ ಅಲ್ಲಲ್ಲಿ ಪೈಪ್‌ಗಳನ್ನು ಅಳವಡಿಸಿ ಆ ನೀರು ಸಂಪು ಸೇರುವಂತೆ ವ್ಯವಸ್ಥೆ ಮಾಡಿದ್ದೇವೆ' ಎಂದು ಅವರು ತಿಳಿಸಿದರು.

'ಸ್ನಾನ ಮಾಡಿದ, ಬಟ್ಟೆ ಒಗೆದ ನೀರನ್ನೂ 200 ಲೀಟರ್ ಸಾಮರ್ಥ್ಯದ ಟ್ಯಾಂಕ್‌ನಲ್ಲಿ ಸಂಗ್ರಹಿಸಲಾಗುತ್ತಿದೆ. ಅದು ಹರಿದು ಹೋಗುವ ಜಾಗದಲ್ಲಿ ಬೇರಿನ ಜೊಂಡು ಅಳವಡಿಸಲಾಗಿದೆ. ಇದು ನೀರಿನಲ್ಲಿರುವ ಉಪ್ಪಿನ ಅಂಶ ಹಾಗೂ ಫಾಸ್ಫೇಟ್, ನೈಟ್ರೇಟ್‌ನಂತಹ ಅಂಶಗಳನ್ನು ಸೋಸುತ್ತದೆ. ಈ ನೀರನ್ನು ಗಿಡಗಳಿಗೆ ಮತ್ತು ಶೌಚಾಲಯ ಬಳಕೆಗೆ ಉಪಯೋಗಿಸಬಹುದು' ಎಂದು ಅವರು ವಿವರಿಸಿದರು.

ಬಳಸಿ ಉಳಿದ ನೀರನ್ನು ಇಂಗು ಬಾವಿಗೆ ಬಿಡುವ ವ್ಯವಸ್ಥೆಯನ್ನು ಇವರು ಮಾಡಿದ್ದಾರೆ. ಇದರಲ್ಲಿ ಪ್ರತಿ ವರ್ಷ 10 ಲಕ್ಷ ಲೀಟರ್ ನೀರು ಇಂಗುವ ಮೂಲಕ ಅಂತರ್ಜಲ ಸೇರುತ್ತಿದೆ.

ಮಳೆ ನೀರಿನಿಂದಲೇ ಕಟ್ಟಿದರು ಮನೆ !


ರಘುರಾಮ್ ಗಿರಿಧರ್

ಎಲ್ಲರೂ ಮನೆ ಕಟ್ಟಿದ ಮೇಲೆ ಮಳೆ ನೀರು ಕೊಯ್ಲು ವ್ಯವಸ್ಥೆ ಅಳವಡಿಸಿಕೊಂಡರೆ, ತಮ್ಮ ನಿವೇಶನದಲ್ಲಿ ಮೊದಲೇ ಈ ವ್ಯವಸ್ಥೆ ಅಳವಡಿಸಿಕೊಂಡು ಅದೇ ನೀರಿನಿಂದ 40X60 ವಿಸ್ತೀರ್ಣದ ಮನೆ ಕಟ್ಟಿದ್ದಾರೆ ಖಾಸಗಿ ಕಂಪನಿ ಉದ್ಯೋಗಿ ರಘುರಾಮ್ ಗಿರಿಧರ್.

ವಿದ್ಯಾರಣ್ಯಪುರದಲ್ಲಿರುವ ತಮ್ಮ ನಿವಾಸ 'ಉತ್ಸವ'ದಲ್ಲಿ ಪ್ರತಿ ಮಳೆಗಾಲದಲ್ಲೂ ನೀರಿನ 'ಉತ್ಸವ' ನಡೆಯುವಂತೆ ವ್ಯವಸ್ಥೆ ಮಾಡಿಕೊಂಡಿದ್ದಾರೆ.

'ಮನೆ ಕಟ್ಟುವುದಕ್ಕೂ ಮುನ್ನ ನಿವೇಶನದ ಮೇಲೆ ಬೀಳುವ ಮಳೆ ನೀರು ಬಾವಿಗೆ ಸೇರುವಂತೆ ಮಾಡಿದ್ದೆವು. ಮೂರು ವರ್ಷಗಳ ಹಿಂದೆ ಮನೆ ಕಟ್ಟಲು ಆರಂಭಿಸಿದೆವು. ಬೋರ್‌ವೆಲ್ ಕೊರೆಯಿಸಲೇಬಾರದು ಎಂದು ಮೊದಲೇ ನಿರ್ಣಯಿಸಿದ್ದೆವು. ಒಂದು ಸಂಪ್ ಮಾಡಿ, ಅದರಿಂದ ಬಾವಿಗೆ ನೀರು ಬಿಟ್ಟಿದ್ದೆವು. ಆ ನೀರಿನಿಂದಲೇ ಮನೆ ನಿರ್ಮಾಣ ಮಾಡಿದ್ದೇವೆ' ಎಂದು ಹೇಳಿದರು.

'ಬೋರ್‌ವೆಲ್ ಕೊರೆಸಲು ಲಕ್ಷಗಟ್ಟಲೇ ಖರ್ಚು ಮಾಡಬೇಕಾಗುತ್ತದೆ. ಕೇವಲ ₹25 ಸಾವಿರ ವೆಚ್ಚದಲ್ಲಿ ಬಾವಿಯನ್ನು ಮಾಡಿಕೊಂಡಿದ್ದೆವು. ಈ ಬಾವಿಯಲ್ಲಿ ಸುಮಾರು ನಾಲ್ಕು ಅಡಿಗಳಷ್ಟು ನೀರು ಇದ್ದೇ ಇರುತ್ತದೆ. ಕುಡಿಯಲು ಹೊರತು ಪಡಿಸಿ, ಉಳಿದೆಲ್ಲ ಕೆಲಸಗಳಿಗೆ ಇದೇ ನೀರು ಬಳಸುತ್ತೇವೆ. ಬಾವಿಯ ನಿರ್ವಹಣಾ ವೆಚ್ಚ ಮತ್ತು ಕಾವೇರಿ ನೀರಿನ ಶುಲ್ಕ ಸೇರಿ ತಿಂಗಳಿಗೆ ₹300 ಬಿಲ್ ಮಾತ್ರ ಬರುತ್ತಿದೆ' ಎಂದು ರಘುರಾಮ್ ಹೇಳಿದರು.

ತಾರಸಿಯ ನೀರು ಹರಿದು ಬರಲು ಪೈಪ್ ಅಳವಡಿಸಿದ್ದು, ಅದು ಸಂಪ್‌ಗೆ ಸೇರುವಂತೆ ಮಾಡಲಾಗಿದೆ. ಈ ನೀರು ಶುದ್ಧೀಕರಣವಾಗಿ ಬರಲು ₹4,000 ವೆಚ್ಚದಲ್ಲಿ ಪೈಪ್‌ಗೆ 'ಫಿಲ್ಟರ್' ಅಳವಡಿಸಲಾಗಿದೆ. ಸಂಪ್‌ಗೆ ಬರುವ ನೀರನ್ನು ಟ್ಯಾಂಕ್‌ಗೆ ಏರುವಂತೆ ಮಾಡಿರುವ ರಘುರಾಮ್, 'ನಾಲ್ಕು ಬಾರಿ ಮಾಲ್‌ಗೆ ಹೋಗಿ ಬರುವ ಖರ್ಚಿನಲ್ಲಿಯೇ ಈ ರೀತಿಯ ಬಾವಿ ನಿರ್ಮಾಣ ಮಾಡಿಕೊಳ್ಳಬಹುದು' ಎಂದೂ ಅವರು ಸಲಹೆ ನೀಡುತ್ತಾರೆ.

ನಗರದಲ್ಲಿ ಇನ್ನೂ ಲಕ್ಷಾಂತರ ಮನೆಗಳಿಗೆ ಇಂತಹ ವ್ಯವಸ್ಥೆ ಅಳವಡಿಸಿಕೊಳ್ಳಲು ಅವಕಾಶವಿದೆ. ಆದರೆ, ಅದು ಸಾಧ್ಯವಾಗುತ್ತಿಲ್ಲ. ಬಹುತೇಕರು ದಂಡ ಕಟ್ಟಿ ಸುಮ್ಮನಾಗುತ್ತಿದ್ದಾರೆ. ಜಲಮಂಡಳಿ ಕೂಡ ದಂಡ ಕಟ್ಟಿಸಿಕೊಂಡು ಸುಮ್ಮನಾಗದೆ ಇನ್ನಷ್ಟು ಕಟ್ಟುನಿಟ್ಟಾಗಿ ನಿಯಮ ಪಾಲನೆಗೆ ಮುಂದಾದರೆ, ವಿಶ್ವನಾಥ್ ಮತ್ತು ರಘುರಾಮ್ ಅವರಂಥವರ ಸಂಖ್ಯೆ ಹೆಚ್ಚಾದರೆ ವರ್ಷಧಾರೆಯು ನಗರದ ಪಾಲಿಗೆ ನಿಜವಾದ ಸಂಪತ್ತಾಗಬಹುದು.

ಸಮಗ್ರ ಮಾಹಿತಿಯ 'ಸುಗ್ಗಿ ಕೇಂದ್ರ'

ಜಯನಗರದ ಸರ್.ಎಂ. ವಿಶ್ವೇಶ್ವರಯ್ಯ ಮಳೆ ನೀರು ಸುಗ್ಗಿ ಕೇಂದ್ರದಲ್ಲಿ ಮಳೆ ಸಂಗ್ರಹ ವ್ಯವಸ್ಥೆಯ 21 ಮಾದರಿಗಳು ಇವೆ. ಇಲ್ಲಿಗೆ ಭೇಟಿ ನೀಡಿದರೆ ಈ ವ್ಯವಸ್ಥೆಯ ಬಗ್ಗೆ ಸಂಪೂರ್ಣ ಮತ್ತು ಸಮಗ್ರ ಮಾಹಿತಿ ಸಿಗಲಿದೆ.

'ಈವರೆಗೆ ಈ ಕೇಂದ್ರಕ್ಕೆ ಶಾಲಾ ವಿದ್ಯಾರ್ಥಿಗಳು, ನಾಗರಿಕರು ಸೇರಿ 50 ಸಾವಿರಕ್ಕೂ ಹೆಚ್ಚು ಮಂದಿ ಭೇಟಿ ನೀಡಿದ್ದಾರೆ. ಇಲ್ಲಿಗೆ ಬಂದವರ ಪೈಕಿ ಶೇ 50ಕ್ಕೂ ಹೆಚ್ಚು ಜನ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಂಡಿದ್ದಾರೆ' ಎಂದು ಜಲಮಂಡಳಿ ಮುಖ್ಯಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ಎಂ. ಮಂಜುನಾಥ್ ಹೇಳಿದರು.

ಮಳೆ ನೀರು ಸಂಗ್ರಹದ ಬಗ್ಗೆ ಮಾಹಿತಿಗೆ, 080-26653666 ಸಂಖ್ಯೆ ಸಂಪರ್ಕಿಸಬಹುದು.

ಖರ್ಚಿನ ಚಿಂತೆ !

30x40 ಚದರ ಅಡಿ ವಿಸ್ತೀರ್ಣದ ಮನೆಗೆ ಸಂಪು ಸಮೇತ ಈ ವ್ಯವಸ್ಥೆ ಅಳವಡಿಸಿಕೊಳ್ಳಲು ₹6 ಸಾವಿರದಿಂದ ₹7 ಸಾವಿರ ವೆಚ್ಚವಾಗುತ್ತದೆ. ಇಂಗುಗುಂಡಿ ಮಾಡಲು ₹15 ಸಾವಿರದಿಂದ ₹16 ಸಾವಿರ ಖರ್ಚಾಗುತ್ತದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, ಸೇವಾ ಸಂಸ್ಥೆಗಳು ₹30 ಸಾವಿರಕ್ಕಿಂತ ಹೆಚ್ಚು ಶುಲ್ಕ ಕೇಳುತ್ತವೆ. ಹೀಗಾಗಿ, ಈ ವ್ಯವಸ್ಥೆ ಅಳವಡಿಸಿಕೊಳ್ಳಲು ಹಿಂದೆ ಮುಂದೆ ನೋಡುವಂತಾಗಿದೆ ಎನ್ನುತ್ತಾರೆ ಜೆ.ಪಿ. ನಗರದ ಸಂಗಮೇಶ್.

ಬೆಂಗಳೂರಿನಲ್ಲಿ ಮಳೆ ಪ್ರಮಾಣ ಮತ್ತು ದಿನಗಳು

ತಿಂಗಳು	ಸರಾಸರಿ ಮಳೆ ದಿನಗಳು	ಮಳೆಪ್ರಮಾಣ (ಮಿ.ಮೀ)	40X60 ನಿವೇಶನಗಳಲ್ಲಿ ಸಂಗ್ರಹಿಸಬಹುದಾದ ನೀರು (ಲೀಟರ್‌ಗಳಲ್ಲಿ)
ಜನವರಿ	0	5	1,113
ಫೆಬ್ರುವರಿ	0	7	1,634
ಮಾರ್ಚ್	1	10	2,214
ಏಪ್ರಿಲ್	3	47	10,529
ಮೇ	7	112	24,968
ಜೂನ್6	80	17,764	
ಜುಲೈ	8	112	24,968
ಆಗಸ್ಟ್	10	139	30,914
ಸೆಪ್ಟೆಂಬರ್	9	182	40,660
ಅಕ್ಟೋಬರ್	8	161	35,815
ನವೆಂಬರ್	4	58	12,883
ಡಿಸೆಂಬರ್	1	16	3,657
ಒಟ್ಟು	57	929	2,07,074

ದಂಡ ಕಟ್ಟಿ ಸುಮ್ಮನಾಗುತ್ತಾರೆ !

ಜಲಮಂಡಳಿಯ ಕಾಯ್ದೆ 72ಎ ಪ್ರಕಾರ, ಬಿಬಿಎಂಪಿ ವ್ಯಾಪ್ತಿಯಲ್ಲಿರುವ 2,400 ಚದರ ಅಡಿ ಮತ್ತು ಅದಕ್ಕಿಂತ ಹೆಚ್ಚು ವಿಸ್ತೀರ್ಣದ ನಿವೇಶನದಲ್ಲಿ, ಈಗಾಗಲೇ ನಿರ್ಮಾಣಗೊಂಡಿರುವ ಕಟ್ಟಡಗಳಲ್ಲಿ ಹಾಗೂ ನೂತನವಾಗಿ ನಿರ್ಮಿಸುವ 1,200 ಚದರ ಅಡಿ ಮತ್ತು ಅದಕ್ಕಿಂತ ಹೆಚ್ಚು ವಿಸ್ತೀರ್ಣದ ಎಲ್ಲ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸುವುದು ಕಡ್ಡಾಯ. 2009ರ ಆಗಸ್ಟ್‌ನಿಂದ ಈ ಕಾನೂನು ಜಾರಿಗೆ ಬಂದಿದೆ.

2009ರ ನಂತರ ನಿರ್ಮಾಣವಾದ ನಗರದ ಸುಮಾರು 1.50 ಲಕ್ಷ ಕಟ್ಟಡಗಳಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಈ ವ್ಯವಸ್ಥೆ ಅಳವಡಿಸಿಕೊಳ್ಳದ 56 ಸಾವಿರ ಕಟ್ಟಡಗಳ ಮಾಲೀಕರಿಗೆ ದಂಡ ವಿಧಿಸಲಾಗುತ್ತಿದೆ ಎಂದು ಜಲಮಂಡಳಿ ಹೇಳುತ್ತದೆ. ತಿಂಗಳಿಗೆ ₹1.5 ಕೋಟಿಗೂ ಹೆಚ್ಚು ದಂಡ ವಸೂಲಿ ಮಾಡಲಾಗುತ್ತಿದೆ.

ಉದಾಹರಣೆಗೆ, ನೀರಿನ ಶುಲ್ಕ ₹100 ಎಂದು ತೆಗೆದುಕೊಂಡರೆ, ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಳ್ಳದ ಕಟ್ಟಡಗಳ ಮಾಲೀಕರಿಗೆ ಮೊದಲ ಮೂರು ತಿಂಗಳು ₹25ರಂತೆ ದಂಡ ಹಾಕಲಾಗುತ್ತದೆ. ಅಂದರೆ, ಅವರು ₹125 ಪಾವತಿಸಬೇಕು. ಆರು ತಿಂಗಳ ನಂತರವೂ ಮಳೆ ಸಂಗ್ರಹ ವ್ಯವಸ್ಥೆ ಅಳವಡಿಸದಿದ್ದರೆ, ನೀರಿನ ಶುಲ್ಕದ ಶೇ 50ರಷ್ಟು ದಂಡ ವಿಧಿಸಲಾಗುತ್ತದೆ.

'ನೆಮ್ಮದಿಯ ನಾಳೆಗಳಿಗೆ ಇಳೆಗಿಳಿಯಲಿ ಮಳೆನೀರು' ವಿಡಿಯೊ ನೋಡಲು ಈ ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮಳೆ ವೇಳೆ ಹಾಕಿದ ಡಾಂಬರ್ ತೆರವು– ರಸ್ತೆಗೆ ಮರು ಡಾಂಬರೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ಉಪನಗರದ ಸೋಮೇಶ್ವರನಗರದ 3 ಎ ಮುಖ್ಯರಸ್ತೆಯ 2ಎ ಅಡ್ಡ ರಸ್ತೆಯಲ್ಲಿ ಸುರಿವ ಮಳೆಯ ನಡುವೆಯೇ ಇತ್ತೀಚೆಗೆ ಹಾಕಿದ್ದ ಡಾಂಬರನ್ನು ಕಿತ್ತು ಈ ರಸ್ತೆಗಳಿಗೆ ಬಿಬಿಎಂಪಿ ಮರು ಡಾಂಬರೀಕರಣ ಮಾಡಿದೆ.

ಯಲಹಂಕ ಸೋಮೇಶ್ವರನಗರದ 3 ಎ ಮುಖ್ಯರಸ್ತೆಯ 2ಎ ಅಡ್ಡ ರಸ್ತೆಗೆ ಭಾನುವಾರ ಮರುಡಾಂಬರೀಕರಣ ಮಾಡಲಾಗಿದೆ

ವರದಿ ಪರಿಣಾಮ

ಸುರಿವ ಮಳೆಯಲ್ಲೇ ಡಾಂಬರೀಕರಣ ಕಾಮಗಾರಿ ನಡೆಸಿದ ಬಗ್ಗೆ 'ಪ್ರಜಾವಾಣಿ' ಜೂನ್ 4ರ ಸಂಚಿಕೆಯಲ್ಲಿ ವರದಿ ಪ್ರಕಟಿಸಿತ್ತು. ಮಳೆ ಬರುವ ಸಂದರ್ಭದಲ್ಲಿ ಡಾಂಬರೀಕರಣ ನಡೆಸಿದರೆ ಕಾಮಗಾರಿಯ ಗುಣಮಟ್ಟ ಹೇಗೆ ಕಳಪೆ ಆಗಲಿದೆ, ಅದರಿಂದ ರಸ್ತೆಯ ಬಾಳಿಕೆ ಮೇಲೆ ಏನೆಲ್ಲ ದುಷ್ಪರಿಣಾಮ ಉಂಟಾಗಲಿದೆ ಎಂಬ ಬಗ್ಗೆ ತಜ್ಞರ ಅಭಿಪ್ರಾಯ ಸಮೇತ ವಿವರಿಸಿತ್ತು.

'ಪ್ರಜಾವಾಣಿಯಲ್ಲಿ ವರದಿ ಪ್ರಕಟವಾದ ಬಳಿಕ ಬಿಬಿಎಂಪಿ ಅಧಿಕಾರಿಗಳು ಡಾಂಬರನ್ನು ತೆಗೆಯಿಸಿದ್ದರು. ಭಾನುವಾರ ಹೊಸತಾಗಿ ಡಾಂಬರೀಕರಣ ನಡೆಸಲಾಗಿದೆ. ಈ ಸಲದ ಕಾಮಗಾರಿಯ ಗುಣಮಟ್ಟವೂ ಚೆನ್ನಾಗಿದೆ' ಎಂದು ಸ್ಥಳೀಯ ನಿವಾಸಿ ಡಾ.ಆನಂದ ಕುಮಾರ್ ತಿಳಿಸಿದರು.

'ಮಳೆ ಸುರಿವ ಸಂದರ್ಭದಲ್ಲಿ ಡಾಂಬರೀಕರಣ ಕಾಮಗಾರಿ ನಡೆಸದಂತೆ ಕೇಳಿಕೊಂಡರೂ ಗುತ್ತಿಗೆದಾರರು ನಮ್ಮ ಮಾತನ್ನು ಕಿವಿಗೆ ಹಾಕಿಕೊಂಡಿರಲಿಲ್ಲ. ಹಾಕಿದ ಡಾಂಬರನ್ನು ತೆಗೆಯಿಸುವ ಮೂಲಕ ಬಿಬಿಎಂಪಿ ಉತ್ತಮ ಕೆಲಸ ಮಾಡಿದೆ. ನಿಯಮಗಳನ್ನು ಗಾಳಿಗೆ ತೂರಿ ಕಾಮಗಾರಿ ನಡೆಸಿದರೂ ಕೇಳುವವರಿಲ್ಲ ಎಂದು ಭಾವಿಸುವ ಗುತ್ತಿಗೆದಾರರಿಗೆ ಇದೊಂದು ಪಾಠವಾಗಬೇಕು. ಗುಣಮಟ್ಟದಲ್ಲಿ ರಾಜಿ ಮಾಡಿಕೊಂಡರೆ ತಮಗೆ ನಷ್ಟ ಉಂಟಾಗಲಿದೆ ಎಂಬುದು ಪ್ರತಿಯೊಬ್ಬ ಗುತ್ತಿಗೆದಾರರು ಅರ್ಥ ಮಾಡಿಕೊಳ್ಳಬೇಕು' ಎಂದು ಅವರು ತಿಳಿಸಿದರು.

'ಬಿಸಿ ಡಾಂಬರು– ಜಲ್ಲಿ ಮಿಶ್ರಣವು ಕನಿಷ್ಠ ಪಕ್ಷ 160 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವನ್ನು ಹೊಂದಿರಬೇಕು. ಜಲ್ಲಿ–ಡಾಂಬರು ಮಿಶ್ರಣವನ್ನು ರಸ್ತೆಗೆ ಹಾಕುವಾಗ ಅದರ ಉಷ್ಣಾಂಶ ಕಡಿಮೆ ಎಂದರೂ 120 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಇರಬೇಕು. ಅದಕ್ಕಿಂತ ಕಡಿಮೆ ಆದರೆ ರಸ್ತೆಯ ಮೇಲ್ಮೈಗೆ ಮಿಶ್ರಣವು ಸರಿಯಾಗಿ ಅಂಟಿಕೊಳ್ಳುವುದಿಲ್ಲ. ರಸ್ತೆ ಮೇಲ್ಮೈಗೆ ಅಂಟು ಪದರದ ರೂಪದಲ್ಲಿ ಹಾಕುವ ದ್ರವ ಡಾಂಬರು ಕೂಡಾ ಮಳೆ ಬರುವಾಗ ತಣ್ಣಗಾಗುತ್ತದೆ. ಆಗ ರಸ್ತೆಯ ಮೇಲ್ಮೈ ಡಾಂಬರು ಮಿಶ್ರಣವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ. ಜಲ್ಲಿ– ಡಾಂಬರು ಮಿಶ್ರಣ ತಣ್ಣಗಾದ ಬಳಿಕ ಬಳಸಿದರೆ ಅದು ದೋಸೆಯಂತೆ ಕಿತ್ತುಬರುತ್ತದೆ' ಎನ್ನುತ್ತಾರೆ ತಜ್ಞರು.

ಶಿಕ್ಷಕರ ಹಾಜರಾತಿ ವಿನಾಯಿತಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸಕ್ತ ಶೈಕ್ಷಣಿಕ ವರ್ಷ ಜೂನ್ 15ರಿಂದ ಆರಂಭವಾಗುತ್ತಿರುವುದರಿಂದ ಶಾಲೆಗಳಿಗೆ ಶಿಕ್ಷಕರು ಹಾಜರಾಗುವಂತೆ ಆದೇಶ ಹೊರಡಿಸಲಾಗಿದೆ. ಆದರೆ, ರಾಜ್ಯದಾದ್ಯಂತ ಲಾಕ್‌ಡೌನ್ ಸಂಪೂರ್ಣವಾಗಿ ತೆರವುಗೊಳ್ಳದೇ ಇರುವುದರಿಂದ ಸಾರಿಗೆ ವ್ಯವಸ್ಥೆ ಆರಂಭವಾಗುವವರೆಗೂ ನೇರ ಹಾಜರಾತಿಯಿಂದ ಇಲಾಖೆ ವಿನಾಯಿತಿ ನೀಡಬೇಕು' ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಆಗ್ರಹಿಸಿದೆ.

'ಕೆಲವು ಜಿಲ್ಲೆಗಳಲ್ಲಿ ಸಂಪೂರ್ಣ ಲಾಕ್ ಡೌನ್ ಮುಂದುವರಿಯಲಿದೆ. ಕೆಲವು ಜಿಲ್ಲೆಗಳಲ್ಲಿ ಭಾಗಶಃ ಲಾಕ್ ಡೌನ್ ಹೇರಿರುವುದರಿಂದ ಸಾರಿಗೆ ವ್ಯವಸ್ಥೆ ಆರಂಭವಾಗುವುದಿಲ್ಲ. ವಾಹನಗಳ ಓಡಾಟಕ್ಕೂ ನಿರ್ಬಂಧ ವಿಧಿಸಲಾಗಿದೆ. ಹೀಗಾಗಿ, ಶಿಕ್ಷಕರು ಶಾಲೆಗೆ ಹೋಗಲು ಕಷ್ಟವಾಗಲಿದೆ. ಹೀಗಾಗಿ, ವಿನಾಯಿತಿ ನೀಡಬೇಕು' ಎಂದು ಸಂಘದ ಅಧ್ಯಕ್ಷ ಶಂಭುಲಿಂಗನಗೌಡ ಪಾಟೀಲ ಮತ್ತು ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ನುಗ್ಗಿ ಒತ್ತಾಯಿಸಿದರು.

16ರಂದು ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಕಾವೇರಿ 1,2 ಮತ್ತು 3ನೇ ಹಂತದ ಕಾಮಗಾರಿ ಹಾಗೂ ಲ್ಯಾಂಗ್‌ಫೋರ್ಡ್ ಮೆಟ್ರೊ ನಿಲ್ದಾಣದ ಬಳಿ ಹೊಸ ಕೊಳವೆ ಮಾರ್ಗದ ಜೋಡಣಾ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಇದೇ 16ರಂದು ಬೆಳಿಗ್ಗೆ 6ರಿಂದ ರಾತ್ರಿ 12ರವರೆಗೆ ನಗರದ ವಿವಿಧೆಡೆ ನೀರು ಪೂರೈಕೆ ಇರುವುದಿಲ್ಲ ಎಂದು ಜಲಮಂಡಳಿ ಹೇಳಿದೆ.

ಕೆ.ಪಿ.ಅಗ್ರಹಾರ, ನ್ಯೂ ಬಿನ್ನಿ ಬಡಾವಣೆ, ಚಾಮರಾಜಪೇಟೆ, ಪಾದರಾಯನಪುರ, ವಿದ್ಯಾಪೀಠ, ಕತ್ರಿಗುಪ್ಪೆ, ತ್ಯಾಗರಾಜನಗರ, ಬಸವನಗುಡಿ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಅಶೋಕ ನಗರ, ಶ್ರೀನಗರ, ಕುಮಾರಸ್ವಾಮಿ ಬಡಾವಣೆ, ಇಸ್ರೊ ಬಡಾವಣೆ, ಆಸ್ಟಿನ್ ಟೌನ್, ಈಜಿಪುರ, ರಿಚ್ಮಂಡ್ ಟೌನ್, ಎಂ.ಜಿ.ರಸ್ತೆ, ದೊಮ್ಮಲೂರು, ಎಚ್.ಎ.ಎಲ್, ಕೋಡಿಹಳ್ಳಿ, ಹನುಮಂತಪ್ಪ ಬಡಾವಣೆ, ಹಲಸೂರು.

ಆಡುಗೋಡಿ, ಜಯನಗರ, ತಿಲಕನಗರ, ಬೋವಿ ಕಾಲೊನಿ, ಕೋರಮಂಗಲ, ಮಡಿವಾಳ, ಟೆಲಿಕಾಂ ಬಡಾವಣೆ, ಬ್ಯಾಟರಾಯನಪುರ, ವಿವಿ ಪುರ, ಜೆ.ಜೆ.ಆರ್. ನಗರ, ಜನತಾ ಕಾಲೊನಿ, ಯಡಿಯೂರು, ಟೀಚರ್ಸ್ ಕಾಲೊನಿ, ಬನಗಿರಿ ನಗರ, ಇಟ್ಟಮಡು, ಹೊಸಕೆರೆಹಳ್ಳಿ, ಬನಶಂಕರಿ, ಕದಿರೇನಹಳ್ಳಿ, ಪದ್ಮನಾಭನಗರ, ಉತ್ತರಹಳ್ಳಿ, ಎಜಿಎಸ್ ಬಡಾವಣೆ, ಆರೆಹಳ್ಳಿ, ಶಾಂತಿನಗರ, ಬೈರಸಂದ್ರ.

ಎಲ್‌ಐಸಿ ಕಾಲೊನಿ, ಆರ್‌ಬಿಐ ಕಾಲೊನಿ, ಹೊಂಬೇಗೌಡ ನಗರ, ಸಿದ್ದಾಪುರ, ವಿಲ್ಸನ್ ಗಾರ್ಡನ್, ಲಕ್ಕಸಂದ್ರ, ಜೆ.ಪಿ.ನಗರ, ಕುಮಾರ ಪಾರ್ಕ್, ಹೈಗ್ರೌಂಡ್ಸ್, ಸಂಪಂಗಿರಾಮನಗರ, ಪುರಭವನ, ಲಾಲ್‌ಬಾಗ್, ಗುರುರಾಜ ಬಡಾವಣೆ, ಎಸ್‌ಜೆಪಿ ರಸ್ತೆ, ಕೆಆರ್ ಮಾರ್ಕೆಟ್, ಶಿವಾಜಿನಗರ, ಕಾಕ್ಸ್‌ಟೌನ್, ಜೀವನಹಳ್ಳಿ.

ಬೈಯ್ಯಪ್ಪನಹಳ್ಳಿ, ಪಿಳ್ಳಣ್ಣ ಗಾರ್ಡನ್, ಪಿ ಆ್ಯಂಡ್ ಕಾಲೊನಿ, ಡಿಜೆ ಹಳ್ಳಿ, ಯಶವಂತಪುರ, ಮಲ್ಲೇಶ್ವರ, ಜಯಮಹಲ್, ಜೆ.ಸಿ ನಗರ, ಸದಾಶಿವನಗರ, ಪ್ಯಾಲೇಸ್ ಗುಟ್ಟಹಳ್ಳಿ, ಕಾವಲ್ ಬೈರಸಂದ್ರ, ಗಂಗಾ ನಗರ, ಆರ್.ಟಿ. ನಗರ.

ಜೀವನ್ ಬಿಮಾ ನಗರ, ಮರ್ಫಿ ಟೌನ್, ಜೋಗುಪಾಳ್ಯ, ಕೇಂಬ್ರಿಡ್ಜ್ ಲೇಔಟ್, ಗೌತಮ್ ಪುರ, ಇಂದಿರಾನಗರ, ಗಾಂಧಿನಗರ, ಮಾರುತಿಸೇವಾ ನಗರ, ಹಚ್ಚಿನ್ಸ್ ರಸ್ತೆ, ನಾಗವಾರ, ದೀನಬಂಧು ನಗರ, ದೇವಗಿರಿ, ಲಿಂಗರಾಜಪುರ, ಫ್ರೇಜರ್ ಟೌನ್.

ಜಾನಕಿರಾಮ ಬಡಾವಣೆ, ಶೇಷಾದ್ರಿಪುರ, ಕಾಟನ್ ಪೇಟೆ, ಹೊಸಗುಡ್ಡದಹಳ್ಳಿ, ಸಿದ್ದರಾಮಪ್ಪ ಗಾರ್ಡನ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

'ಶಾಲೆಗಳ ನಿರ್ವಹಣಾ ವೆಚ್ಚ ಆಧರಿಸಿ ಶುಲ್ಕ ನಿಗದಿಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನ ಸಂದಿಗ್ಧ ಸಂದರ್ಭದಲ್ಲಿ ಪ್ರತಿ ಖಾಸಗಿ ಶಾಲೆಗಳಿಗೆ ಆಗುತ್ತಿರುವ ಖರ್ಚು ವೆಚ್ಚಗಳನ್ನು ಆಧರಿಸಿ, ಪ್ರತ್ಯೇಕವಾಗಿ ಶುಲ್ಕ ನಿಗದಿಪಡಿಸಬೇಕು. ಸಂಕಷ್ಟದಲ್ಲಿರುವ ಪೋಷಕರ ಹಾಗೂ ಪ್ರಾಮಾಣಿಕವಾಗಿ ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಆಡಳಿತ ಮಂಡಳಿಗಳ ಹಾಗೂ ಶಿಕ್ಷಕರ ಹಿತದೃಷ್ಟಿಯಿಂದ ಶುಲ್ಕ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು' ಎಂದು ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಆರ್. ರಘು ಕೌಟಿಲ್ಯ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದಾರೆ.

'ಬಹುತೇಕ ಎಲ್ಲ ಶಾಲೆಗಳು ಆನ್‌ಲೈನ್‌ನಲ್ಲಿ ತರಗತಿಗಳನ್ನು ನಡೆಸುತ್ತಿರುವುದರಿಂದ ನಿರ್ವಹಣಾ ವೆಚ್ಚ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ಮುಂದಿನ ಶೈಕ್ಷಣಿಕ ಸಾಲಿನಲ್ಲಿಯೂ ಇದೇ ಪರಿಸ್ಥಿತಿ ಮುಂದುವರೆಯುವುದು ನಿಶ್ಚಿತ. ಹೀಗಾಗಿ, ಪ್ರತಿ ಖಾಸಗಿ ಶಾಲೆಗಳಲ್ಲಿರುವ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಯ ಸಂಖ್ಯೆ, ಸಂಬಳ, ಇತರ ಸೌಲಭ್ಯಗಳನ್ನು ಪರಿಗಣಿಸಿ, ಮಾನದಂಡ ನಿಗದಿಪಡಿಸಿ, ನಿರ್ವಹಣೆ ವೆಚ್ಚದ ಆಧಾರದಲ್ಲಿ ಶುಲ್ಕ ನಿಗದಿಪಡಿಸಬೇಕು' ಎಂದು ಅವರು ಸಲಹೆ ನೀಡಿದ್ದಾರೆ.

'ನ್ಯಾಯಾಲಯಕ್ಕೂ ವಸ್ತುಸ್ಥಿತಿ ಮನವರಿಕೆ ಮಾಡಿಕೊಡಬೇಕಾಗಿದೆ. ಪೋಷಕರಿಗೂ ಶುಲ್ಕದ ಹೊರೆ ತಗ್ಗಿಸುವುದು ಶಾಲಾ ಆಡಳಿತ ಮಂಡಳಿಗಳ ಕರ್ತವ್ಯ. ಸಂಕಷ್ಟ ಪರಿಸ್ಥಿತಿಯಲ್ಲಿ ಆಡಳಿತ ಮಂಡಳಿ, ಪೋಷಕರು ಸಮನ್ವಯತೆಯಿಂದ ನಡೆದುಕೊಳ್ಳಬೇಕು. ಎಷ್ಟೋ ಶಾಲೆಗಳ ಆಡಳಿತ ಮಂಡಳಿಗಳು ಶೇ 100 ರಷ್ಟು ಶುಲ್ಕ ಪಾವತಿಸಿಕೊಂಡು ಶಿಕ್ಷಕರು, ಸಿಬ್ಬಂದಿಗೆ ಶೇ 50ರಷ್ಟು ವೇತನ ನೀಡುತ್ತಿವೆ. ಪರಿಸ್ಥಿತಿಯ ಲಾಭ ಪಡೆಯುತ್ತಿರುವ ಅಂಥ ಆಡಳಿತ ಮಂಡಳಿಗಳ ಮೇಲೆ ನಿಯಂತ್ರಣ ಹೇರಬೇಕು' ಎಂದಿದ್ದಾರೆ.

'ಎಸ್‌.ಡಿ.ಎ. ಹುದ್ದೆ: ಮರು ಅರ್ಜಿ ಸಲ್ಲಿಸಲು ಅವಕಾಶ ನೀಡಿ'

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗವು ಎಸ್.ಡಿ.ಎ. ಉಳಿಕೆ ಮೂಲ ವೃಂದದ 1,080 ಹಾಗೂ ಹೈದರಾಬಾದ್ - ಕರ್ನಾಟಕ ವೃಂದದ 199 ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಪ್ರಕಟಿಸಿ ಒಂದು ವರ್ಷ ನಾಲ್ಕು ತಿಂಗಳು ಕಳೆದಿದೆ. ವಿವಿಧ ಕಾರಣಗಳನ್ನು ನೀಡುತ್ತಾ ಪರೀಕ್ಷೆ ಮುಂದೂಡುತ್ತಲೇ ಇದೆ. ಈಗಲಾದರೂ ಪರೀಕ್ಷೆಯ ದಿನಾಂಕ ಪ್ರಕಟಿಸಬೇಕು. ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು' ಎಂದು ಅಭ್ಯರ್ಥಿ ಮಹೇಶ್ ಪಾವಗಡ ಆಗ್ರಹಿಸಿದ್ದಾರೆ.

'ಈ ವರ್ಷದ ಮಾರ್ಚ್ 20 ಹಾಗೂ 21ರಂದು ಪರೀಕ್ಷೆ ನಡೆಸುವುದಾಗಿ ಆಯೋಗ ತಿಳಿಸಿತ್ತು. ಆದರೆ, ಪರೀಕ್ಷೆಗೆ ಎರಡು ವಾರ ಇರುವಾಗ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಇನ್ನಷ್ಟು ಕಾಲಾವಕಾಶ ಬೇಕು ಎಂಬ ನೆಪ ಹೇಳಿ ಪರೀಕ್ಷೆ ಮುಂದೂಡಲಾಗಿದೆ. 2020ರಲ್ಲಿ ಅಧಿಸೂಚನೆ ಪ್ರಕಟಿಸಿ ಒಂದು ಬಾರಿ ಮರು ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಲಾಕ್‌ಡೌನ್ ಇದ್ದ ಕಾರಣ ಕೆಲ ಅಭ್ಯರ್ಥಿಗಳಿಗೆ ಅರ್ಜಿ ಹಾಕಲು ಆಗಿರಲಿಲ್ಲ. ಹೀಗಾಗಿ ಈಗ ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಬೇಕು' ಎಂದಿದ್ದಾರೆ.

ಎನ್‌ಟಿಎಸ್‌ಇ ಫಲಿತಾಂಶ: ಚೈತನ್ಯ ಶಾಲೆ ಸಾಧನೆ

ಬೆಂಗಳೂರು: ರಾಷ್ಟ್ರೀಯ ಪ್ರತಿಭಾಶೋಧ ಪರೀಕ್ಷೆಯ (ಎನ್‌ಟಿಎಸ್‌ಇ) ಮೊದಲ ಹಂತದ ಫಲಿತಾಂಶ ಪ್ರಕಟವಾಗಿದ್ದು, ಮೊದಲ ಐದು ರ‍್ಯಾಂಕ್‌ಗಳು ಶ್ರೀ ಚೈತನ್ಯ ಶಾಲೆಯ ವಿದ್ಯಾರ್ಥಿಗಳ ಪಾಲಾಗಿದೆ.

ಮೊದಲ 10 ರ‍್ಯಾಂಕ್‌ಗಳನ್ನು 17 ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ ಎಂದು ಶಾಲೆಯ ಪ್ರಕಟಣೆ ಹೇಳಿದೆ.

'ಕೇಂದ್ರ ಮತ್ತು ರಾಜ್ಯಸರ್ಕಾರ ನಡೆಸುವ ಈ ಪರೀಕ್ಷೆಯಲ್ಲಿ ರಾಜ್ಯದಲ್ಲಿಯೇ ಹೆಚ್ಚು ವಿದ್ಯಾರ್ಥಿಗಳು ನಮ್ಮ ಶಾಲೆಯಿಂದ ಆಯ್ಕೆಯಾಗಿದ್ದಾರೆ. ಶಾಲೆಯ 66 ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ಆರ್ಥಿಕ ಹಿಂದುಳಿದ ವಿದ್ಯಾರ್ಥಿಗಳ ವರ್ಗದಲ್ಲಿ ರಾಜ್ಯಕ್ಕೇ ಮೊದಲ ರ‍್ಯಾಂಕ್, ಸಾಮಾನ್ಯ ವರ್ಗದಲ್ಲಿ ರಾಜ್ಯಕ್ಕೆ ಎರಡನೇ ರ‍್ಯಾಂಕ್ ನಮ್ಮ ವಿದ್ಯಾರ್ಥಿಗಳ ಪಾಲಾಗಿದೆ. ಮೊದಲ ಹತ್ತು ರ‍್ಯಾಂಕ್‌ಗಳಲ್ಲಿಯೂ ನಮ್ಮ ವಿದ್ಯಾರ್ಥಿಗಳಿದ್ದಾರೆ' ಎಂದು ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಬಿ.ಎಸ್. ರಾವ್ ಹೇಳಿದ್ದಾರೆ.

'ಕಳೆದ ಏಳು ವರ್ಷಗಳಿಂದಲೂ ಎನ್‌ಟಿಎಸ್‌ಇಯಲ್ಲಿ ರಾಜ್ಯದಲ್ಲಿ ನಮ್ಮ ಶಾಲೆಯೇ ಮೊದಲ ಸ್ಥಾನದಲ್ಲಿದೆ' ಎಂದು ಸಂಸ್ಥೆಯ ಶೈಕ್ಷಣಿಕ ವಿಭಾಗದ ನಿರ್ದೇಶಕಿ ಸೀಮಾ ಹೇಳಿದ್ದಾರೆ.

ರಾಮಮಂದಿರ: ಜಮೀನು ಖರೀದಿಯಲ್ಲಿ ಭ್ರಷ್ಟಾಚಾರ ಆರೋಪ

ಲಖನೌ/ಅಯೋಧ್ಯಾ (ಪಿಟಿಐ): ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕಾಗಿ ಜಮೀನು ಖರೀದಿಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ಎಎಪಿಯ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಹಾಗೂ ಸಮಾಜವಾದಿ ಪಕ್ಷದ ಮುಖಂಡ ಪವನ್ ಪಾಂಡೆ ಭಾನುವಾರ ಆರೋಪಿಸಿದ್ದಾರೆ.

'₹ 2 ಕೋಟಿ ಬೆಲೆ ಬಾಳುವ ಈ ಜಮೀನನ್ನು ₹ 18.5 ಕೋಟಿಗೆ ಖರೀದಿಸಲಾಗಿದೆ' ಎಂದು ಅವರು ಆರೋಪಿಸಿದ್ದಾರೆ. ಇದು ಅಕ್ರಮ ಹಣ ವರ್ಗಾವಣೆ ಪ್ರಕರಣದಂತಿದ್ದು, ಈ ಕುರಿತು ಸಿಬಿಐ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನಕಾರ್ಯದರ್ಶಿ ಚಂಪತ್ ರಾಯ್ ಈ ಆರೋಪಗಳನ್ನು ತಳ್ಳಿ ಹಾಕಿದ್ದಾರೆ.

ಸಂಕ್ಷಿಪ್ತ ಸುದ್ದಿ

ವೈದ್ಯರ ಮೇಲೆ ಹಲ್ಲೆ: ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ನಗರದ ಫೋರ್ಟಿಸ್ ಆಸ್ಪತ್ರೆಯಲ್ಲಿ ಕರ್ತವ್ಯ ನಿರತ ವೈದ್ಯರ ಮೇಲಿನ ಹಲ್ಲೆಯನ್ನು ಖಂಡಿಸಿರುವ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್‌ನ (ಫನಾ), ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದೆ.

ಆಸ್ಪತ್ರೆಯಲ್ಲಿ ರೋಗಿಯ ಸಂಬಂಧಿಗಳು ಹಿರಿಯ ವೈದ್ಯ ಡಾ. ಪದ್ಮಕುಮಾರ್ ಎನ್ನುವವರ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಘಟನೆಯ ಬಗ್ಗೆ ಫನಾ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು, ತುರ್ತು ಕ್ರಮಕ್ಕೆ ಒತ್ತಾಯಿಸಿದೆ.

ಹಂಗಾಮಿ ಕುಲಪತಿ ನೇಮಕ ಗಮನಕ್ಕೆ ಬಂದಿಲ್ಲ:ಸುಧಾಕರ್

ಬೆಂಗಳೂರು: 'ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಹಂಗಾಮಿ ಕುಲಪತಿಯಾಗಿ ಡಾ. ಜಯಕರ ಎಸ್.ಎಂ ಅವರನ್ನು ನೇಮಿಸಿರುವ ವಿಷಯ ನನ್ನ ಗಮನಕ್ಕೆ ಬಂದಿಲ್ಲ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಆರೋಗ್ಯ ವಿಶ್ವವಿದ್ಯಾಲಯಕ್ಕೆ ಕುಲಪತಿ ನೇಮಿಸುವ ಸಂಬಂಧ ನಾನು 2–3 ವಾರಗಳ ಹಿಂದೆಯೇ ರಾಜ್ಯಪಾಲರಿಗೆ ಪತ್ರ ಬರೆದು, ಭೇಟಿಗೆ ಸಮಯಾವಕಾಶ ಕೇಳಿದ್ದೆ. ಆದರೆ, ಕೋವಿಡ್‌ನಿಂದಾಗಿ ಅವರು ಯಾರನ್ನೂ ಭೇಟಿ ಮಾಡಿಲ್ಲ' ಎಂದರು.

ಹಾಲಿ ಕುಲಪತಿ ಡಾ. ಎಸ್. ಸಚ್ಚಿದಾನಂದ ಅವರು ಸೋಮವಾರ (ಜೂನ್ 14) ನಿವೃತ್ತಿಯಾಗಲಿದ್ದಾರೆ. ಮಾರುತಿ ದಂತ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಡಾ. ಜಯಕರ ಎಸ್.ಎಂ. ಅವರನ್ನು ಹಂಗಾಮಿ ಕುಲಪತಿಯಾಗಿ ಇದೇ 11ರಂದು ರಾಜ್ಯಪಾಲ ವಜೂಭಾಯಿ ವಾಲಾ ನೇಮಿಸಿದ್ದರು.

ಸಿಂಧೂರಿ ಬೆಂಬಲಿಸಿ ಒಂದೂವರೆ ಲಕ್ಷ ಸಹಿ ಸಂಗ್ರಹ

ಮೈಸೂರು: 'ಮತ್ತೆ ರೋಹಿಣಿ ಸಿಂಧೂರಿ ಕರೆ ತನ್ನಿ' (ಬ್ರಿಂಗ್ ಬ್ಯಾಕ್ ರೋಹಿಣಿ ಸಿಂಧೂರಿ!) ಎಂಬ ಆನ್‌ಲೈನ್ ಸಹಿ ಸಂಗ್ರಹ ಅಭಿಯಾನಕ್ಕೆ ಭಾರಿ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಸಿಂಧೂರಿ ಬೆಂಬಲಿಸಿ ಎರಡು ದಿನಗಳಲ್ಲಿ ಒಂದೂವರೆ ಲಕ್ಷ ಮಂದಿ ಸಹಿ ಹಾಕಿದ್ದಾರೆ. ಆನ್‌ಲೈನ್ ಸಹಿ ಸಂಗ್ರಹ ವೇದಿಕೆಯಾಗಿರುವ ಚೇಂಜ್.ಆರ್ಗ್ (www.change.org) ಸಾಮಾಜಿಕ ಮಾಧ್ಯಮದಲ್ಲಿ 'ಕನ್ಸರ್ನ್ಡ್ ಸಿಟಿಜನ್ ಆಫ್ ಇಂಡಿಯಾ' ಎಂಬ ಹೆಸರಿನಲ್ಲಿ ಶನಿವಾರ ಅಭಿಯಾನ ಆರಂಭವಾಗಿತ್ತು.

ರೋಹಿಣಿ ಸಿಂಧೂರಿ

ಸಿಂಧೂರಿ ಅವರನ್ನು ಮರಳಿ ಮೈಸೂರು ಜಿಲ್ಲಾಧಿಕಾರಿಯನ್ನಾಗಿ ನೇಮಿಸುವಂತೆ ಮನವಿ ಮಾಡಲಾಗುತ್ತಿದ್ದು, ಅವರನ್ನು ಬೆಂಬಲಿಸಿ ಅಭಿಪ್ರಾಯಗಳನ್ನು ದಾಖಲಿಸಲಾಗುತ್ತಿದೆ.

'ಹೈಕಮಾಂಡ್‌ಗೆ ಕಪ್ಪ ಕಾಣಿಕೆ'

ಹುಬ್ಬಳ್ಳಿ: 'ಬಿ.ಎಸ್. ಯಡಿಯೂರಪ್ಪ ಅವರ ಮುಖ್ಯಮಂತ್ರಿ ಸ್ಥಾನವನ್ನು ಭದ್ರಪಡಿಸಲು ಮಗ ವಿಜಯೇಂದ್ರ ಖಾಸಗಿ ವಿಮಾನ ಮಾಡಿಕೊಂಡು ದೆಹಲಿಗೆ ತೆರಳಿ ಕಪ್ಪ ಕಾಣಿಕೆ ನೀಡಿ ಬಂದಿದ್ದಾರೆ' ಎಂದು, ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ ಆರೋಪಿಸಿದರು.

ಇಸ್ರೇಲ್: ನೇತನ್ಯಾಹು ಪದಚ್ಯುತಿ– ನಫ್ತಾಲಿ ನೂತನ ಪ್ರಧಾನಿ

ಜೆರುಸಲೇಮ್ (ಪಿಟಿಐ): ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರನ್ನು ಭಾನುವಾರ ಪದಚ್ಯುತಗೊಳಿಸಲಾಗಿದ್ದು, ನಫ್ತಾಲಿ ಬೆನೆಟ್ ಅವರು ನೂತನ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದರು.

ನೇತನ್ಯಾಹು ಬೆಂಬಲಿಗರ ಗದ್ದಲದ ನಡುವೆಯೇ, ಅವರ ಪದಚ್ಯುತಿಗೆ 120 ಸದಸ್ಯ ಬಲದ ಇಸ್ರೇಲ್ ಸಂಸತ್ ಅನುಮೋದನೆ ನೀಡಿತು. ಇದರೊಂದಿಗೆ ಕಳೆದ 12 ವರ್ಷಗಳಿಂದಲೂ ಪ್ರಧಾನಿಯಾಗಿದ್ದ ನೇತನ್ಯಾಹು ಅವರ ಅಧಿಕಾರ ಕೊನೆಗೊಂಡಂತಾಗಿದೆ.

ನೂತನ ಸರ್ಕಾರದಲ್ಲಿ 9 ಜನ ಮಹಿಳೆಯರು ಸೇರಿ 27 ಜನ ಸಚಿವರಿದ್ದಾರೆ.

ಪ್ರಜಾವಾಣಿ
ನಾನು ಲಸಿಕೆ ಹಾಕಿಸಿಕೊಂಡೆ ನೀವು?

ಲಸಿಕೆ ತೆಗೆದುಕೊಳ್ಳಿ ಕೊರೊನಾ ಹೊಡೆದೋಡಿಸಿ

ಕೊರೊನಾದಿಂದ ಜಗತ್ತೇ ಬಳಲಿದೆ. ಅದರಿಂದ ಆಗಿರುವ ನೋವು, ಯಾತನೆ ನಮ್ಮ ಪ್ರಿಯರಾದವರನ್ನು ಕಳೆದುಕೊಂಡಿದ್ದು, ಒಂದೇ ಎರಡೇ... ಇದೊಂದು ಮಹಾ ಘೋರ ದುರಂತವಾಗಿದೆ. ಈ ಕೊರೊನಾವನ್ನು ನಮ್ಮ ಜಗತ್ತಿನಿಂದ ಹೊಡೆದೋಡಿಸಲು ಒಂದೇ ಉಪಾಯವೆಂದರೆ ನಾವು ಕೊರೊನಾ ಪ್ರತಿರೋಧಕ ಲಸಿಕೆಯನ್ನು ಪಡೆದುಕೊಳ್ಳುವುದು. ದಯವಿಟ್ಟು ನೀವೆಲ್ಲರೂ ಶೀಘ್ರವೇ ಲಸಿಕೆ ತೆಗೆದುಕೊಂಡು ಕೊರೊನಾ ಮಹಾಮಾರಿಯನ್ನು ಹೊಡೆದೋಡಿಸಿ

ಸುಧಾಮೂರ್ತಿ, ಇನ್‌ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ

ಲಸಿಕೆ ಪಡೆಯಿರಿ; ಪಿಡುಗು ತಡೆಯಿರಿ
#ವ್ಯಾಕ್ಸಿನ್‌ಗೆ ಜೈ ಕೊರೊನಾಗೆ ಬೈ

ಚನ್ನಪಟ್ಟಣ ತಾಲ್ಲೂಕಿನ ದೊಡ್ಡಮಳೂರು ಗ್ರಾಮದಲ್ಲಿ ಕೋವಿಡ್‌ನಿಂದ ತಾಯಿ ಸಾವು

‘ಕೆಲಸ ಹಿಡಿದು ತಮ್ಮನನ್ನು ಸಾಕುವೆ’

• ಆರ್.ಜಿತೇಂದ್ರ

ರಾಮನಗರ: ‘ಕುಟುಂಬಕ್ಕೆ ಆಧಾರವಾಗಿದ್ದ ತಾಯಿ ಕೋವಿಡ್ ಸೋಂಕಿಗೆ ಬಲಿಯಾದರು. ಇನ್ನು ಈ ಕುಟುಂಬವನ್ನು ತಾಯಿಯಂತೆ ನಾನೇ ಮುನ್ನಡೆಸುತ್ತೇನೆ. ಯಾವುದಾದರೂ ಒಂದು ಕೆಲಸ ಹಿಡಿದು ತಮ್ಮನನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ’

-ಇದು ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ದೊಡ್ಡಮಳೂರು ಗ್ರಾಮದ ಸುಷ್ಮಾ ಅವರ ಆತ್ಮವಿಶ್ವಾಸದ ಮಾತುಗಳು.

ಇವರು ತಿಂಗಳ ಹಿಂದಷ್ಟೇ ಕೋವಿಡ್‌ನಿಂದ ತಾಯಿ ಲಕ್ಷ್ಮಮ್ಮ ಅವರನ್ನು ಕಳೆದುಕೊಂಡಿದ್ದಾರೆ. ಲಕ್ಷ್ಮಮ್ಮ ಅವರ ಪತಿ ಏಳೆಂಟು ವರ್ಷದ ಹಿಂದಷ್ಟೇ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಾರೆ. ಹೀಗಾಗಿ ಮನೆಯಲ್ಲಿ ಅಕ್ಕ-ತಮ್ಮ ಇಬ್ಬರೇ ಇದ್ದಾರೆ. ಸುಷ್ಮಾ ಅವರ ಚಿಕ್ಕಪ್ಪ ಸಹ ಕಳೆದ ತಿಂಗಳು ಕೋವಿಡ್‌ನಿಂದ ಸಾವನ್ನಪ್ಪಿದ್ದಾರೆ.

22 ವರ್ಷದ ಸುಷ್ಮಾ ದ್ವಿತೀಯ ಪಿಯುವರೆಗೆ ಓದಿದ್ದು, ಮನೆಯಲ್ಲೇ ಇದ್ದಾರೆ. ಅವರ ಸಹೋದರ ರಾಹುಲ್ ಚನ್ನಪಟ್ಟಣದ ಖಾಸಗಿ ಶಾಲೆಯೊಂದರಲ್ಲಿ ಓದುತ್ತಿದ್ದು, ಇದೀಗ ಎಂಟನೇ ತರಗತಿಗೆ ದಾಖಲಾಗಬೇಕಿದೆ. ತಮ್ಮನ ಶಿಕ್ಷಣ, ಕುಟುಂಬ ನಿರ್ವಹಣೆಗಾಗಿ ಸುಷ್ಮಾ ಕೆಲಸ ಹಿಡಿಯುವ ಪ್ರಯತ್ನದಲ್ಲಿ ಇದ್ದಾರೆ.

‘ಏಪ್ರಿಲ್ ತಿಂಗಳ ಕೊನೆಯ ವಾರ ಅಮ್ಮನಿಗೆ ಸಣ್ಣದಾಗಿ ಜ್ವರ ಬಂದಿತು. ಚನ್ನಪಟ್ಟಣದ ಆಸ್ಪತ್ರೆಯೊಂದಕ್ಕೆ ತೆರಳಿ ಚಿಕಿತ್ಸೆ ಪಡೆದು ಬಂದರು. ಅದಾದ ಮೂರು ದಿನಕ್ಕೆ ಜ್ವರ ಕೊಂಚ ಕಡಿಮೆ ಆದರೂ ಮತ್ತೆ ಮತ್ತೆ ಬರುತ್ತಿತ್ತು. ಸುಸ್ತು ಹೆಚ್ಚಾಗುತ್ತಲೇ ಇತ್ತು. ಅಮ್ಮನಿಗೆ ಊಟ ಸೇರುತ್ತಿರಲಿಲ್ಲ.

ಮಕ್ಕಳ ಆಸರೆ ಕಸಿದ ಕೊರೊನಾ

ಗ್ಲುಕೋಸ್ ಮಾತ್ರ ಕೊಡುತ್ತಿದ್ದೆವು. ಕಡೆಗೆ ಮತ್ತೊಮ್ಮೆ ವೈದ್ಯರು ಪರೀಕ್ಷೆ ಮಾಡಿದಾಗ, ಕೋವಿಡ್‌ನಿಂದ ಶ್ವಾಸಕೋಶ ಸಂಪೂರ್ಣ ಹಾಳಾಗಿದೆ. ಸೋಂಕು ಅಂತಿಮ ಹಂತ ತಲುಪಿದೆ. ತುರ್ತಾಗಿ ಆಸ್ಪತ್ರೆಗೆ ಸೇರಿಸಿ ಎಂದಾಗ ನಮ್ಮೆಲ್ಲ ಆಕಾಶವಾಯಿತು’ ಎಂದು ಅಮ್ಮ ಸೋಂಕಿನಿಂದ ನರಳಿದ ಸಂಗತಿಯನ್ನು ಸುಷ್ಮಾ ಬಿಚ್ಚಿಟ್ಟರು.

‘ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಹಾಸಿಗೆ ಸಿಗಲಿಲ್ಲ. ಕಡೆಗೆ ವೈದ್ಯರ ಪತ್ರ ಹಿಡಿದು ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲಿಸಿದೆವು. ಪ್ರತಿ ಗಂಟೆಗೊಮ್ಮೆ ಮೊಬೈಲ್ ಕರೆ ಮಾಡಿ ಮಾತನಾಡುತ್ತ ಇದ್ದೆವು. ಒಂದು ದಿನ ಹೀಗೆ ಮಾತನಾಡುತ್ತಲೇ ಇರುವಾಗ ಅಮ್ಮನ ಮೊಬೈಲ್ ಏಕಾಏಕಿ ಸ್ವಿಚ್ ಆಫ್ ಆಯಿತು. ನಂತರ ಸಂಪರ್ಕಕ್ಕೆ ಸಿಗಲಿಲ್ಲ. ನಾವು ಗಾಬರಿಯಾದೆವು. ಕಡೆಗೆ ಆಸ್ಪತ್ರೆ ದೂರವಾಣಿ ಸಂಖ್ಯೆಗೆ ಕರೆ ಮಾಡಿದಾಗ ತಕ್ಷಣಕ್ಕೆ ಮಾಹಿತಿ ಸಿಗಲಿಲ್ಲ. ನಂತರದಲ್ಲಿ ಅಮ್ಮನಿಗೆ ಶುಗರ್ ಹೆಚ್ಚಾಗಿದ್ದು, ಐಸಿಯುಗೆ ಸ್ಥಳಾಂತರಿಸಿರುವುದಾಗಿ ಹೇಳಿದರು. ಮೇ 3ರಂದು ಅಮ್ಮನ ಸಾವಿನ ಸುದ್ದಿ ಬಂತು’ ಎಂದು ಅವರು ಗದ್ಗದಿತರಾದರು.

ದೊಡ್ಡಮಳೂರಿನ ಹಳೆಯ ಮನೆಯೊಂದರಲ್ಲಿ ಸದ್ಯ ಅಕ್ಕ-ತಮ್ಮ ವಾಸವಿದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದ ಈ ಕುಟುಂಬಕ್ಕೆ ಅಲ್ಪ ಜಮೀನು ಬಿಟ್ಟರೆ ಮತ್ತೇನೂ ಇಲ್ಲ. ಹೀಗಾಗಿ ತಮಗೊಂದು ಒಳ್ಳೆಯ ಕೆಲಸ ಸಿಕ್ಕರೆ, ಪ್ರಾಮಾಣಿಕ ದುಡಿಮೆಯೊಂದಿಗೆ ಉತ್ತಮ ಬದುಕು ಕಟ್ಟಿಕೊಳ್ಳುವ, ತಮ್ಮನ ಭವಿಷ್ಯ ರೂಪಿಸುವುದಾಗಿ ಸುಷ್ಮಾ ಹೇಳುತ್ತಾರೆ.

ನೆರವಿಗೆ ನಿಂತ ಚಿಕ್ಕಮ್ಮ

ಸುಷ್ಮಾ-ರಾಹುಲ್ ಅವರ ಚಿಕ್ಕಮ್ಮ ಗೌರಮ್ಮ ಅವರೇ ಸದ್ಯ ಈ ಕುಟುಂಬಕ್ಕೆ ಹಿರಿಯರಾಗಿದ್ದು, ಮಕ್ಕಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.

ಗೌರಮ್ಮ ಸದ್ಯ ದೊಡ್ಡಮಳೂರಿನಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಗುತ್ತಿಗೆ ಆಧಾರದ ‘ಡಿ’ ಗ್ರೂಪ್ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಪತಿ ಕಿಡ್ನಿ ಸಮಸ್ಯೆಯಿಂದ ತೀರಿಕೊಂಡು ವರ್ಷಗಳೇ ಕಳೆದಿವೆ. ಅವರಿಗೂ ಮೂವರು ಮಕ್ಕಳಿದ್ದು, ಇಬ್ಬರ ಪುತ್ರಿಯರಿಗೆ ಮದುವೆ ಮಾಡಿದ್ದಾರೆ. ಸದ್ಯ ಮನೆಯೊಂದರ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ.

‘ಇದೀಗ ಅನಾಥರಾಗಿರುವ ಈ ಇಬ್ಬರು ಮಕ್ಕಳಿಗೆ ನೆರವಾಗಲು ಬೈರಾಪಟ್ಟಣದಿಂದ ದೊಡ್ಡಮಳೂರಿಗೆ ಸ್ಥಳಾಂತರಗೊಳ್ಳಲು ಅವರು ಯೋಚಿಸುತ್ತಿದ್ದಾರೆ. ಬರುವ ಅಲ್ಪ ಸಂಬಳದಲ್ಲೇ ಈ ಎಲ್ಲ ಮಕ್ಕಳನ್ನು ಸಲಹುವ ಹೊಣೆ ಅವರ ಮೇಲಿದೆ.

ಚಿಂತಾಮಣಿ, ಗೌರಿಬಿದನೂರಿನ ಮೂರು ಮಕ್ಕಳು ಅನಾಥ

32 ಮಕ್ಕಳಿಗೆ ಪರರ ಆಶ್ರಯ ಅನಿವಾರ್ಯ

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಕೋವಿಡ್ ಸೋಂಕಿನಿಂದ ಜಿಲ್ಲೆಯಲ್ಲಿ 32 ಮಕ್ಕಳು ಪರರ ಆಶ್ರಯಕ್ಕೆ ಎದುರು ನೋಡುವಂತಾಗಿದೆ. ಇವರಲ್ಲಿ ಮೂರು ಮಕ್ಕಳು ತಂದೆ, ತಾಯಿಯನ್ನು ಕಳೆದುಕೊಂಡು ಅನಾಥರಾದರೆ, 29 ಮಕ್ಕಳು ತಮ್ಮ ಭವಿಷ್ಯ ರೂಪಿಸುವ ‘ಆಧಾರ’ ಎನ್ನುವಂತಿದ್ದ ತಂದೆಯನ್ನೇ ಕಳೆದುಕೊಂಡಿದ್ದಾರೆ.

ತಮ್ಮ ಮನೆಗಳಲ್ಲಿ ದುಡಿಯುವವರನ್ನು ಕಳೆದುಕೊಂಡಿರುವ ಈ ಮಕ್ಕಳು ವಸತಿ, ಶಿಕ್ಷಣ, ಸುರಕ್ಷತೆ ಮತ್ತೊಬ್ಬರನ್ನು ಆಶ್ರಯಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಒಟ್ಟು 140 ಮಕ್ಕಳು ಕೋವಿಡ್ ಸೋಂಕಿನಿಂದ ತಂದೆ ಅಥವಾ ತಾಯಿಯನ್ನು ಕಳೆದುಕೊಂಡಿದ್ದಾರೆ. ಕೆಲವು ಮಕ್ಕಳ ಪೋಷಕರು ಸರ್ಕಾರಿ ನೌಕರಿಯಲ್ಲಿಯೂ ಇದ್ದರು. ಇವರಲ್ಲಿ 29 ಮಕ್ಕಳ ಮನೆಗಳಲ್ಲಿ ದುಡಿಮೆಗೆ ಆಧಾರವಾಗಿದ್ದವರೇ ಅಸುನೀಗಿದ್ದಾರೆ. ಈ ಕುಟುಂಬಗಳು ಆರ್ಥಿಕವಾಗಿ ತೀರಾ ಹಿಂದುಳಿದಿವೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಮ್ಮದ್ ಉಸ್ಮಾನ್ ‘ಪ್ರಜಾವಾಣಿ’ಗೆ ತಿಳಿಸಿದರು.

ಖುದ್ದು ಮನೆಗಳಿಗೆ ಭೇಟಿ ನೀಡಿ ನಾವು ಅವರ ಸ್ಥಿತಿಗತಿ ಪರಿಶೀಲಿಸಿದ್ದೇವೆ. ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯೂ ಉತ್ತಮವಾಗಿಲ್ಲ. ಸಂಬಂಧಿಕರು ಸಹ ಈ ಮಕ್ಕಳ ನೆರವಿಗಿಲ್ಲ. ಇವರಿಗೆ ಸುರಕ್ಷೆ ಮತ್ತು ಆಶ್ರಯ ಅಗತ್ಯವಿದೆ ಎಂದರು.

ತಂದೆ ಮತ್ತು ತಾಯಿಯನ್ನು ಕಳೆದುಕೊಂಡು ಮೂರು ಮಕ್ಕಳನ್ನು ಅಜ್ಜ, ಅಜ್ಜಿ, ಅತ್ತೆ, ಮಾವ ಹೀಗೆ ಸಂಬಂಧಿಕರ ಆಶ್ರಯದಲ್ಲಿ ಇರಿಸಲಾಗಿದೆ. ಅವರ ಪೋಷಣೆಯ ಬಗ್ಗೆ ನಾವು ಸಹ ನಿಗಾ ಇಟ್ಟಿರುತ್ತೇವೆ. ಸುರಕ್ಷೆ ಅಗತ್ಯವಿರುವ 32 ಮಕ್ಕಳಿಗೆ ‘ಪ್ರಾಯೋಜಕತ್ವ’ ಯೋಜನೆಯಡಿ ತಿಂಗಳಿಗೆ ₹ 1 ಸಾವಿರ ದೊರೆಯುವಂತೆ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡು ಸಂಕಷ್ಟದಲ್ಲಿರುವ ಮಕ್ಕಳು ಕಂಡು ಬಂದರೆ ಮಕ್ಕಳ ಸಹಾಯವಾಣಿ 1098, 14499 ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಬೇಕು ಎಂದು ಕೋರಿದ್ದಾರೆ.

ಅಜ್ಜಿಯ ಆಶ್ರಯದಲ್ಲಿ ಇಬ್ಬರು ಮಕ್ಕಳು

ಜಿಲ್ಲೆಯಲ್ಲಿ ಮೂರು ಮಕ್ಕಳು ಕೋವಿಡ್‌ನಿಂದ ತಂದೆ ತಾಯಿಯನ್ನು ಕಳೆದುಕೊಂಡಿದ್ದಾರೆ.

ತಂದೆ ಮತ್ತು ತಾಯಿಯನ್ನು ಕಳೆದುಕೊಂಡ 19 ವರ್ಷ ಹಾಗೂ 7 ವರ್ಷ ಹೆಣ್ಣು ಮಕ್ಕಳು ಗೌರಿಬಿದನೂರಿನಲ್ಲಿ ಅಜ್ಜಿಯ ಆಶ್ರಯದಲ್ಲಿ ಬೆಳೆಯುತ್ತಿದ್ದಾರೆ. ಈ ಮಕ್ಕಳ ತಂದೆ ವ್ಯಾಪಾರ ಮಾಡಿಕೊಂಡಿದ್ದರು. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿ ಇದ್ದಾರೆ. ಆ ಕುಟುಂಬದ 7 ವರ್ಷದ ಮಗುವಿಗೆ ಯಾವುದಾದರೂ ಉತ್ತಮ ಶಾಲೆಯಲ್ಲಿ ಶೈಕ್ಷಣಿಕ ಸೌಲಭ್ಯ ಕಲ್ಪಿಸಿಕೊಡಿ ಎಂದು ಕೋರಿದ್ದಾರೆ ಎಂದು ಮಹಮ್ಮದ್ ಉಸ್ಮಾನ್ ತಿಳಿಸಿದರು.

ಚಿಂತಾಮಣಿ ತಾಲ್ಲೂಕಿನಲ್ಲಿ 13 ಮತ್ತು 15 ವರ್ಷದ ಸಹೋದರಿಯರ ತಂದೆ, ತಾಯಿ ಮೃತಪಟ್ಟಿದ್ದಾರೆ. ಸದ್ಯ ಈ ಹೆಣ್ಣು ಮಕ್ಕಳು ಸೋದರ ಮಾವನ ಆಶ್ರಯದಲ್ಲಿ ಇದ್ದಾರೆ ಎಂದರು.

ತಾಲ್ಲೂಕು	ಆಶ್ರಯ ಅಗತ್ಯವಿರುವ ಮಕ್ಕಳ ಸಂಖ್ಯೆ
ಬಾಗೇಪಲ್ಲಿ	8
ಚಿಕ್ಕಬಳ್ಳಾಪುರ	6
ಗೌರಿಬಿದನೂರು	7
ಚಿಂತಾಮಣಿ	5
ಗುಡಿಬಂಡೆ	3
ಶಿಡ್ಲಘಟ್ಟ	3
ಒಟ್ಟು	32

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ಜೆಡಿಎಸ್: ಮುಂದೇನು?
ಸಂವಾದದಲ್ಲಿ ಭಾಗವಹಿಸುವವರು

ವೈ.ಎಸ್.ವಿ. ದತ್ತ
ಜೆಡಿಎಸ್ ಮುಖಂಡ

ರಿಜ್ವಾನ್ ಅರ್ಷದ್
ಶಾಸಕ, ಕಾಂಗ್ರೆಸ್ ವಕ್ತಾರ

ವಿ. ಸುನಿಲ್ ಕುಮಾರ್
ಶಾಸಕ, ಸರ್ಕಾರದ ಮುಖ್ಯ ಸಚೇತಕ

ಇಂದು ಮಧ್ಯಾಹ್ನ 12 ರಿಂದ 1

ಬಾಲಕಿಯರ ಶಿಕ್ಷಣಕ್ಕೆ ನೆರವು

ಪ್ರಜಾವಾಣಿ ವಾರ್ತೆ

ಚಿತ್ತಾಪುರ (ಕಲಬುರ್ಗಿ ಜಿಲ್ಲೆ): ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಹಣಕುಣಿ ಗ್ರಾಮದಲ್ಲಿ ತಂದೆ ಮತ್ತು ತಾಯಿ ಕಳೆದುಕೊಂಡ ಬಾಲಕಿಯರಾದ ಅಶ್ವಿನಿ ಮತ್ತು ಮಹಾನಂದಾ ಅವರಿಗೆ ವಿವಿಧ ಸಂಘಸಂಸ್ಥೆಯವರು ನೆರವಿಗೆ ಮುಂದಾಗಿದ್ದಾರೆ.

ಜೂನ್ 13ರ ಪ್ರಜಾವಾಣಿಯ ಸಂಚಿಕೆಯಲ್ಲಿ ಪ್ರಕಟವಾದ ‘ಅವ್ವ ನಿತ್ಯ ಕಣ್ಮುಂದೆ ಬರುತ್ತಿದ್ದಾಳೆ’ ಎಂಬ ಬೀದರ್‌ನ ವಿಶೇಷ ವರದಿ ಗಮನಿಸಿ ಬಾಲಕಿಯರ ಮನೆಗೆ ಭೇಟಿ ನೀಡಿದ ಕಲಬುರ್ಗಿ ಜಿಲ್ಲೆಯ ಚಿತ್ತಾಪುರದ ವಿಶ್ವಗುರು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ನಾಗರೆಡ್ಡಿ ಪಾಟೀಲ ಕರದಾಳ ಅವರು ‘ಪದವಿಯವರೆಗಿನ ಇಬ್ಬರ ಶಿಕ್ಷಣ ವೆಚ್ಚವನ್ನು ಭರಿಸುವೆ ಮತ್ತು ಸ್ವಾವಲಂಬನೆಯ ಬದುಕಿಗೆ ನೆರವಾಗುವೆ’ ಎಂದರು.

ಹುಮನಾಬಾದ್ ಶಾಸಕ ರಾಜಶೇಖರ ಪಾಟೀಲ ಅವರು ₹50 ಸಾವಿರ ಕೊಟ್ಟು, ಶಿಕ್ಷಣದ ವೆಚ್ಚ ಭರಿಸುವ ಭರವಸೆ ನೀಡಿದರು. ಬಿಜೆಪಿ ಮುಖಂಡ ಸಿದ್ದು ಪಾಟೀಲ ₹ 10 ಸಾವಿರ ನೀಡಿದರು.

‘ಚಿತ್ತಾಪುರದಲ್ಲಿ ನಮ್ಮ ಶಿಕ್ಷಣ ಸಂಸ್ಥೆಯಡಿ ಪ್ರಾಥಮಿಕ ಶಿಕ್ಷಣದಿಂದ ಪದವಿಯವರೆಗೆ ಶಾಲಾ-ಕಾಲೇಜುಗಳಿವೆ. ಅಲ್ಲಿಯೇ ಬಂದು ಓದುವುದಾದರೆ ಸಂಪೂರ್ಣ ಉಚಿತ ಶಿಕ್ಷಣದ ಜೊತೆಗೆ ಬಾಲಕಿಯರಿಬ್ಬರು ಮತ್ತು ಅವರ ಸೋದರತ್ತೆಯವರ ವಸತಿಗಾಗಿ ಎರಡು ಕೋಣೆಗಳ ಮನೆ ಸೌಲಭ್ಯ ಕಲ್ಪಿಸಲಾಗುವುದು. ತಿಂಗಳಿಗೆ ₹ 10 ಸಾವಿರ ಖರ್ಚು, ಉಚಿತ ಬಟ್ಟೆ, ಪಠ್ಯಪುಸ್ತಕದ ವ್ಯವಸ್ಥೆ ಮಾಡಲಾಗುವುದು’ ಎಂದು ಕರದಾಳ ಹೇಳಿದರು.

ಬಾಲಕಿಯರ ಬ್ಯಾಂಕ್ ಖಾತೆ ವಿವರ: ಮಹಾನಂದಾ ತಿಪ್ಪಾರೆಡ್ಡಿ ಎಸ್‌ಬಿಐ ಖಾತೆ 3852 8081 989, ಐಎಫ್‌ಎಸ್‌ಸಿ: ಎಸ್‌ಬಿಐಎನ್ 0006028 ಹಾಗೂ ಅಶ್ವಿನಿ ತಿಪ್ಪಾರೆಡ್ಡಿ ಎಸ್‌ಬಿಐ ಖಾತೆ 3728 9677 897, ಐಎಫ್‌ಎಸ್‌ಸಿ: ಎಸ್‌ಬಿಐಎನ್ 0006028

ರಾಜ್ಯದ ವಿವಿಧೆಡೆ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕರಾವಳಿ ಹಾಗೂ ಇತರ ಕೆಲವು ಜಿಲ್ಲೆಗಳಲ್ಲಿ ಭಾನುವಾರ ಧಾರಾಕಾರ ಮಳೆಯಾಗಿದೆ. ಕೆಲವೆಡೆ ವಿದ್ಯುತ್ ಕಂಬಗಳ ಮೇಲೆ ಮರಗಳು ಬಿದ್ದ ಪರಿಣಾಮ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿ ಜನರು ಪರದಾಡಬೇಕಾಯಿತು.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಭಾನುವಾರ ಉತ್ತಮ ಮಳೆ ಸುರಿಯಿತು. ಪುತ್ತೂರು, ಬೆಳ್ತಂಗಡಿ, ಬಂಟ್ವಾಳ, ಸುಳ್ಯ ತಾಲ್ಲೂಕುಗಳಲ್ಲಿ ಧಾರಾಕಾರ ಮಳೆಯಾಗಿದೆ.

ಜಿಲ್ಲೆಯಲ್ಲಿ ಒಟ್ಟು 14 ಮನೆಗಳಿಗೆ ಹಾನಿಯಾಗಿದೆ. ಮೂಲ್ಕಿ ರೈಲು ನಿಲ್ದಾಣ ಸಮೀಪ ಮರ ಬಿದ್ದು ವಿದ್ಯುತ್ ಪರಿವರ್ತಕ ಸಹಿತ 8 ವಿದ್ಯುತ್ ಕಂಬಗಳು ಧರೆಗೆ ಉರುಳಿವೆ. ಪಕ್ಷಿಕೆರೆ ಸಮೀಪದ ಪಂಜ ಬಳಿ ಮರ ಬಿದ್ದು, ಏಳು ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ.

ಬಿರುಸಿನ ಮಳೆಗೆ ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ನಿಟ್ಟೆ, ಮಿಯಾರು, ಕಾಂತಾವರ, ಮಾಳ ಗ್ರಾಮದಲ್ಲಿ 9 ಮನೆಗಳಿಗೆ ಹಾನಿಯಾಗಿದೆ. ಕಾಪು ತಾಲ್ಲೂಕಿನ ನಂದಿಕೂರು, ಪಡು, ಮಲ್ಲಾರು, ತೆಂಕು, ನಾಡ್ಸಾಲು ಗ್ರಾಮಗಳಲ್ಲಿ 6 ಮನೆಗಳ ಮೇಲೆ ಮರ ಬಿದ್ದಿವೆ. ಬೈಂದೂರು, ಕುಂದಾಪುರ, ಹೆಬ್ರಿ, ಬ್ರಹ್ಮಾವರ, ಉಡುಪಿ ತಾಲ್ಲೂಕುಗಳಲ್ಲಿ ಮಳೆಯಾಗಿದೆ.

ಕಾಫಿನಾಡಿನ ವಿವಿಧೆಡೆ ಉತ್ತಮ ಮಳೆಯಾಗಿದೆ. ಎನ್.ಆರ್.ಪುರ, ಕೊಟ್ಟಿಗೆಹಾರ, ಶೃಂಗೇರಿ ಭಾಗದಲ್ಲಿ ಮಳೆ ಬಿರುಸಾಗಿ ಸುರಿದಿದೆ. ಚಿಕ್ಕಮಗಳೂರು, ಮೂಡಿಗೆರೆ, ಕೊಪ್ಪ, ತರೀಕೆರೆ ಭಾಗದಲ್ಲಿ ಸಾಧಾರಣವಾಗಿ ಸುರಿದಿದೆ. ಮಳೆಯೊಂದಿಗೆ ಗಾಳಿಯ ಆರ್ಭಟವೂ ಜೋರಾಗಿ ಇತ್ತು. ಹೇಮಾವತಿ, ಭದ್ರಾ, ಸೋಮವಾಹಿನಿ ಹೊಳೆಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ.

ಕೊಡಗು ಜಿಲ್ಲೆಯಲ್ಲಿ ಭಾನುವಾರ ದಿನವಿಡೀ ಧಾರಾಕಾರ ಮಳೆಯಾಗಿದೆ. ನಾಪೋಕ್ಲು ಭಾಗದಲ್ಲಿ ನಿರಂತರ ಗಾಳಿ, ಮಳೆಗೆ ಮರಗಳು ವಿದ್ಯುತ್ ಕಂಬಗಳ ಮೇಲೆ ಉರುಳಿದ್ದು, ವಿದ್ಯುತ್ ವ್ಯತ್ಯಯ ಉಂಟಾಗಿತ್ತು. ಸೋಮವಾರಪೇಟೆಯ ಬಿ.ಟಿ ಕಟ್ಟೆ ಹಾಗೂ ಶನಿವಾರಸಂತೆ ಸಮೀಪದ ಗುಡುಗಳಲೆಯಲ್ಲಿ ರಸ್ತೆಗೆ ಉರುಳಿದ್ದ ಬೃಹತ್ ಮರಗಳನ್ನು ತೆರವು ಮಾಡಿ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡಿದೆ.

ಉತ್ತರ ಕನ್ನಡ, ವಿಜಯನಗರ, ವಿಜಯಪುರ ಜಿಲ್ಲೆಗಳಲ್ಲಿ ಭಾನುವಾರ ಧಾರಾಕಾರ ಮಳೆಯಾಗಿದೆ. ಕರಾವಳಿಯಲ್ಲಿ ಮುಂಗಾರು ಮಳೆ ಚುರುಕಾಗಿದ್ದು, ಕಾರವಾರ ನಗರದಲ್ಲಿ ಶನಿವಾರ ತಡರಾತ್ರಿ ಮತ್ತು ಭಾನುವಾರ ದಿನವಿಡೀ ಆಗಾಗ ಜೋರಾಗಿ ಮಳೆಯಾಯಿತು.

ಅಂಕೋಲಾದಲ್ಲಿ ಜೋರಾಗಿ ಗಾಳಿಯೂ ಜೊತೆಯಾಗಿತ್ತು. ಉಳಿದಂತೆ, ಕರಾವಳಿ ತಾಲ್ಲೂಕುಗಳಲ್ಲಿ ಬೆಳಿಗ್ಗೆಯಿಂದಲೇ ದಟ್ಟವಾದ ಮೋಡ ಕವಿದು ಬಿಟ್ಟುಬಿಟ್ಟು ಮಳೆ ಬಂತು. ಹೊಸಪೇಟೆ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಉತ್ತಮ ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಭಾನುವಾರ ಹಲವೆಡೆ ಜೋರು ಮಳೆಯಾಗಿದ್ದು, ವಿವಿಧೆಡೆ ಬಿಡುವು ನೀಡದೆ ನಿರಂತರವಾಗಿ ಮಳೆ ಸುರಿದಿದೆ.

ತೀರ್ಥಹಳ್ಳಿ, ಸಾಗರ, ಹೊಸನಗರ ತಾಲ್ಲೂಕಿನಾದ್ಯಂತ ಭಾರಿ ಮಳೆಯಾಗುತ್ತಿದೆ. ಭದ್ರಾವತಿ, ಶಿಕಾರಿಪುರ ತಾಲ್ಲೂಕಿನಲ್ಲಿ ಚದುರಿದಂತೆ ಮಳೆ ಸುರಿದಿದೆ.

ಚಿತ್ರದುರ್ಗ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗಿದೆ. ದಾವಣಗೆರೆ ನಗರ ಸೇರಿ ಜಗಳೂರು, ನ್ಯಾಮತಿ, ತ್ಯಾವಣಗಿ, ಮಲೇಬೆನ್ನೂರು ಹಾಗೂ ಹರಪನಹಳ್ಳಿಯಲ್ಲಿ ಮಳೆಯಾಗಿದೆ.

ಭಾನುವಾರ ಸುರಿದ ಮಳೆಯ ವೇಳೆ ಮಂಗಳೂರಿನಲ್ಲಿ ಜನರು ಪ್ರಯಾಸದಿಂದ ವಾಹನ ಚಲಾಯಿಸಿದರು

ಏಳು ಜಿಲ್ಲೆಗಳಲ್ಲಿ ‘ಆರೆಂಜ್ ಅಲರ್ಟ್’

ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಮುಂಗಾರು ಚುರುಕಾಗಿರುವುದರಿಂದ ಜೂ.14 ರಿಂದ 16ರವರೆಗೆ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಮೂರೂ ದಿನ ‘ಆರೆಂಜ್ ಅಲರ್ಟ್’ ಘೋಷಿಸಲಾಗಿದೆ. ಕರಾವಳಿಯಲ್ಲಿ ಗಂಟೆಗೆ 55 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು’ ಎಂದು ಇಲಾಖೆ ಎಚ್ಚರಿಸಿದೆ.

ಮಳೆ-ಎಲ್ಲಿ,ಎಷ್ಟು?: ಆಗುಂಬೆಯಲ್ಲಿ 18 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಮಂಕಿ 16, ಗೋಕರ್ಣ 12, ಭಟ್ಕಳ, ಭಾಗಮಂಡಲ 9, ಕಾರವಾರ, ಬೆಳ್ತಂಗಡಿ 8, ಕಾರ್ಕಳ, ಮೂಡುಬಿದರೆ 7, ಕುಂದಾಪುರ 6, ಮಂಗಳೂರಿನಲ್ಲಿ 5 ಸೆಂ.ಮೀ ಮಳೆಯಾಗಿದೆ.

ಪ್ರೊ. ಎಚ್.ಎಂ. ಮಹೇಶ್ವರಯ್ಯ ನಿಧನ

ಧಾರವಾಡ: ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ, ಭಾಷಾಶಾಸ್ತ್ರ ವಿದ್ವಾಂಸ, ಸಾಹಿತಿ ಪ್ರೊ.ಎಚ್.ಎಂ.ಮಹೇಶ್ವರಯ್ಯ (71) ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ಕರ್ನಾಟಕ ಕಾಲೇಜಿನ ನಿವೃತ್ತ ಪ್ರಾಚಾರ್ಯೆ ಪ್ರೊ. ರಾಜೇಶ್ವರಿ ಮಹೇಶ್ವರಯ್ಯ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ನಿವೃತ್ತಿ ಬಳಿಕ ಧಾರವಾಡದ ಕಲ್ಯಾಣನಗರದಲ್ಲಿ ವಾಸವಾಗಿದ್ದರು.

ಅವರಿಗೆ ತಿಂಗಳ ಹಿಂದೆ ಕೋವಿಡ್ ತಗುಲಿತ್ತು. ಹುಬ್ಬಳ್ಳಿ ಕಿಮ್ಸ್‌ನಲ್ಲಿ ಚಿಕಿತ್ಸೆ ಪಡೆದು ಗುಣಮುಖರಾದ ಬಳಿಕ ಮನೆ ಮರಳಿದ್ದರು. ಮತ್ತೆ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಹಿತ್ತಲ ಗ್ರಾಮದವರಾದ ಅವರು 1950ರ ನವೆಂಬರ್ 14 ರಂದು ಜನಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿ ಪಡೆದಿದ್ದರು. ರಾಷ್ಟ್ರೀಯ ಪರೀಕ್ಷಾ ಸೇವಾ ಆಯೋಗ ಮತ್ತು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಮೈಸೂರಿನಲ್ಲಿ ರಾಷ್ಟ್ರೀಯ ಅನುವಾದ ಮಿಷನ್‌ನಿಂದ ತರಬೇತಿ ಪಡೆದಿದ್ದರು. ನಂತರ ಅವರು ಲಂಡನ್ ವಿವಿ ಮತ್ತು ಫಿಲಿಡೆಲ್ಫಿಯಾ ವಿವಿಗಳಿಂದ ಭಾಷಾ ಧ್ವನಿಶಾಸ್ತ್ರದ ತರಬೇತಿ ಪಡೆದಿದ್ದರು.

ಕವಿವಿ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದ ನಿರ್ದೇಶಕ, ಕೇಂದ್ರೀಯ ಭಾರತೀಯ ಭಾಷಾ ಸಂಸ್ಥೆ ಹಿರಿಯ ಪ್ರಾಧ್ಯಾಪಕ, ಮೈಸೂರು ಕನ್ನಡ ಶಾಸ್ತ್ರೀಯ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಭಾರತದ ಅನೇಕ ವಿವಿಗಳಲ್ಲಿ ಉಪನ್ಯಾಸಗಳನ್ನು ನೀಡಿದ್ದರು. ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರದಲ್ಲಿ ಸೆಂಟರ್ ಫಾರ್ ಅಡ್ವಾನ್ಸ್ಡ್ ಸ್ಟಡಿ ಇನ್ ವಿಸಿಟಿಂಗ್ ಫೆಲೋ ಆಗಿ ಸೇವೆ ಸಲ್ಲಿಸಿದ್ದರು. ಬ್ಯಾಂಕಾಕ್ ಹಾಗೂ ಜರ್ಮನಿಯಲ್ಲಿ ಭಾಷಾ ವಿಜ್ಞಾನ ಕುರಿತು ಉಪನ್ಯಾಸಗಳನ್ನು ನೀಡಿದ್ದರು.

‘ಪೂರ್ಣಚಂದ್ರ ತೇಜಸ್ವಿ’,‘ಮಹಾರಾಷ್ಟ್ರ ಜಾನಪದ’ ಇವರ ಪ್ರಮುಖ ಕೃತಿಗಳು. ‘ಕರ್ನಾಟಕದ ಭಾಷೆಗಳು’ ಸಂಪಾದಿತ ಕೃತಿ. ಕನ್ನಡ ಭಾಷೆ ಹಾಗೂ ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ‘ಎಂ.ಎ.ಕಲಬುರ್ಗಿ ರಾಷ್ಟ್ರೀಯ ಸಾಹಿತ್ಯ ಸಂಶೋಧನಾ ಪ್ರಶಸ್ತಿ’ ನೀಡಿ ಗೌರವಿಸಲಾಗಿದೆ.

ಅವರ ಅಂತ್ಯಕ್ರಿಯೆ ಕರ್ನಾಟಕ ವಿವಿ ರುದ್ರಭೂಮಿಯಲ್ಲಿ ಸೋಮವಾರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಯಗಚಿ ಯೋಜನಾ ವಿಭಾಗ, ಬೇಲೂರು, ಹಾಸನ ಜಿಲ್ಲೆ
ಟೆಂಡರ್ ರದ್ದು ಪಡಿಸುವ ಬಗ್ಗೆ
ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನ ದ್ವಾರಸಮುದ್ರ ಮತ್ತು ಇತರೆ 06 ಕೆರೆಗಳನ್ನು ಹಾಗೂ ಚಿಕ್ಕಮಗಳೂರು ತಾಲ್ಲೂಕಿನ ಬೆಳವಾಡಿ ಕೆರೆಯನ್ನು ರಣಘಟ್ಟ ಪಿಕರ್ ವಿಯರ್ ತಿರುವಿನಿಂದ ಕೆರೆ ತುಂಬಿಸುವ ಕಾಮಗಾರಿಗೆ (ಟೆಂಡರ್‌ಗಿಟ್ಟ ಮೊತ್ತ ರೂ.9720.00 ಲಕ್ಷಗಳು) ಕರೆಯಲಾಗಿದ್ದ ಟೆಂಡರ್ ಪ್ರಕಟಣೆ ಸಂಖ್ಯೆ:03/2021-22 ದಿನಾಂಕ:04-06-2021 ನ್ನು ಕಾರಣಾಂತರಗಳಿಂದ ರದ್ದುಪಡಿಸಲಾಗಿದೆ.
ಸಹಿ/-ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ, ಯಗಚಿ ಯೋಜನಾ ವಿಭಾಗ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/143/2020-21

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ BENGALURU NORTH UNIVERSITY
ಶ್ರೀ ದೇವರಾಜು ಅರಸು ಬಡಾವಣೆ, ಟಮಕ, ಕೋಲಾರ-563 103
ದೂರವಾಣಿ: 08152-243152, 53,
ಇ-ಮೇಲ್: registrar@bnu.ac.in, ವೆಬ್‌ಸೈಟ್: http://bnu.ac.in
ಸಂಖ್ಯೆ: ಬೆಂ.ಉ.ವಿ/ಎಸಿಎ-ಸಂ.ನ/343/2021-22 ದಿನಾಂಕ: 12.06.2021
ಅಧಿಸೂಚನೆ
ವಿಷಯ: 2021-22ನೇ ಶೈಕ್ಷಣಿಕ ಸಾಲಿಗೆ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಸಂಯೋಜನೆಗೆ ಅರ್ಜಿ ಸಲ್ಲಿಸುವ ಬಗ್ಗೆ.
ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು 2021-22 ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾಲಯದ ಭೌಗೋಳಿಕ ವ್ಯಾಪ್ತಿಯಲ್ಲಿ ಅಂದರೆ, ಕರ್ನಾಟಕ ವಿಶ್ವವಿದ್ಯಾಲಯ ಅಧಿನಿಯಮ (ತಿದ್ದುಪಡಿ) 2015ರ ಅನ್ವಯ ಕರ್ನಾಟಕ ರಾಜ್ಯ ಪತ್ರ ಭಾಗ – IV – A ನಂ. 922, ದಿನಾಂಕ: 13 ಆಗಸ್ಟ್ 2015ರಲ್ಲಿ ಪ್ರಕಟಿಸಿರುವಂತೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಕೋಲಾರ ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ಹೊಸಕೋಟೆ, ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರಗಳು ಹಾಗೂ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಕೆ. ಆರ್. ಪುರಂ, ಸಿ. ವಿ. ರಾಮನ್‌ನಗರ, ಪುಲಕೇಶಿನಗರ, ಮಹದೇವಪುರ ಮತ್ತು ಸರ್ವಜ್ಞನಗರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಕಾಲೇಜುಗಳು ಮತ್ತು ಅರ್ಹ ಶಿಕ್ಷಣ ಸಂಸ್ಥೆಗಳಿಂದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ, ಬಿ.ಇಡಿ, ಬಿ.ಪಿಇಡಿ.ಎಂ.ಇಡಿ ಕೋರ್ಸುಗಳ ವಾರ್ಷಿಕ ಸಂಯೋಜನೆಯ ಮುಂದುವರಿಕೆ, ಶಾಶ್ವತ ಸಂಯೋಜನೆ, ಹೊಸ ಕೋರ್ಸುಗಳು, ಹಾಲಿ ಇರುವ ಕೋರ್ಸುಗಳಿಗೆ ಹೆಚ್ಚುವರಿ ಸ್ಥಾನಗಳ ಶಿಫಾರಸ್ಸು, ಕಾಲೇಜು ಹೆಸರು ಬದಲಾವಣೆ, ಕಾಲೇಜಿನ ವಿಳಾಸ ಬದಲಾವಣೆ, ಹೊಸ ಕಾಲೇಜುಗಳ ಸ್ಥಾಪನೆ, ಕಾಲೇಜು ಮುಚ್ಚುವಿಕೆ ಇತ್ಯಾದಿ ವಿವಿಧ ರೀತಿಯ ಸಂಯೋಜನೆಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಮತ್ತು 62ರ ಅನ್ವಯ ಮತ್ತು ಉನ್ನತ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ ಇಡಿ.34 ಇಜಿಎವಿ2020 (ಭಾಗ-2), ಬೆಂಗಳೂರು, ದಿನಾಂಕ: 10.06.2021 ರ ಅನ್ವಯ ಸಂಬಂಧಿಸಿದ ಕಾಲೇಜು ಮತ್ತು ವಿದ್ಯಾಸಂಸ್ಥೆಗಳಿಂದ ಸೂಕ್ತ ದಾಖಲೆಗಳೊಂದಿಗೆ ಆನ್‌ಲೈನ್ (www.onlineaffiliation.karnataka.gov.in) ಮೂಲಕ ಅರ್ಜಿ ಆಹ್ವಾನಿಸಿದೆ.
ವಿವಿಧ ರೀತಿಯ ಸಂಯೋಜನೆಗಳಿಗೆ ನಿಗದಿತ ಶುಲ್ಕವನ್ನು ವಿತ್ತಾಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಇವರ ಹೆಸರಿಗೆ ಆನ್‌ಲೈನ್/ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ/ ಮೂಲಕ ಬ್ಯಾಂಕ್ ಖಾತೆ ಸಂಖ್ಯೆ: 5076101004383, IFSC No.: CNRB0005076 ಕೆನರಾ ಬ್ಯಾಂಕ್ ಟಮಕ, ಕೋಲಾರ, ರವರಿಗೆ ಪಾವತಿಸಲು ಸೂಚಿಸಿದೆ. ವಿವಿಧ ರೀತಿಯ ಸಂಯೋಜನೆಗೆ ಸಂಬಂಧಿಸಿದ ಶುಲ್ಕದ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್: http://bnu.ac.in ನಲ್ಲಿ ನೋಡಬಹುದು.
(1) ಆನ್‌ಲೈನ್ ಅರ್ಜಿ ಶುಲ್ಕ : Rs 1,100/-. (2) ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ದಂಡ ಶುಲ್ಕ ರಹಿತವಾಗಿ ಸಲ್ಲಿಸಲು ಕೊನೆಯ ದಿನಾಂಕ: 23-06-2021. (3) ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ದಂಡ ಶುಲ್ಕ ರೂ.500/- ರೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ: 25-06-2021. (4) ಆನ್‌ಲೈನ್ ಅರ್ಜಿಗಳನ್ನು (8 ಮುದ್ರಿತ ಪ್ರತಿಗಳು) ಅಗತ್ಯ ಆವರಣಗಳೊಂದಿಗೆ ಭೌತಿಕವಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ: 29-06-2021. (5) ಅರ್ಜಿ ಸಲ್ಲಿಸುವ ವೆಬ್‌ಸೈಟ್ ವಿಳಾಸ: www.onlineaffiliation.karnataka.gov.in
ವಿಶ್ವವಿದ್ಯಾಲಯದಲ್ಲಿ ಹಾಲಿ ಲಭ್ಯವಿರುವ ವಿವಿಧ ಕೋರ್ಸುಗಳು ಹಾಗೂ 2021-22 ನೇ ಸಾಲಿಗೆ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ನೂತನ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್: http://bnu.ac.in ನಲ್ಲಿ ಪಡೆದುಕೊಳ್ಳುವುದು.
Helpline Nos.:-
72599 75551, 99727 64051
ಸಹಿ/-
ಡಾ॥ ವೆಂಕಟೇಶ ಮೂರ್ತಿ ವಿ., ಕೆ.ಎ.ಎಸ್.
ಕುಲಸಚಿವರು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಮುಖ್ಯ ಅಭಿಯಂತರರ ಕಛೇರಿ (ಕಾವೇರಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009
ಸಂಖ್ಯೆ: ಬೆಂಜಮಂ/ಸಿಇಕೆಟಿಇ/ತಾಂಸ10/80/2020/353/2021-22 ದಿನಾಂಕ: 08.06.2021
ಮೂರುವಿವಿಧ ಸ್ಥಳಗಳಲ್ಲಿ (ಟಿ.ಕೆ.ಹಳ್ಳಿ, ಹಾರೋಹಳ್ಳಿ ಮತ್ತು ತಾತಗುಣಿ) 8 ಎಂವಿಎ, 66ಕೆವಿ/6.6ಕೆವಿ ಸಾಮರ್ಥ್ಯದ ಎರಡು ಹೊಸದಾದ ಪವರ್ ಟ್ರಾನ್ಸ್‌ಫಾರ್ಮರ್ ಅನ್ನು ಖರೀದಿಸಿ, ಸ್ಥಾಪಿಸಿ, ಕಾರ್ಯಾಚರಣೆಗೊಳಿಸುವ ಕಾಮಗಾರಿ.
ಟೆಂಡರ್‌ಗಿಟ್ಟ ಮೊತ್ತ: ರೂ. 2,41,85,493/–. ಇಎಂಡಿ: ರೂ. 3,62,800/–.
ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 15.07.2021ರ ಮಧ್ಯಾಹ್ನ 3:00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 17.07.2021 ರಂದು ಸಂಜೆ 4:00 ಗಂಟೆಗೆ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 20.07.2021 ರಂದು ಸಂಜೆ 4:00 ಗಂಟೆಗೆ.
ಸಹಿ/–
ಮುಖ್ಯ ಅಭಿಯಂತರರು (ಕಾವೇರಿ)
ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009
ಸಂಖ್ಯೆ: ಬೆಂಜಮಂ/ಮುಅ(ತ್ಯಾನೀನಿ)/ಅಮುಅ(ತ್ಯಾನೀನಿ)-1/ತಾಂಸ-1/340/2021-22 ದಿನಾಂಕ: 10.06.2021
ಸಕಾನಿಅ (ಎಸ್‌ಟಿಪಿ) ಕೆ ವ್ಯಾಲಿ ಅಡಿಯಲ್ಲಿ ಬರುವ ಬೆಳ್ಳಂದೂರು ಅಮಾನಿಕೆರೆಯಲ್ಲಿ 32.5 ಎಂಎಲ್‌ಡಿ ಸಾಮರ್ಥ್ಯದ ಮಧ್ಯಂತರ ಒಳಚರಂಡಿ ಪಂಪಿಂಗ್ ಸ್ಟೇಷನ್ (ಐಎಸ್‌ಪಿಎಸ್) ಅನ್ನು ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವ ಕಾಮಗಾರಿ.
ಟೆಂಡರ್‌ಗಿಟ್ಟ ಮೊತ್ತ: ರೂ. 172.84 ಲಕ್ಷಗಳು. ಇಎಂಡಿ: ರೂ. 2.59 ಲಕ್ಷಗಳು.
ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 28.06.2021ರ ಸಂಜೆ 5:30 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 30.06.2021 ರಂದು ಸಂಜೆ 4:00 ಗಂಟೆಗೆ.
ಸಹಿ/–
ಮುಖ್ಯ ಅಭಿಯಂತರರು (ತ್ಯಾನೀನಿ)
ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/DDU/MIA/520/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಒಳನೋಟ
ಪಿಡುಗಿನ ಜತೆ ಬೆಲೆ ಸಂಕಷ್ಟ

ಬೆಂಗಳೂರು: ‘ಕೋವಿಡ್ ಬಾಣಲೆ: ಬೆಲೆಯ ‘ಬಲೆ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಜೂ.13) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಪ್ರತಿಪಕ್ಷಗಳೂ ಮೌನ ತಾಳಿವೆ



ಪೆಟ್ರೋಲ್ ಮತ್ತು ಅಡುಗೆ ಅನಿಲಗಳ ಬೆಲೆ ಏರಿಕೆಯಿಂದ ಜನ ಸಾಮಾನ್ಯರು ಜೀವನ ನಡೆಸಲು ಕಷ್ಟಕರವಾಗಿದೆ. ಬೆಲೆ ನಿಯಂತ್ರಣ ಮಾಡುವುದು ಸರ್ಕಾರದ ಕರ್ತವ್ಯ. ಆದರೆ, ಕೊರೊನಾ ಬಿಕ್ಕಟ್ಟಿನಲ್ಲಿ ಈ ರೀತಿ ಬೆಲೆ ಏರಿದರೆ ಏನು ಮಾಡುವುದು?. ಈ ಪರಿಸ್ಥಿತಿಯನ್ನು ಪ್ರತಿಪಕ್ಷಗಳು ವಿರೋಧಿಸದೇ ಇರುವುದು ದುರದೃಷ್ಟಕರ. ಈಗ ಪ್ರತಿಭಟಿಸುವ ಧ್ವನಿಗಳನ್ನು ಹತ್ತಿಕ್ಕುವ ಹುನ್ನಾರ ನಡೆಯುತ್ತಿದೆ.

ಲಕ್ಷ್ಮೀಕಾಂತ ರಾಜೇ ಅರಸು, ತುಮಕೂರು

ಬೊಕ್ಕಸ ತುಂಬಿದರೆ ಸಾಕೇ?



ನಮ್ಮನ್ನು ಆಳುವವರು ಜನರ ಕಷ್ಟಕ್ಕಿಂತ, ಸರ್ಕಾರದ ಕಷ್ಟಗಳ ಬಗ್ಗೆ ಹೆಚ್ಚು ಚಿಂತಿಸುತ್ತಿದ್ದಾರೆ. ಬೊಕ್ಕಸ ತುಂಬಿಸುವುದೇ ದೊಡ್ಡ ಕೆಲಸ ಎಂದು ಭಾವಿಸಿದ್ದಾರೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಭವಿಷ್ಯದಲ್ಲಿ ದೇಶ ಸಂಕಷ್ಟಕ್ಕೆ ಸಿಲುಕುವ ಅರಿವೇ ಇಲ್ಲ. ಜನ ಇದರ ವಿರುದ್ಧ ಸಿಡಿದೇಳುವುದು ಸತ್ಯ.

ವಿ.ತಿಪ್ಪೇಸ್ವಾಮಿ, ಹಿರಿಯೂರು

‘ಸಂಕಷ್ಟ ಅರಿಯದೆ ನಿರ್ಣಯ’



ಲಾಕ್‌ಡೌನ್‌ನಿಂದ ಬಡತನದಲ್ಲೇ ಕಳೆಯುತ್ತಿರುವಾಗ ಸರ್ಕಾರಗಳು ಅಗತ್ಯ ವಸ್ತುಗಳ ಬೆಲೆ ಏರಿಸಿ ಜನರನ್ನು ಸಂಕಷ್ಟದ ಕೂಪಕ್ಕೆ ತಳ್ಳುತ್ತಿದೆ. ಹಣ ದೋಚುವ ಮನಸ್ಥಿತಿ ಉಳ್ಳ ಸರ್ಕಾರಗಳು ಜನರ ಮನದ ಅಳಲನ್ನು ಕೇಳುತ್ತಿಲ್ಲ. ಪರಿಸ್ಥಿತಿಯ ಅನುಗುಣವಾಗಿ ಸರ್ಕಾರ ನಿರ್ಣಯಗಳನ್ನು ತೆಗೆದುಕೊಳ್ಳಬೇಕು.

ಅನಿತಾ, ಗೋಕಾಕ್

ಬಲೆಯಾದ ಬೆಲೆ ಏರಿಕೆ

ಕೊರೊನಾದಿಂದ ಬದುಕಿಗೆ ಲಾಕ್‌ಡೌನ್ ಆಗಿದೆ. ಮೊದಲ ಲಾಕ್‌ಡೌನ್‌ನಿಂದ ಚೇತರಿಸಿಕೊಳ್ಳುತ್ತಿರುವಾಗಲೇ ಎರಡನೇ ಅಲೆ ಧಾವಿಸಿತು. ಇದರೊಟ್ಟಿಗೆ ಬೆಲೆ ಏರಿಕೆ ಬಿಸಿಯೂ ಜನರನ್ನು ಸುಡುತ್ತಿದೆ. ಇದಕ್ಕೆ ಬಲಿಯಾಗುತ್ತಿರುವುದು ಜನ ಸಾಮಾನ್ಯರು ಮಾತ್ರ. ಇದರಿಂದ ಜನರ ಬದುಕು ಗಾಯದ ಮೇಲೆ ಸತತವಾಗಿ ಬರೆ ಎಳೆದಂತಾಗಿದೆ. ಸರ್ಕಾರಗಳು ಜನಪರವಾಗಿ ಕೆಲಸ ಮಾಡಬೇಕು.

ರಂಗನಾಥ್, ಹೊಸದುರ್ಗ

ಕೊಟ್ಟು ಕಸಿಯುತ್ತಿದ್ದೀರಿ

ಕೋವಿಡ್ ಪರಿಹಾರ ಧನ ಘೋಷಣೆ ಸ್ವಾಗತಾರ್ಹ. ಒಂದೆಡೆ ಸಹಾಯಕ್ಕೆ ನಿಂತು, ಮತ್ತೊಂದೆಡೆ ಬೆಲೆ ಏರಿಸುತ್ತಿರುವುದು ನ್ಯಾಯವಲ್ಲ. ಪರಿಹಾರದ ಹಣ ಕೈಸೇರುವ ಮುನ್ನವೇ ಪರೋಕ್ಷವಾಗಿ ಅದನ್ನು ವಸೂಲಿ ಮಾಡುವ ಸಂಚನ್ನು ಬೆಲೆ ಏರಿಕೆ ಮೂಲಕ ಮಾಡಿದಂತಿದೆ. ಕೋವಿಡ್‌ನಿಂದ ಬೆಂದವರ ಮೇಲೆ ಮತ್ತೆ ಬೆಂಕಿ ಸುರಿದಂತಾಗಿದೆ.

ತ್ರಿವೇಣಿ, ಬೆಂಗಳೂರು

ಬೆಂಕಿಯಿಂದ ಬಾಣಲೆಗೆ



ಕೋವಿಡ್‌ನಿಂದ ತತ್ತರಿಸಿದ್ದ ಜನಕ್ಕೆ ಲಾಕ್‌ಡೌನ್ ಸಡಿಲಿಕೆ ಕೊಂಚ ನಿರಾಳ ಮೂಡಿಸಿದೆ. ಆದರೆ, ಬೆಲೆ ಏರಿಕೆ ಜನರ ಪಾಲಿಗೆ ಶಾಪವಾಗಿದೆ. ಬಹುತೇಕರು ಉದ್ಯೋಗ ಕಳೆದುಕೊಂಡು ಬೀದಿಗೆ ಬಂದಿದ್ದಾರೆ. ಅಗತ್ಯ ವಸ್ತುಗಳು ದುಬಾರಿಯಾಗಿರುವುದರಿಂದ ಬಡವ ಹೊಟ್ಟೆ ಕಟ್ಟಿ ಬದುಕುವ ಸ್ಥಿತಿ ನಿರ್ಮಾಣವಾಗಿದೆ.

ಮಂಜುಳಾ, ಬೆಂಗಳೂರು

ಸಂಕಷ್ಟದಲ್ಲೂ ಸುಲಿಗೆ

ಕೊರೊನಾ ಕಗ್ಗತ್ತಲಿನಿಂದ ಬೆಳಕಿಗೆ ಬರಬೇಕಿರುವ ಹೊತ್ತಿನಲ್ಲೇ ದಿಢೀರ್ ಬೆಲೆ ಏರಿಕೆ ಜನರನ್ನು ಮತ್ತೆ ಕತ್ತಲಿನತ್ತ ದೂಡಿದೆ. ಜನರ ಜೇಬಿನಲ್ಲಿ ಹಣವಿಲ್ಲದ ಸಮಯದಲ್ಲಿ ಬೆಲೆ ಏರಿಸಿ ಯಾವ ಅಭಿವೃದ್ಧಿ ಮಾಡಲು ಹೊರಟಿದ್ದೀರಿ? ಸಂಕಷ್ಟದಲ್ಲೂ ಸುಲಿಗೆ ಮಾಡಲು ಯೋಜನೆ ರೂಪಿಸಿರುವ ಸರ್ಕಾರದ ನಡೆ ಖಂಡನಾರ್ಹ.

ನಿರ್ಮಲಾ, ಮುರುಡೇಶ್ವರ

ಬೆಲೆ ಏರಿಕೆ ನಿಯಂತ್ರಣವಾಗಲಿ

ಬಡತನದ ಕೂಪದಲ್ಲಿ ಬಿದ್ದಿರುವ ಬಡವರು ದಿಢೀರ್ ಬೆಲೆ ಏರಿಕೆಯಿಂದ ದಿಕ್ಕು ತೋಚದಂತಾಗಿದ್ದಾರೆ. ಜನರನ್ನು ಈ ಸಂಕಷ್ಟದಿಂದ ಪಾರು ಮಾಡಬೇಕಿದ್ದ ಸರ್ಕಾರವೇ ಈ ರೀತಿ ಧೋರಣೆ ಮಾಡುತ್ತಿರುವುದು ಖಂಡನೀಯ. ಏರಿರುವ ಬೆಲೆಗಳು ತಕ್ಷಣವೇ ನಿಯಂತ್ರಣಕ್ಕೆ ಬರಬೇಕು.

ಸಂಜೀವಕುಮಾರ, ಬೀದರ್

ಶಿಕ್ಷಣ



ಜಗತ್ತಿನಲ್ಲಿ ವೃತ್ತಿ ಮತ್ತು ತಂತ್ರಜ್ಞಾನದಲ್ಲಿ ಕ್ಷಿಪ್ರವಾಗಿ ಬದಲಾವಣೆಗಳು ಆಗುತ್ತಿವೆ. ಮಕ್ಕಳು ಕೂಡ ಜ್ಞಾನ, ಸಾಮರ್ಥ್ಯದ ಜೊತೆಗೆ ವಿವಿಧ ಕೌಶಲಗಳನ್ನು ಬೆಳೆಸಿಕೊಂಡರೆ ಅವರ ಭವಿಷ್ಯಕ್ಕೆ ಅನುಕೂಲ.

ಭವಿಷ್ಯದ ವೃತ್ತಿಗೆ ಮುಂದುವರಿದ ಶಿಕ್ಷಣ

ಎಸ್.ಜಿ. ಕೃಷ್ಣ

ತಂತ್ರಜ್ಞಾನ ವೇಗವಾಗಿ ಬದಲಾಗುತ್ತಿದೆ. ಇಂದಿರುವ ತಂತ್ರಜ್ಞಾನ ಕೆಲವೇ ದಿನಗಳಲ್ಲಿ ಹಳೆಯದಾಗಿ ಆ ಜಾಗದಲ್ಲಿ ಹೊಸದು ಬಂದು ಕೂರುವ ಕಾಲವಿದು. ಇದು ಶಿಕ್ಷಣದ ಮೇಲೆಯೂ ಪರಿಣಾಮ ಬೀರಿದೆ. ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ಅಂದರೆ ಪ್ರಾಥಮಿಕ ಶಾಲೆಯಲ್ಲಿ ಕಲಿಯುವಾಗಲೇ ತಂತ್ರಜ್ಞಾನದ ಪರಿಚಯವಾಗಿರುತ್ತದೆ. ಅವರು ಒಂದೊಂದೇ ವಿಷಯವನ್ನು ಕಲಿಯುತ್ತ ಹೋದಂತೆ ಹೊಸ ವಿಷಯಗಳು, ಆವಿಷ್ಕಾರಗಳು ಸೇರ್ಪಡೆಗೊಂಡಿರುತ್ತವೆ. ಆ ಮಗು ದೊಡ್ಡದಾಗಿ ಉದ್ಯೋಗವನ್ನು ಸೇರುವ ಹೊತ್ತಿಗೆ ಕಲಿತ ವಿಷಯಗಳು ಅಷ್ಟೊಂದು ಉಪಯೋಗಕ್ಕೆ ಬರದೆ, ಹೊಸ ಕೌಶಲವನ್ನು ಕಲಿಯಬೇಕಾದ ಸಂದರ್ಭ ಎದುರಾಗಬಹುದು. ಶೇ 50ಕ್ಕಿಂತ ಅಧಿಕ ಮಕ್ಕಳು ದೊಡ್ಡವರಾಗಿ ಉದ್ಯೋಗ ಕ್ಷೇತ್ರಕ್ಕೆ ಕಾಲಿಡುವ ಹೊತ್ತಿಗೆ ಅವರು ಚಿಕ್ಕವರಿದ್ದಾಗ ಇದ್ದ ಉದ್ಯೋಗಗಳು ಕಣ್ಮರೆಯಾಗಿರಲೂಬಹುದು. ಕೃತಕ ಬುದ್ಧಿಮತ್ತೆ (ಎಐ), ರೊಬೊಟಿಕ್ಸ್, ಆಟೊಮೇಶನ್ ಮೊದಲಾದ ಕ್ಷೇತ್ರಗಳಲ್ಲಿ ಇಂತಹ ಬದಲಾವಣೆ ಕೊಂಚ ಹೆಚ್ಚಾಗಿಯೇ ಇರಬಹುದು. ಹೀಗಾಗಿ ಮಕ್ಕಳನ್ನು ಭವಿಷ್ಯದಲ್ಲಿ ಇಂತಹ ಸವಾಲುಗಳನ್ನು ಎದುರಿಸುವಂತೆ ಸಿದ್ಧಪಡಿಸುವುದು ಶಿಕ್ಷಕರಿಗೆ, ಪೋಷಕರಿಗೆ ಕಷ್ಟದಾಯಕ ಕೆಲಸ ಎಂದೇ ಹೇಳಬಹುದು.

ಸದ್ಯಕ್ಕೆ ಅತ್ಯಂತ ಹೆಚ್ಚಿನ ಮಟ್ಟದ ಕೌಶಲಗಳು ಎಂದು ಕೆಲವನ್ನು ಪಟ್ಟಿ ಮಾಡಲಾಗಿದ್ದರೂ, ಮಕ್ಕಳು ಇದನ್ನು ಕಲಿಯುವುದು ಕಡ್ಡಾಯ ಎಂದು ತಜ್ಞರು ಹೇಳಿದರೂ ಈಗಿನ ಮಕ್ಕಳು ಕಾಲೇಜು ಮೆಟ್ಟಿಲೇರುವ ಹೊತ್ತಿಗೆ ಅವು ಹಳೆಯದಾಗಬಹುದು. ಇದರಿಂದ ಮಕ್ಕಳಿಗೆ ತಾವು ಮುಂದೆ ಏನನ್ನು ಮಾಡಬಹುದು, ಯಾವ ಕೌಶಲಗಳನ್ನು ಅಳವಡಿಸಿಕೊಂಡರೆ ಎಂತಹದೇ ಪರಿಸ್ಥಿತಿ ಬಂದರೂ ಹೊಂದಿಕೊಳ್ಳಬಹುದು ಎಂಬ ಬಗ್ಗೆ ಅರಿವು ಮೂಡಿಸಬೇಕಾಗುತ್ತದೆ. ಓದು, ಬರವಣಿಗೆ, ಗಣಿತ, ವಿಜ್ಞಾನ, ಭಾಷೆಗಳಲ್ಲಿ ಒಳ್ಳೆಯ ಜ್ಞಾನದ ಜೊತೆಗೆ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ, ಮೌಲ್ಯಮಾಪನ ಮಾಡುವ ಕೌಶಲ, ಮುಂದುವರಿದ ಶಿಕ್ಷಣದ ಬಗ್ಗೆ ತಿಳಿವಳಿಕೆ ಇರಬೇಕಾಗುತ್ತದೆ.

ಸಂಕೀರ್ಣ ಸಮಸ್ಯೆ ಪರಿಹರಿಸುವ ಕೌಶಲ

ಮಕ್ಕಳು ಈ ಕೌಶಲದಲ್ಲಿ ಪರಿಣಿತರಾಗುವುದು ಬಹಳ ಅಗತ್ಯ. ಯಾವುದೇ ಒಂದು ಸಮಸ್ಯೆ ಬಂದಾಗ ಅದು ಹೇಗೆ ಬಂತು, ಅದರ ವಿವಿಧ ಆಯಾಮಗಳೇನು, ಅದಕ್ಕೆ ಪರಿಹಾರ ಹೇಗೆ ಕಂಡುಹಿಡಿಯುವುದು ಎಂಬ ಚಿಂತನಾ ಮನೋಭಾವ ಮಕ್ಕಳಲ್ಲಿ ಇದ್ದರೆ ಸೂಕ್ತ. ಒಂದು ಉದ್ಯಮದಲ್ಲಿ ಬರುವ ಸಮಸ್ಯೆಗಳನ್ನು ಎಲ್ಲಾ ಕೋನದಿಂದಲೂ ನೋಡಬೇಕಾಗುತ್ತದೆ. ಆ ಸಮಸ್ಯೆ ವಿವಿಧ ಸ್ತರದ ಜನರಿಗೆ ಸಂಬಂಧಿಸಿದ್ದಾದರೆ ಎಲ್ಲರಿಗೂ ಒಪ್ಪುವಂತಹ ಪರಿಹಾರ ಕಂಡು ಹಿಡಿಯಬೇಕಾಗುತ್ತದೆ. ಇದರ ಜೊತೆ ಕ್ರಿಯಾಶೀಲತೆ, ತಿಳಿವಳಿಕೆ ಕೂಡ ಇರಬೇಕಾಗುತ್ತದೆ.

ಹೀಗಾಗಿ ಶಿಕ್ಷಕರು ಮತ್ತು ಪೋಷಕರು ವಿದ್ಯಾರ್ಥಿಗಳಿಗೆ ಸಮಸ್ಯೆ ಪರಿಹರಿಸುವಂತಹ ಕೌಶಲಗಳನ್ನು ಕಲಿಸಬೇಕಾಗುತ್ತದೆ. ಸಮಾಜದಲ್ಲಿ, ಉದ್ಯಮದಲ್ಲಿ ಎದುರಾಗುವಂತಹ ಸಮಸ್ಯೆಗಳ ನಿವಾರಣೆ ಮಾಡಲು ಅಂತಹ ಅವಕಾಶಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ.

ನಿರ್ಧಾರ ಕೈಗೊಳ್ಳುವ ಕೌಶಲ

ಭವಿಷ್ಯದಲ್ಲಿ ಮಷೀನ್‌ಗಳೇ ಡೇಟಾ ವಿಶ್ಲೇಷಣೆ, ತಾರ್ಕಿಕ ಅಂಶಗಳ ಮೇಲೆ ಮಾಡುಬಹುದಾದಂತಹ ಕಾರ್ಯಗಳನ್ನು ಮಾಡಬಹುದು. ಅಚ್ಚುಕಟ್ಟಾಗಿಯೂ ನಿರ್ವಹಿಸಬಹುದು. ಆದರೆ ನಂತರ ಇದರ ಸಾಧಕ– ಬಾಧಕಗಳನ್ನು ನಿರ್ಧಾರ ಮಾಡುವ ಹೊಣೆ ಮಾನವರದ್ದೇ ಆಗಿರುತ್ತದೆ. ಹೀಗಾಗಿ ಚಿಂತನೆಯಲ್ಲೂ ಕ್ರಿಯಾಶೀಲತೆ ಇರಬೇಕು, ನಿರ್ಧಾರ ಕೈಗೊಳ್ಳುವಾಗ ಸ್ವತಂತ್ರವಾಗಿ ಆಲೋಚಿಸಬೇಕು, ಒಂದು ತೀರ್ಮಾನಕ್ಕೆ ಬಂದರೆ ಅದು ಗುಣಮಟ್ಟದಿಂದ ಕೂಡಿರಬೇಕು.

ಇಂತಹ ನಿರ್ಧಾರಗಳನ್ನು ಕೈಗೊಳ್ಳುವುದನ್ನು ರೂಢಿಸಿಕೊಳ್ಳಬೇಕಾದರೆ ಮಕ್ಕಳಿಗೆ ಅಂತಹ ವಾತಾವರಣ ಕಲ್ಪಿಸಬೇಕಾಗುತ್ತದೆ. ಮಾಹಿತಿಯನ್ನು ಕ್ರೋಢೀಕರಿಸಿ ವಿಶ್ಲೇಷಣೆ ಮಾಡುವಂತಹ, ವಿವರಣೆ ಕೊಡುವಂತಹ ಸಾಮರ್ಥ್ಯ ಬೆಳೆಸಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕುತೂಹಲದಿಂದ ಉತ್ತಮ ಪ್ರಶ್ನೆಗಳನ್ನು ಕೇಳುವಂತಹ ರೂಢಿ ಬೆಳೆಸಿಕೊಂಡು, ತಾರ್ಕಿಕವಾಗಿ ಚಿಂತನೆ ಮಾಡುವಂತಹ ಮತ್ತು ಪರಿಣಾಮಕಾರಿಯಾಗಿ ಸಂವಹನ ಮಾಡುವಂತಹ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕು.

ಮುಂದುವರಿದ ಶಿಕ್ಷಣ

ಸಾಕಷ್ಟು ವರ್ಷಗಳ ಹಿಂದೆಯೇ ಈ ಪದ್ಧತಿಗೆ ಹೆಚ್ಚು ಮಹತ್ವ ನೀಡಲಾಗಿತ್ತು. ಇತ್ತೀಚೆಗಂತೂ ಭವಿಷ್ಯದ ದೃಷ್ಟಿಯಿಂದ ಇದಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಅಂದರೆ ಕೌಶಲಗಳನ್ನು ಆಗಾಗ ಅಪ್‌ಡೇಟ್ ಮಾಡಿಕೊಳ್ಳುತ್ತಲೇ ಇರಬೇಕು. ಬದಲಾಗುತ್ತಿರುವ ತಂತ್ರಜ್ಞಾನ ಇದಕ್ಕೆ ಕಾರಣ. ಕೆಲವು ಕ್ಷೇತ್ರಗಳಲ್ಲಿ ನಿವೃತ್ತಿ ಎಂಬುದಿಲ್ಲ. ಉದ್ಯೋಗಿಗಳು ಬಹು ಕಾಲದವರೆಗೆ ಕ್ರಿಯಾಶೀಲವಾಗಿ ಕೆಲಸ ಮಾಡುವಂತಹ ವಾತಾವರಣ ಸೃಷ್ಟಿಯಾಗಿದೆ. ಇದು ಯಶಸ್ಸಿಗೆ ಬೇಕಾದ ಸಾಂಪ್ರದಾಯಿಕ ಮಾರ್ಗಗಳಲ್ಲಿ ಕೆಲವು ಬದಲಾವಣೆ ತಂದಿದೆ ಎನ್ನಬಹುದು. ಒಂದು ವಿಷಯದಲ್ಲಿ ಪದವಿ ಪಡೆದರೆ ಸಾಕಾಗುವುದಿಲ್ಲ. ಬೇರೆ ಬೇರೆ ಕ್ಷೇತ್ರಗಳಲ್ಲಿ ಅನುಭವ ಬೇಕಾಗುತ್ತದೆ. ಅಂದರೆ ಕೌಶಲ ಅಭಿವೃದ್ಧಿ ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವುದು, ಇಂಟರ್ನ್‌ಶಿಪ್, ಸರ್ಟಿಫಿಕೇಟ್ ಕೋರ್ಸ್, ಆನ್‌ಲೈನ್ ಕೋರ್ಸ್‌ಗಳನ್ನು ಮಾಡಿಕೊಂಡರೆ ಅನುಕೂಲ.

ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಇಂತಹ ಕೌಶಲಗಳಿರುವ ಪಠ್ಯವನ್ನು ರೂಪಿಸಲಾಗಿದ್ದು, ಪೋಷಕರು ಕೂಡ ಉತ್ತೇಜನ ನೀಡುತ್ತಿದ್ದಾರೆ. ಮಕ್ಕಳಲ್ಲಿ ಕ್ರಿಯಾಶೀಲತೆ ಬೆಳೆಸಲು ಪೋಷಕರೂ ಕೂಡ ಕೈ ಜೋಡಿಸುತ್ತಿದ್ದಾರೆ. ದೈನಂದಿನ ಕೆಲಸಗಳಲ್ಲಿ ಮಕ್ಕಳನ್ನೂ ಸೇರಿಸಿಕೊಂಡು ಸಮಸ್ಯೆ ಪರಿಹರಿಸುವ ಕೌಶಲ ಬೆಳೆಸಲು ನೆರವಾಗುತ್ತಿದ್ದಾರೆ.

ಸಮನ್ವಯ ಸಾಧನೆ

ಸದ್ಯಕ್ಕಂತೂ ಸ್ವತಂತ್ರವಾಗಿ ಕೆಲಸ ಮಾಡುವಂತಹ, ಕಚೇರಿಯಿಂದಾಚೆಯೂ ಕಾರ್ಯ ನಿರ್ವಹಿಸುವಂತಹ ಉದ್ಯೋಗಗಳು ಜಾಸ್ತಿಯಾಗುತ್ತಿವೆ. ಹೀಗಾಗಿ ಪ್ರಪಂಚದಲ್ಲಿ ವಿಭಿನ್ನ ರೀತಿಯ ತಂಡಗಳ ಜೊತೆಗೆ, ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುವಂತಹ ಕೌಶಲದ ಅಭಿವೃದ್ಧಿ ಇಂದಿನ ಅಗತ್ಯವಾಗಿದೆ. ಸಹೋದ್ಯೋಗಿಗಳೊಂದಿಗೆ ಸಹಾನುಭೂತಿಯಿಂದ ವರ್ತಿಸುವ, ಬೇರೆಯವರ ಅವಶ್ಯಕತೆಗಳನ್ನು ಗುರುತಿಸಿ ಸಮನ್ವಯ ಸಾಧಿಸುವ ಸಾಮರ್ಥ್ಯ ಇರಬೇಕಾಗುತ್ತದೆ. ಇದರ ಜೊತೆಗೆ ಭಾವನಾತ್ಮಕವಾಗಿಯೂ ಹೊಂದಾಣಿಕೆ ಮಾಡಿಕೊಳ್ಳುವಂತಹ ಮನೋಭಾವ ಬೇಕು. ಇದು ವೃತ್ತಿಪರ ಸಂಬಂಧಕ್ಕೆ ತುಂಬಾ ಅಗತ್ಯ ಎಂದೇ ಹೇಳಲಾಗುತ್ತಿದೆ.

ಶಿಕ್ಷಣದ ಮಧ್ಯೆ ಪುಟ್ಟ ಬ್ರೇಕ್ ಎಷ್ಟು ಲಾಭದಾಯಕ?

ಕೀರ್ತಿ ಟಿ.ಎಸ್.

ಶಿಕ್ಷಣದ ಮಧ್ಯೆ ಒಂದು ವರ್ಷದ ಬ್ರೇಕ್ ಅಥವಾ ಗ್ಯಾಪ್ ಈಯರ್ ತೆಗೆದುಕೊಳ್ಳುವುದು ಭಾರತದ ಮಟ್ಟಿಗೆ ಹಿಂದೆ ಅಪರೂಪವಾಗಿತ್ತು. ಆದರೆ ಕಳೆದ ವರ್ಷ ಕೋವಿಡ್ ಶುರುವಾದಾಗ ಈ ರೀತಿ ಬ್ರೇಕ್ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದೆ ಎನ್ನಬಹುದು. ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿ ಮುಗಿದ ನಂತರ ಅಥವಾ ಪದವಿ ಒಂದೆರಡು ವರ್ಷ ಓದಿದ ನಂತರ ಒಂದು ವರ್ಷವೋ, ಎರಡು ವರ್ಷವೋ ಶಿಕ್ಷಣದಿಂದ ವಿಮುಖರಾಗಿ ಬೇರೆ ಯೋಜನೆಗಳಲ್ಲಿ ತೊಡಗಿಸಿಕೊಳ್ಳುವುದಕ್ಕೆ ಕೆಲವರು ಮನಸ್ಸು ಮಾಡುತ್ತಿದ್ದಾರೆ. ಪೋಷಕರ ದೃಷ್ಟಿಯಿಂದ ಇದೊಂದು ಸಮಯ ವ್ಯರ್ಥ ಮಾಡುವ ಪದ್ಧತಿ ಎನಿಸಿದರೂ ವಿದ್ಯಾರ್ಥಿಗಳು ಈ ಅವಧಿಯನ್ನು ಲಾಭದಾಯಕವಾಗಿ ಬಳಸಿಕೊಳ್ಳಬಹುದು. ಅಂದರೆ ವಿದ್ಯಾರ್ಥಿಗಳು ಮುಂದಿನ ಶಿಕ್ಷಣಕ್ಕೆ ಇನ್ನಷ್ಟು ವ್ಯಾಪಕ ಸಿದ್ಧತೆ ನಡೆಸಬಹುದು. ಜೊತೆಗೆ ಮಾನಸಿಕವಾಗಿ ತಯಾರಾಗಬಹುದು ಎನ್ನುತ್ತಾರೆ ತಜ್ಞರು.

ಸಾಮಾನ್ಯವಾಗಿ ಎಸ್ಸೆಸ್ಸೆಲ್ಸಿ ನಂತರ ಪಿಯುಸಿವರೆಗೆ ವಿದ್ಯಾರ್ಥಿಗಳು ಶಿಕ್ಷಕರು, ಪೋಷಕರ ಮೇಲ್ವಿಚಾರಣೆಯಲ್ಲಿ ಓದುತ್ತಿರುತ್ತಾರೆ. ಓದಿನತ್ತ ಹೆಚ್ಚು ಗಮನವನ್ನೂ ನೀಡಬೇಕಾಗುತ್ತದೆ. ಆದರೆ ಪದವಿ, ಅದು ವೃತ್ತಿಪರ ಕೋರ್ಸ್ ಇರಲಿ ಅಥವಾ ಸಾಂಪ್ರದಾಯಿಕ ಪದವಿ ಕೋರ್ಸ್ ಆಗಿರಲಿ, ವಿದ್ಯಾರ್ಥಿಗಳು ಸ್ವಂತ ನಿರ್ಧಾರ ತೆಗೆದುಕೊಳ್ಳುವಷ್ಟು ಪ್ರಬುದ್ಧರಾಗಿರುತ್ತಾರೆ. ತಮ್ಮದೇ ಆದ ಆಸಕ್ತಿ, ಅನುಕೂಲ ನೋಡಿಕೊಂಡು ಮುಂದಿನ ಶಿಕ್ಷಣದ ಬಗ್ಗೆ ಆಲೋಚಿಸುವವರೂ ಇದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ವಿದ್ಯಾರ್ಥಿಗಳು ಈ ಹಂತದಲ್ಲಿ ಮಧ್ಯೆ ಬ್ರೇಕ್ ತೆಗೆದುಕೊಂಡರೂ, ಭಾರತದಲ್ಲಿ ಪದವಿ ನಂತರ, ಅಂದರೆ ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಸೇರಿಕೊಳ್ಳುವ ಮುನ್ನ ಇಂತಹ ಬ್ರೇಕ್ ತೆಗೆದುಕೊಳ್ಳುವವರ ಸಂಖ್ಯೆ ಈಗೀಗ ಹೆಚ್ಚಾಗುತ್ತಿದೆ. ಯಾವುದಾದರೂ ಉದ್ಯೋಗಕ್ಕೆ ಸೇರುವುದು ಅಥವಾ ಸ್ಪರ್ಧಾತ್ಮಕ ಪರೀಕ್ಷೆಗೆ ಓದುವುದು... ಹೀಗೆ ವಿಭಿನ್ನ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಮತ್ತೆ ಶಿಕ್ಷಣ ಮುಂದುವರಿಸುವ ಯುವಕ/ ಯುವತಿಯರಿದ್ದಾರೆ.

ಇನ್ನು ಕೆಲವರು ಪಿಯುಸಿಯಲ್ಲಿ ಒಳ್ಳೆಯ ಅಂಕ ಬರದಿದ್ದರೆ, ತಮ್ಮ ಅಂಕಗಳಿಗೆ ಒಳ್ಳೆಯ ಕಾಲೇಜಿನಲ್ಲಿ ಪ್ರವೇಶ ಸಿಗದಿದ್ದರೆ ಮತ್ತೆ ಪಿಯುಸಿ ಪರೀಕ್ಷೆಗೆ ಕೂತು ಹೆಚ್ಚು ಅಂಕ ಗಳಿಸಲು ಯತ್ನಿಸುವವರ ಸಂಖ್ಯೆಯೂ ಕಡಿಮೆಯೇನಿಲ್ಲ. ಇದೇ ಅವಧಿಯಲ್ಲಿ ಪಠ್ಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವವರೂ ಇದ್ದಾರೆ.

ಎಂಜಿನಿಯರಿಂಗ್ ಓದುತ್ತಿದ್ದ ಗೌತಮಿ ಗುಪ್ತಾ ನಾಲ್ಕನೇ ಸೆಮಿಸ್ಟರ್ ನಂತರ ಬ್ರೇಕ್ ತೆಗೆದುಕೊಂಡಳು. ಕಾರಣ, ಒಂದಿಷ್ಟು ಸಾಫ್ಟ್ ಕೌಶಲಗಳಲ್ಲಿ ಪರಿಣತಿ ಪಡೆಯಬೇಕಿತ್ತು, ಜೊತೆಗೆ ಒಂದು ಸ್ವಯಂ ಸೇವಾ ಸಂಸ್ಥೆಗಾಗಿ ಪ್ರಾಜೆಕ್ಟ್ ಕೂಡ ಮಾಡಿ ಅನುಭವ ಪಡೆಯಬೇಕಿತ್ತು. ಹೀಗಾಗಿ ಒಂದು ವರ್ಷದ ನಂತರ ಐದನೇ ಸೆಮಿಸ್ಟರ್‌ಗೆ ಸೇರಿಕೊಂಡಳು. ಜೆಇಇ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದಿದ್ದರಿಂದ ಬೆಂಗಳೂರಿನ ರುಚಿ ಪದಕಿ ಒಂದು ಕಂಪನಿಯಲ್ಲಿ ಇಂಟರ್ನ್‌ಶಿಪ್ ಮಾಡಿ ನಂತರ ಮತ್ತೆ ಜೆಇಇ ಪರೀಕ್ಷೆಗೆ ಕೂತು ಐಐಟಿಯಲ್ಲಿ ಪ್ರವೇಶ ಗಿಟ್ಟಿಸಿಕೊಂಡಳು.

ಪದವಿ ಓದಿದ ನಂತರ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿಗೆ ಸೇರುವುದೆಂದರೆ ಹೆಚ್ಚಿನ ಶುಲ್ಕ, ಪರವೂರಲ್ಲಿ ವಸತಿ– ಊಟದ ಖರ್ಚು ಭರಿಸುವುದು ಹಲವರಿಗೆ ಹೊರೆಯೇ ಸರಿ. ಈ ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳು ಉದ್ಯೋಗ ಮಾಡಿ ಹಣ ಸಂಗ್ರಹಿಸಿಟ್ಟುಕೊಳ್ಳುವುದಕ್ಕೆ ಈ ಬ್ರೇಕ್ ನೆರವಾಗುತ್ತದೆ.

ಈಗ ಕೋವಿಡ್‌ನಿಂದಾಗಿ ಬ್ರೇಕ್ ತೆಗೆದುಕೊಂಡವರ ವಿಷಯಕ್ಕೆ ಬರೋಣ. ಹೆಚ್ಚಿನವರು ಆನ್‌ಲೈನ್ ತರಗತಿಗಳ ಮೂಲಕ ಶಿಕ್ಷಣ ಮುಂದುವರಿಸಿದ್ದಾರೆ. ಆದರೆ ಕಾದು ನೋಡಿ ಮರಳಿ ಕಾಲೇಜು ಸೇರಿಕೊಳ್ಳುವ ನಿರ್ಧಾರ ಮಾಡಿರುವ ಕೆಲವು ವಿದ್ಯಾರ್ಥಿಗಳೂ ಇದ್ದಾರೆ. ಈ ಸಂದರ್ಭವನ್ನು ಆನ್‌ಲೈನ್‌ನಲ್ಲಿ ಸಣ್ಣಪುಟ್ಟ ಕೋರ್ಸ್ ಮಾಡಿಕೊಳ್ಳುತ್ತ, ತಮ್ಮ ಸ್ವಂತ ಹವ್ಯಾಸಗಳಲ್ಲಿ ತೊಡಗಿಸಿಕೊಂಡವರೂ ಇಲ್ಲದಿಲ್ಲ.

ಏನೆಂದರೆ ಈ ಬ್ರೇಕ್ ತೆಗೆದುಕೊಳ್ಳುವುದು ವಿದ್ಯಾರ್ಥಿ ಹಾಗೂ ಅವರ ಮನೆಯವರ ಮನಃಸ್ಥಿತಿಯನ್ನು ಅವಲಂಬಿಸಿದೆ. ಜೊತೆಗೆ ಈ ಅವಧಿಯಲ್ಲಿ ಅದನ್ನು ಲಾಭದಾಯಕವಾಗಿ ಬಳಸಿಕೊಂಡರೆ ಮುಂದಿನ ಶಿಕ್ಷಣ ಹಾಗೂ ವೃತ್ತಿಗೆ ಅನುಕೂಲವಾಗುತ್ತದೆ.

ವಿದ್ಯಾರ್ಥಿ ವೇತನ ಕೈಪಿಡಿ

ಡಿಜಿಟಲ್ ಭಾರತಿ ಕೋವಿಡ್ ಸ್ಕಾಲರ್‌ಶಿಪ್ 2021–22
ವಿವರ: ಕೋವಿಡ್ ಕಾರಣದಿಂದ ಕುಟುಂಬವು ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದು, ಮುಂದಿನ ಶಿಕ್ಷಣ ಪಡೆಯಲು ಸಾಧ್ಯವಾಗದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೋವಿಡ್ ಕಾರಣದಿಂದ ಪೋಷಕರನ್ನು ಕಳೆದುಕೊಂಡ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.
ಅರ್ಹತೆ: ಒಂದನೇ ತರಗತಿಯಿಂದ ಪಿಯುಸಿವರೆಗೆ ಓದುತ್ತಿರುವವರಿಗೆ ಈ ವಿದ್ಯಾರ್ಥಿ ವೇತನ ಅನ್ವಯವಾಗುತ್ತದೆ.
ಆರ್ಥಿಕ ಸಹಾಯ: ಕಾಲೇಜುಗಳಿಗೆ ಪ್ರವೇಶಾತಿ, ಲ್ಯಾಪ್‌ಟಾಪ್
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31 ಜುಲೈ, 2021
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ
ಹೆಚ್ಚಿನ ಮಾಹಿತಿಗೆ: www.b4s.in/praja/DBCS1

ವಿಎನ್‌ಐಟಿ ನಾಗ್ಪುರ ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಜೂನಿಯರ್ ರಿಸರ್ಚ್ ಫೆಲೋಶಿಪ್ 2021
ವಿವರ: ಎಂ.ಟೆಕ್ ಅಥವಾ ಎಂ.ಇ ಪದವಿ ಪಡೆದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಹತೆ: ತಮ್ಮ ಸ್ನಾತಕೋತ್ತರ ಶಿಕ್ಷಣದಲ್ಲಿ ಪವರ್ ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್ ಡ್ರೈವ್ಸ್, ಪವರ್ ಸಿಸ್ಟಮ್, ಕಂಟ್ರೋಲ್ ಸಿಸ್ಟಮ್ ಅಥವಾ ಇದಕ್ಕೆ ಸಮಾನಾಂತರವಾದ ವಿಷಯಗಳನ್ನು ಕಲಿತಿರಬೇಕು. ಗೇಟ್ ಪರೀಕ್ಷೆಯನ್ನು ಪೂರೈಸಿರಬೇಕು.
ಆರ್ಥಿಕ ಸಹಾಯ: ಎಚ್‌ಆರ್‌ಎ ಯೊಂದಿಗೆ ತಿಂಗಳಿಗೆ ₹ 35 ಸಾವಿರ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18 ಜೂನ್, 2021
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅಥವಾ ಇ-ಮೇಲ್ ಮೂಲಕ ಅರ್ಜಿ ಸಲ್ಲಿಸಬಹುದು
ಹೆಚ್ಚಿನ ಮಾಹಿತಿಗೆ: www.b4s.in/praja/NJF7

ಡಿಎಕ್ಸ್‌ಸಿ ಪ್ರೊಗ್ರೆಸ್ಸಿಂಗ್ ಮೈಂಡ್ಸ್ ಸ್ಕಾಲರ್‌ಶಿಪ್ 2021
ವಿವರ: ಸಿಎಸ್, ಐಟಿ, ಇಇ, ಇಎಸ್ ವಿಭಾಗಗಳಲ್ಲಿ ಬಿ.ಇ/ ಬಿ.ಟೆಕ್ ಓದುತ್ತಿರುವ ಪ್ರಥಮ ವರ್ಷದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಹತೆ: ಹಿಂದಿನ ಪರೀಕ್ಷೆಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 4 ಲಕ್ಷ ಮೀರಿರಬಾರದು. ವಿದ್ಯಾರ್ಥಿಗಳು ₹ 6 ಸಾವಿರ ಅಥವಾ ಅದಕ್ಕೂ ಹೆಚ್ಚಿನ ಯಾವುದೇ ವಿದ್ಯಾರ್ಥಿ ವೇತನವನ್ನು ಈಗಾಗಲೇ ಪಡೆಯುತ್ತಿರಬಾರದು.
ಆರ್ಥಿಕ ಸಹಾಯ: ಒಟ್ಟು ಶುಲ್ಕದ ಶೇ 50 ರಷ್ಟು ಅಥವಾ ವರ್ಷಕ್ಕೆ ₹ 40 ಸಾವಿರ (ಯಾವುದು ಕಡಿಮೆ ಇರುತ್ತದೊ ಅದು).
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15 ಜೂನ್, 2021
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ
ಹೆಚ್ಚಿನ ಮಾಹಿತಿಗೆ: www.b4s.in/praja/DXC1

ಕೃಪೆ: buddy4study.com

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ,
ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಬೆಂಗಳೂರಿನ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. **ಪ್ರದೀಪ್ ಕುಮಾರ್** ಉತ್ತರಿಸಲಿದ್ದಾರೆ. ವಿಶೇಷವಾಗಿ 10ನೇ ತರಗತಿ ಮತ್ತು ಪಿಯುಸಿ ಮಕ್ಕಳು ಹಾಗೂ ಅವರ ಪೋಷಕರು ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪಿಯುಸಿ ನಂತರದ ಕೋರ್ಸ್ ಆಯ್ಕೆ ಹೇಗಿರಬೇಕು?

ಡಾ. ಹೆಚ್.ಎಸ್. ಗಣೇಶಭಟ್ಟ

ಶಿಕ್ಷಣದ ಎಲ್ಲಾ ಹಂತಗಳೂ ಮುಖ್ಯವೇ ಆದರೂ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಭಾರತೀಯ ಶಿಕ್ಷಣದ ಚೌಕಟ್ಟಿನಲ್ಲಿ ಪ್ರಮುಖವೆನಿಸಿದೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯ ಅಂಕಗಳು ವಿದ್ಯಾರ್ಥಿಯು ಶಿಕ್ಷಣದ ಯಾವ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳಬೇಕು (ಕಲೆ, ವಿಜ್ಞಾನ, ವಾಣಿಜ್ಯ, ಪಾಲಿಟೆಕ್ನಿಕ್, ಡಿಪ್ಲೊಮಾ ಇತ್ಯಾದಿ) ಎಂಬ ತೀರ್ಮಾನ ಮಾಡುವುದರೊಂದಿಗೆ, ಶಿಕ್ಷಣವನ್ನು ಮುಂದುವರೆಸಬೇಕೆ ಬೇಡವೇ ಎಂಬುದನ್ನು ನಿರ್ಧರಿಸುತ್ತವೆ.

ಹತ್ತನೇ ತರಗತಿಯ ಶಿಕ್ಷಣ ಸಾಮಾನ್ಯ ಶಿಕ್ಷಣವಾಗಿದ್ದು ವಿದ್ಯಾರ್ಥಿಗಳಿಗೆ ಸಮಾಜದಲ್ಲಿ ಬದುಕಲು ಬೇಕಾದ ಪೌರಪ್ರಜ್ಞೆ, ನಾಯಕತ್ವ ಲಕ್ಷಣಗಳು ಮತ್ತು ಉದ್ಯೋಗವನ್ನು ಆಯ್ದುಕೊಂಡರೆ ಅದಕ್ಕೆ ಬೇಕಾದ ಮೂಲಭೂತ ಕೌಶಲಗಳನ್ನು ಕೊಡುವುದಷ್ಟೇ ಆಗಿದೆ. ಈ ಹಂತದಲ್ಲಿ ಕರ್ನಾಟಕದಲ್ಲಿ ಸಾಮಾನ್ಯವಾಗಿ 10 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಳ್ಳುತ್ತಾರೆ. ಶೇಕಡಾ 60–70 ರಷ್ಟು ಮಂದಿ ಉತ್ತೀರ್ಣರಾಗುತ್ತಾರೆ. ಮೂರರಿಂದ - ನಾಲ್ಕು ಲಕ್ಷ ವಿದ್ಯಾರ್ಥಿಗಳು ಏನು ಮಾಡುತ್ತಾರೆ ಎಂಬುದರ ಬಗ್ಗೆ ವಿಶ್ಲೇಷಣೆ ಮಾಡಬೇಕಾಗುತ್ತದೆ.

ಕರ್ನಾಟಕದಲ್ಲಿ ವರ್ಷಕ್ಕೆ ಪಿಯುಸಿಗೆ ಬರುವ ಒಟ್ಟು ವಿದ್ಯಾರ್ಥಿಗಳು ಸುಮಾರು 6–7 ಲಕ್ಷ ಇರುತ್ತಾರೆ. ಇದರಲ್ಲಿ ನಾಲ್ಕು ಲಕ್ಷದಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಾರೆ ಎಂದುಕೊಳ್ಳೋಣ. (ಈ ವರ್ಷ ಕೋವಿಡ್‌ನಿಂದಾಗಿ ಪರಿಸ್ಥಿತಿ ಬೇರೆಯೇ ಇದೆ). ಕಲೆ, ವಾಣಿಜ್ಯ, ವಿಜ್ಞಾನ, ಎಂಜಿನಿಯರಿಂಗ್, ವೈದ್ಯಕೀಯ, ಕಾನೂನು ಮೊದಲಾದ ಪದವಿಗಳಿಗೆ ಅರ್ಜಿ ಸಲ್ಲಿಸುತ್ತಾರೆ. ಸರ್ಕಾರದ ಗಮನ ಕೇವಲ ವಿಜ್ಞಾನದ ವಿದ್ಯಾರ್ಥಿಗಳ ಮೇಲಿದೆ. ಎಲ್ಲಾ ನಿಯಮಗಳೂ ಅವರನ್ನೇ ಕೇಂದ್ರೀಕರಿಸಿರುತ್ತವೆ.

ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಯಾವುದೇ ತರಬೇತಿ ಮತ್ತು ವಿಶೇಷ ಕಾಳಜಿ ಇರುವುದಿಲ್ಲ. ಬಹುತೇಕ ಕನ್ನಡ ಮಾಧ್ಯಮದಲ್ಲಿ ಓದುವ ವಿದ್ಯಾರ್ಥಿಗಳೆಂದರೆ ಈ ಕಲಾ ಮಾಧ್ಯಮದವರೇ.

ವಾಣಿಜ್ಯ ವಿಭಾಗವನ್ನು ಆಯ್ದುಕೊಳ್ಳುವವರೆಲ್ಲರೂ ಸಿ.ಎ.(ಚಾರ್ಟರ್ಡ್ ಅಕೌಂಟೆನ್ಸಿ) ಓದುವ ಕನಸನ್ನೇ ಹೊತ್ತು ಈ ವಿಷಯಗಳನ್ನು ಆಲಂಗಿಸಿರುತ್ತಾರೆ. ಕಡೆಯದಾಗಿ ಎಲ್ಲೋ ದಡ ಸೇರುತ್ತಾರೆ.

ಈ ಎಲ್ಲಾ ತಾರತಮ್ಯಗಳೂ ಹೋಗಬೇಕಾದಲ್ಲಿ ಆಯಾ ವೃತ್ತಿಗಳಲ್ಲಿ ಬರುವ ಉಪವೃತ್ತಿಗಳ ಪಟ್ಟಿ ಮಾಡಿ ಬೇಡಿಕೆಗಳಿಗೆ ಅನುಗುಣವಾಗಿ ವಿವಿಧ ಕೋರ್ಸ್‌ಗಳನ್ನು ರಚಿಸಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಕೋರ್ಸ್ ಆಯ್ಕೆಯ ಬಗ್ಗೆ ಆಪ್ತ ಸಲಹೆಯ ಅವಶ್ಯಕತೆ ಇದೆ.

ಎಷ್ಟೋ ವಿದ್ಯಾರ್ಥಿಗಳು ಹೆಚ್ಚಾಗಿ ತಮಗೆ ಇಷ್ಟವಿಲ್ಲದಿದ್ದರೂ ಪೋಷಕರ ಒತ್ತಡದಿಂದಲೇ ಕೋರ್ಸ್‌ಗಳಿಗೆ ನೋಂದಾಯಿಸಿಕೊಳ್ಳುತ್ತಾರೆ ಹಾಗೂ ಅವರು ಅವುಗಳನ್ನು ಪೂರ್ಣಗೊಳಿಸುವುದೂ ಇಲ್ಲ. ಹೀಗಾಗಿ ಪಿಯುಸಿಯ ನಂತರದ ಯಾವುದೇ ಕೋರ್ಸ್ ಅನ್ನು ನಿರ್ಧರಿಸುವ ಮುನ್ನ ಪೋಷಕರು, ವಿದ್ಯಾರ್ಥಿಗಳು ಕೆಲವೊಂದು ಅಂಶಗಳನ್ನು ಗಮನಿಸಬೇಕಾಗುತ್ತದೆ. ಅದರ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಲಾಗಿದೆ.

ಪೋಷಕರು ಗಮನಿಸಬೇಕಾದ ಅಂಶಗಳು

- ವಿದ್ಯಾರ್ಥಿಗಳ ಆಸಕ್ತಿಯನ್ನು ಗಮನಿಸಿ.
- ನಿಮ್ಮ ಮಕ್ಕಳಿಗೆ ಮುಕ್ತವಾಗಿ, ನಿಖರವಾಗಿ ಚರ್ಚಿಸಲು ಅವಕಾಶ ಕೊಡಿ.
- ವಿದ್ಯಾರ್ಥಿಗಳು ತೀರ್ಮಾನ ತೆಗೆದುಕೊಳ್ಳಲು ಅಶಕ್ತರಾಗಿದ್ದಲ್ಲಿ, ಮಕ್ಕಳ ಅಭಿಲಾಷೆಯನ್ನರಿತು ಮಾರ್ಗದರ್ಶನ ಮಾಡಿ.
- ವಿದ್ಯಾರ್ಥಿಗಳು ಯಾವುದಾದರೂ ವಿಷಯದ ಬಗ್ಗೆ ಅಧ್ಯಯನ ಮಾಡಲು ಆಸಕ್ತಿ ತೋರಿಸಿದರೆ ಕೇವಲ ಆದಾಯ (ಹಣದ)ವನ್ನಷ್ಟೇ ಗಮನದಲ್ಲಿಟ್ಟು ಅದು ಪ್ರಯೋಜನ ಇಲ್ಲವೆಂದು ಮೂದಲಿಸಬೇಡಿ.
- ಹೆಚ್ಚಿನ ವಿದ್ಯಾರ್ಥಿಗಳು ಯಾವ ಕೋರ್ಸ್‌ಗೆ ಸೇರುತ್ತಾರೋ ಆ ಕೋರ್ಸ್‌ಗೇ ನಮ್ಮ ಮಕ್ಕಳೂ ಹೋಗಲಿ ಎಂಬ ಭಾವನೆ ಬೇಡ.
- ನಿಮ್ಮ ಮಕ್ಕಳನ್ನು ನಿಮ್ಮ ಇತರ ಮಕ್ಕಳೊಂದಿಗೆ ಹಾಗೂ ಬೇರೆಯವರ ಮಕ್ಕಳಿಗೆ ಹೋಲಿಸಲೇಬೇಡಿ.
- ‘ನಿನಗಾಗಿ ನಾವು ಎಷ್ಟು ದುಡಿದಿದ್ದೀವಿ, ತ್ಯಾಗ ಮಾಡಿದ್ದೀವಿ ಗೊತ್ತೇ? ಅದಕ್ಕಾಗಿ ನೀನು ನಾವು ಹೇಳಿದ್ದನ್ನು ಕೇಳಬೇಕು’ ಎಂದು ಕಟ್ಟುನಿಟ್ಟಾಗಿ ಹೇಳಬೇಡಿ.
- ತಾಳ್ಮೆಯಿಂದ ಎಲ್ಲಾ ದೃಷ್ಟಿಯಿಂದಲೂ ಯೋಚಿಸಿ ನಿಮ್ಮ ಮಗುವಿನ ಭವಿಷ್ಯವನ್ನು ನಿರ್ಧರಿಸಿ.
- ಕಷ್ಟಪಟ್ಟು ಯಾವುದೇ ಕ್ಷೇತ್ರದಲ್ಲಿ ದುಡಿದರೂ ಉಜ್ವಲ ಭವಿಷ್ಯವಿದೆ ಎಂಬುದನ್ನು ಅವರಿಗೆ ಮನದಟ್ಟು ಮಾಡಿ.
- ಅವರಿಗೆ ಇಷ್ಟವಾಗುವ ಯಾವುದೇ ಹವ್ಯಾಸವನ್ನು ಬೆಳೆಸಿಕೊಳ್ಳಲು ಉತ್ತೇಜಿಸಿ.

(ಲೇಖಕ: ನಿವೃತ್ತ ಪ್ರಾಂಶುಪಾಲರು, ಎಂ.ಇ.ಎಸ್. ಶಿಕ್ಷಣ ಕಾಲೇಜು, ಬೆಂಗಳೂರು)

ವಿದ್ಯಾರ್ಥಿಗಳು ಗಮನಿಸಬೇಕಾದ ಅಂಶಗಳು

- ನಿಮಗಿರುವ ಆಸಕ್ತಿ ಕ್ಷೇತ್ರವನ್ನು ಪತ್ತೆ ಮಾಡಿಕೊಳ್ಳಿ.
- ಮಾನಸಿಕ ತೃಪ್ತಿ ನೀಡುವ, ನಿಮ್ಮ ಕೌಶಲಗಳನ್ನು ಚೆನ್ನಾಗಿ ಬಳಸಿಕೊಳ್ಳಲು ಅವಕಾಶವಿರುವ ಕ್ಷೇತ್ರವನ್ನು ಗಮನಿಸಿ.
- ಆಯ್ದುಕೊಂಡ ಕ್ಷೇತ್ರವನ್ನು ಛಲಬಿಡದೆ ವಿಕ್ರಮನಂತೆ ಪಟ್ಟು ಹಿಡಿದು ಪೂರ್ಣಗೊಳಿಸಿ.
- ನಿಮ್ಮ ಪೋಷಕರೊಂದಿಗೆ ಗೌರವದಿಂದ ವರ್ತಿಸಿ.
- ದೇಶ-ವಿದೇಶಗಳಲ್ಲಿ ಸಿಗಬಹುದಾದ ಉತ್ತಮ ಅವಕಾಶಗಳನ್ನು ಗಮನಿಸಿ.
- ಭಾಷಾ ಕಲಿಕೆಯಲ್ಲಿ ನಿಮಗೆ ಆಸಕ್ತಿ ಇದ್ದಲ್ಲಿ ಅದನ್ನೇ ಆರಿಸಿಕೊಳ್ಳಿ. ಬಹುತೇಕ ಉದ್ಯಮಗಳಲ್ಲಿ ಸಂವಹನಾ ಕೌಶಲವೇ ಮುಖ್ಯವಾಗತ್ತದೆ.
- ಯಾವುದೇ ಕ್ಷೇತ್ರದಲ್ಲಿ ನೀವು ದುಡಿಯಬೇಕಾದರೆ ನಿಮ್ಮ ಮಾನಸಿಕ ಮತ್ತು ದೈಹಿಕ ಆರೋಗ್ಯ ಬಹಳ ಮುಖ್ಯ.
- ಕೆಲವು ಕೋರ್ಸ್‌ಗಳಿಗೆ ಸಹನೆ, ಸೇವಾಭಾವನೆ ಮತ್ತು ಸಂವಹನ ಮುಖ್ಯವಾದರೆ ಮತ್ತೆ ಕೆಲವಕ್ಕೆ ಚುರುಕುತನ, ಸೃಜನಶೀಲತೆ ಪ್ರಮುಖವೆನಿಸುತ್ತದೆ. ರಕ್ಷಣಾ ವಿಭಾಗದಲ್ಲಿ ನಿಮ್ಮ ಒಲುಮೆ ಇದ್ದಲ್ಲಿ ಧೈರ್ಯ, ಅರ್ಪಣಾಭಾವ ಎಲ್ಲಕ್ಕಿಂತಲೂ ಮುಖ್ಯವಾಗುತ್ತದೆ.
- ದೊರೆತಿರುವ ಸಮಯದಲ್ಲಿ ಸಾಮಾನ್ಯ ಜ್ಞಾನ, ಪ್ರಸಕ್ತ ವಿದ್ಯಮಾನದ ಬಗ್ಗೆ ಗಮನ ಹರಿಸಿ.
- ಅನುಭವವಿರುವವರಿಂದ, ನಿಮ್ಮ ಜೊತೆ ಇದ್ದ ಹಿರಿಯ ವಿದ್ಯಾರ್ಥಿಗಳಿಂದ ವಿಷಯ ಸಂಗ್ರಹಿಸಿ.
- ನೀವು ತೆಗೆದುಕೊಳ್ಳಬೇಕಾದ ಕೋರ್ಸ್‌ಗಳಿಗೆ ದೊರೆಯಬಹುದಾದ ಆರ್ಥಿಕ ನೆರವಿನ ಬಗ್ಗೆ ತಿಳಿದುಕೊಳ್ಳಿ.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ – 5

56. ಅತೀ ಹೆಚ್ಚು ತೇವಾಂಶ ಹಿಡಿದಿಟ್ಟುಕೊಳ್ಳುವ ಗುಣವಿರುವ ಮಣ್ಣು
ಎ) ಕೆಂಪು ಮಣ್ಣು ಬಿ) ಕಪ್ಪು ಮಣ್ಣು
ಸಿ) ಜಂಬಿಟ್ಟಿಗೆ ಮಣ್ಣು ಡಿ) ಮೆಕ್ಕಲು ಮಣ್ಣು

57. ನವಕೋಟಿ ನಾರಾಯಣ ಎಂಬ ಬಿರುದನ್ನು ಹೊಂದಿದ್ದವರು ಯಾರು?
ಎ) ಚಿಕ್ಕದೇವರಾಜ ಒಡೆಯರ್
ಬಿ) ಕೃಷ್ಣದೇವರಾಜ ಒಡೆಯರ್
ಸಿ) ರಾಜ ಒಡೆಯರ್
ಡಿ) ಕಂಠೀರವ ನರಸರಾಜ ಒಡೆಯರ್

58. ಹೊಂದಿಸಿ ಬರೆಯಿರಿ

1) ಸುವರ್ಣ ಚತುಷ್ಕೋನ	ಅ) ಕರ್ನಾಟಕದಲ್ಲಿನ ಬಂದರು
2) ವಜ್ರ ಚತುಷ್ಕೋನ	ಆ) ಹಿಂದೂಸ್ತಾನ್ ಹಡಗು ನಿರ್ಮಾಣ ಕಾರ್ಖಾನೆ
3) ಬೇಲಿಕೇರಿ	ಇ) ರಸ್ತೆ ಸಾರಿಗೆ
4) ವಿಶಾಖಪಟ್ಟಣ	ಈ) ರೈಲು ಮಾರ್ಗ

ಎ) 1-ಈ, 2-ಇ, 3-ಅ, 4-ಆ
ಬಿ) 1-ಇ, 2-ಈ, 3-ಅ, 4-ಆ
ಸಿ) 1-ಅ, 2-ಆ, 3-ಇ, 4-ಈ
ಡಿ) 1-ಇ, 2-ಆ, 3-ಈ, 4-ಅ

59. ಒಬ್ಬ ವ್ಯಕ್ತಿಯು ಉತ್ತರಕ್ಕೆ ಮುಖ ಮಾಡಿ ನಿಂತಿದ್ದಾನೆ. ಅವನು ಗಡಿಯಾರದ ಮುಳ್ಳುಗಳು ಚಲಿಸುವ ದಿಕ್ಕಿಗೆ 90 ಡಿಗ್ರಿ ತಿರುಗುತ್ತಾನೆ, ಮತ್ತೆ ಅದೇ ರೀತಿ 90 ಡಿಗ್ರಿ ತಿರುಗುತ್ತಾನೆ. ಮತ್ತೊಮ್ಮೆ ಅದೇ ದಿಕ್ಕಿನಲ್ಲಿ 90 ಡಿಗ್ರಿ ತಿರುಗುತ್ತಾನೆ. ಹಾಗಾದರೆ ಈಗ ಆತ ಯಾವ ದಿಕ್ಕಿನತ್ತ ಮುಖ ಮಾಡಿದ್ದಾನೆ?
ಎ) ಉತ್ತರ ಬಿ) ಪಶ್ಚಿಮ
ಸಿ) ನೈರುತ್ಯ ಡಿ) ಪೂರ್ವ

60. ಇತ್ತೀಚೆಗೆ ಚರ್ಚೆಯಲ್ಲಿರುವ ‘ಪ್ರಯೋಗಾಲಯ ಮೂಲದ ಸಿದ್ಧಾಂತ’ ಯಾವುದಕ್ಕೆ ಸಂಬಂಧಿಸಿದೆ?
ಎ) ಕೋವಿಡ್ ವ್ಯಾಕ್ಸಿನ್ ಸಂಶೋಧನೆ
ಬಿ) ಕೋವಿಡ್ ಹುಟ್ಟಿನ ಮೂಲ
ಸಿ) ಕೋವಿಡ್ ಪ್ರಸರಣದ ತೀವ್ರತೆ
ಡಿ) ಕೋವಿಡ್ ವೈರಸ್ ರೂಪಾಂತರ

61. 2020ನೇ ಸಾಲಿನಲ್ಲಿ ಭಾರತ ರತ್ನ ಪಡೆದವರು ಯಾರು?
ಎ) ಸಚಿನ್ ತೆಂಡೂಲ್ಕರ್ & ಸಿ.ಎನ್.ಆರ್.ರಾವ್
ಬಿ) ಮದನ ಮೋಹನ್ ಮಾಳವೀಯ & ಅಟಲ್ ಬಿಹಾರಿ ವಾಜಪೇಯಿ
ಸಿ) ಪ್ರಣಬ್ ಮುಖರ್ಜಿ, ಭೂಪೇನ್ ಹಜಾರಿಕಾ & ನಾನಾಜಿ ದೇಶಮುಖ್
ಡಿ) ಯಾರೂ ಅಲ್ಲ

62. ‘ಭಾರತದ ಪುನರುಜ್ಜೀವನದ ಪಿತಾಮಹ’ ಎಂದು ಹೆಸರಾದವರು ಯಾರು?
ಎ) ಮಹಾತ್ಮ ಗಾಂಧೀಜಿ
ಬಿ) ದಾದಾಭಾಯಿ ನವರೋಜಿ
ಸಿ) ರಾಜಾ ರಾಮ್ ಮೋಹನ್ ರಾಯ್
ಡಿ) ಲಾಲಾ ಲಜಪತ್ ರಾಯ್

63. ಸ್ವತಂತ್ರ ಭಾರತದ ಎರಡನೇ ರಾಷ್ಟ್ರಪತಿ ಆಗಿದ್ದವರು ಯಾರು?
ಎ) ಡಾ.ಬಾಬು ರಾಜೇಂದ್ರ ಪ್ರಸಾದ್
ಬಿ) ಡಾ.ಎಸ್.ರಾಧಾಕೃಷ್ಣನ್
ಸಿ) ವಿ.ವಿ.ಗಿರಿ
ಡಿ) ಝಾಕೀರ್ ಹುಸೇನ್

64. ಹೊಂದಿಸಿ ಬರೆಯಿರಿ

1. ರ್‍ಯಾಡ್ ಕ್ಲಿಫ್ ರೇಖೆ	ಅ)ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ
2. ಮ್ಯಾಕ್ ಮೋಹನ್ ರೇಖೆ	ಆ)ಜರ್ಮನಿ ಮತ್ತು ಫ್ರಾನ್ಸ್
3. ಡುರಾಂಡ್ ರೇಖೆ	ಇ) ಭಾರತ ಮತ್ತು ಪಾಕಿಸ್ತಾನ
4. ಹಿಂಡೆನ್ ಬರ್ಗ್ ರೇಖೆ	ಈ) ಭಾರತ ಮತ್ತು ಚೀನಾ

ಎ) 1-ಈ, 2-ಇ, 3-ಅ, 4-ಆ
ಬಿ) 1-ಇ, 2-ಅ, 3-ಈ, 4-ಆ
ಸಿ) 1-ಅ, 2-ಆ, 3-ಇ, 4-ಈ
ಡಿ) 1-ಇ, 2-ಈ, 3-ಅ, 4-ಆ

65. ‘ಕುರುಕ್ಷೇತ್ರ’ ಯುದ್ಧದಲ್ಲಿ ಪಾಲ್ಗೊಂಡಿದ್ದ ಕೌರವ ಮತ್ತು ಪಾಂಡವರ ಸೇನಾ ಬಲ ಅನುಕ್ರಮವಾಗಿ ಎಷ್ಟು ಅಕ್ಷೋಹಿಣಿ ಇತ್ತು?
ಎ) 7–11 ಬಿ) 11–7
ಸಿ) 10–8 ಡಿ) 8–10

ಭಾಗ – 4ರ ಉತ್ತರ
41. ಸಿ, 42. ಎ, 43. ಸಿ, 44. ಎ, 45. ಎ, 46. ಎ, 47. ಬಿ, 48. ಎ, 49. ಸಿ, 50. ಡಿ, 51. ಸಿ, 52. ಡಿ, 53. ಡಿ, 54. ಸಿ, 55. ಸಿ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಸುಭಾಷಿತ

ನಮ್ಮಲ್ಲಿ ಹೆಚ್ಚಿನವರಿಗೆ ಇರುವ ದೊಡ್ಡ ಸಮಸ್ಯೆಯೆಂದರೆ, ನಾವು ಟೀಕೆಯನ್ನು ರಚನಾತ್ಮಕವಾಗಿ ಸ್ವೀಕರಿಸಿ ಉನ್ನತಿ ಹೊಂದುವುದಕ್ಕಿಂತ, ಹೊಗಳಿಕೆಯಿಂದ ನಾಶವಾಗುವುದೇ ಹೆಚ್ಚು. -ನಾರ್ಮನ್ ವಿನ್ಸೆಂಟ್ ಪೀಲ್

ದುರ್ಗಮ ಪ್ರದೇಶದಲ್ಲಿ ಮೂಲಸೌಕರ್ಯ ಕೊರತೆ ನೀಗಲು ತುರ್ತು ಕ್ರಮ ಅಗತ್ಯ

ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಮಚ್ಚಳ್ಳಿ ಎಂಬ ಜನವಸತಿ ಪ್ರದೇಶದಿಂದ, ಅನಾರೋಗ್ಯಕ್ಕೊಳಗಾಗಿದ್ದ ಮಹಿಳೆಯೊಬ್ಬರನ್ನು ಏಳು ಕಿಲೊಮೀಟರ್ ದೂರದವರೆಗೆ ಹೊತ್ತು ತಂದು ಆಸ್ಪತ್ರೆಗೆ ದಾಖಲಿಸಿರುವುದು ವರದಿಯಾಗಿದೆ. ಮಚ್ಚಳ್ಳಿ ಪ್ರಕರಣವು ಬೆಳಕಿಗೆ ಬಂದ ಒಂದು ಉದಾಹರಣೆಯಷ್ಟೆ. ರಾಜ್ಯದ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಸರಿಯಾದ ರಸ್ತೆ, ಸೇತುವೆ ಸಂಪರ್ಕಗಳಿಲ್ಲದ ನೂರಾರು ಹಳ್ಳಿಗಳಿವೆ. ಇಂತಹ ಬಹುಪಾಲು ಹಳ್ಳಿಗಳು ಆಸ್ಪತ್ರೆಗಳು, ಶಾಲಾ–ಕಾಲೇಜುಗಳು, ಬ್ಯಾಂಕ್, ಸರ್ಕಾರಿ ಕಚೇರಿಗಳಿಂದಲೂ ಹೆಚ್ಚು ದೂರದಲ್ಲೇ ಇವೆ. ಮಲೆನಾಡಿನ ಘಟ್ಟ ಪ್ರದೇಶಗಳು ಹಾಗೂ ಕರಾವಳಿಯ ಕಾಡಂಚಿನಲ್ಲಿರುವ ಹಳ್ಳಿಗಳ ಜನರು ಸಣ್ಣ ಕೆಲಸಗಳಿಗೂ ಬೆಟ್ಟ, ಗುಡ್ಡಗಳನ್ನು ಹತ್ತಿ–ಇಳಿದು, ಹತ್ತಾರು ಕಿ.ಮೀ. ದೂರವನ್ನು ಕಾಲ್ನಡಿಗೆಯಲ್ಲೇ ಕ್ರಮಿಸಬೇಕಾದ ಸ್ಥಿತಿ ಈಗಲೂ ಇದೆ. ನದಿ, ಹಳ್ಳಗಳಿಗೆ ಸೇತುವೆ, ಕಾಲುಸಂಕಗಳಿಲ್ಲದೇ ಜನರು ಜೀವವನ್ನೇ ಪಣಕ್ಕಿಟ್ಟು ಓಡಾಡುತ್ತಿರುವುದು ಅನೇಕ ಹಳ್ಳಿಗಳಲ್ಲಿ ಕಾಣಸಿಗುತ್ತದೆ. ರೋಗಿಗಳನ್ನು ಚಿಕಿತ್ಸೆಗಾಗಿ ಕಿಲೊಮೀಟರ್‌ಗಟ್ಟಲೆ ದೂರ ಹೊತ್ತೊಯ್ಯುವಂತಹ ದಯನೀಯ ಸ್ಥಿತಿ, ಪಡಿತರವನ್ನು ಹೆಗಲ ಮೇಲೆ ಹೊತ್ತುಕೊಂಡೇ ಸಾಗಿಸಬೇಕಾದ ಅನಿವಾರ್ಯವು ಗ್ರಾಮೀಣ ಜನವಸತಿಗಳಲ್ಲಿರುವ ಮೂಲಸೌಕರ್ಯದ ಕೊರತೆಯನ್ನು ಸಾರುತ್ತವೆ. ತುಂಬಿ ಹರಿಯುವ ಹಳ್ಳ, ನದಿಗಳನ್ನು ದಾಟಲು ಯತ್ನಿಸುವಾಗ ಜನರು ಕೊಚ್ಚಿಹೋಗುವಂತಹ ದುರ್ಘಟನೆಗಳು ಪ್ರತೀ ಮಳೆಗಾಲದಲ್ಲೂ ಸಂಭವಿಸುತ್ತಲೇ ಇವೆ. ದುರ್ಘಟನೆಗಳು ನಡೆದಾಗಲೆಲ್ಲ ಗ್ರಾಮೀಣ ಪ್ರದೇಶದಲ್ಲಿನ ಮೂಲಸೌಕರ್ಯದ ಕೊರತೆಯ ವಿಚಾರ ಚರ್ಚೆಯ ಮುನ್ನೆಲೆಗೆ ಬರುತ್ತದೆ. ಅಷ್ಟೇ ವೇಗವಾಗಿ ಮರೆಯೂ ಆಗುತ್ತದೆ. ಗ್ರಾಮೀಣ ಭಾಗದಲ್ಲಿ ಮೂಲಸೌಕರ್ಯ ಅಭಿವೃದ್ಧಿಯ ವೇಗ ಹೆಚ್ಚುವುದಿಲ್ಲ ಎಂಬುದಕ್ಕೆ ರಾಜ್ಯದ ಉದ್ದಗಲಕ್ಕೂ ನೂರಾರು ನಿದರ್ಶನಗಳು ಸಿಗುತ್ತವೆ. ಕೊರೊನಾ ಸಾಂಕ್ರಾಮಿಕ ಸೃಷ್ಟಿಸಿರುವ ಬಿಕ್ಕಟ್ಟಿನ ಈ ದಿನಗಳಲ್ಲಿ ಇಂತಹ ಹಳ್ಳಿಗಳ ಜನರ ಸಂಕಷ್ಟ ದುಪ್ಪಟ್ಟಾಗಿದೆ. ವೈದ್ಯಕೀಯ ಪರೀಕ್ಷೆ ಮತ್ತು ಚಿಕಿತ್ಸಾ ಸೌಲಭ್ಯ ಪಡೆಯುವುದಕ್ಕೆ ಹರಸಾಹಸಪಡಬೇಕಾದ ಸ್ಥಿತಿ ಅನೇಕ ಹಳ್ಳಿಗಳಲ್ಲಿ ಈಗಲೂ ಇದೆ. ಕೋವಿಡ್ ಪರೀಕ್ಷೆ, ಚಿಕಿತ್ಸೆ ಮತ್ತು ಲಸಿಕೆ ಪಡೆಯುವುದಕ್ಕೆ ಆರೋಗ್ಯ ಕೇಂದ್ರ ತಲುಪುವುದೇ ಇಲ್ಲಿನ ಜನರಿಗೆ ಬಹುದೊಡ್ಡ ಸವಾಲಾಗಿದೆ.

ಹಳ್ಳಿಗರು ಅಗತ್ಯ ಸೇವೆಗಳನ್ನು ಪಡೆಯಲು ಅಡ್ಡಿಯಾಗಿರುವ ಸಂಪರ್ಕದ ತೀವ್ರ ಸಮಸ್ಯೆಗೆ ಪರಿಹಾರ ಒದಗಿಸಲು ಎಲ್ಲ ಹಂತದ ಆಡಳಿತ ವ್ಯವಸ್ಥೆ ಸಮರೋಪಾದಿಯಲ್ಲಿ ಸ್ಪಂದಿಸಬೇಕು

ಮಲೆನಾಡು ಮತ್ತು ಕರಾವಳಿಯ ಗುಡ್ಡಗಾಡು ಪ್ರದೇಶದ ಹಳ್ಳಿಗಳಲ್ಲಿರುವ ಈ ದುಃಸ್ಥಿತಿಗೆ ಗ್ರಾಮ ಪಂಚಾಯಿತಿಯಿಂದ ರಾಜ್ಯ ಸರ್ಕಾರದವರೆಗೆ ಎಲ್ಲರೂ ಹೊಣೆಗಾರರು. ಜನರಿಗೆ ರಸ್ತೆ, ಕುಡಿಯುವ ನೀರು, ಆರೋಗ್ಯ, ಶಿಕ್ಷಣದಂತಹ ಕನಿಷ್ಠ ಸೌಲಭ್ಯಗಳನ್ನು ಒದಗಿಸುವುದು ಸ್ಥಳೀಯ ಆಡಳಿತ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರದ ಜವಾಬ್ದಾರಿ. ಇದಕ್ಕಾಗಿಯೇ ಹತ್ತಾರು ಯೋಜನೆಗಳೂ ಚಾಲ್ತಿಯಲ್ಲಿವೆ. ಆದರೂ, ನೂರಾರು ಹಳ್ಳಿಗಳ ಸಂಕಷ್ಟ ಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಗ್ರಾಮೀಣ ಪ್ರದೇಶದ ಜನವಸತಿಗಳಿಗೆ ಮೂಲಸೌಕರ್ಯ ಕಲ್ಪಿಸುವ ವಿಚಾರದಲ್ಲಿ ಇರುವ ಬದ್ಧತೆಯ ಕೊರತೆಯನ್ನು ಇದು ಎತ್ತಿತೋರಿಸುತ್ತದೆ. ಅಧ್ಯಯನ ವರದಿಯೊಂದರ ಪ್ರಕಾರ, 2019ರ ಮಾರ್ಚ್ ಅಂತ್ಯಕ್ಕೆ ರಾಜ್ಯದಲ್ಲಿ 1,90,862 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳಿದ್ದವು. ಅವುಗಳಲ್ಲಿ 1,12,315 ಕಿ.ಮೀ. ಉದ್ದದ (ಶೇ 58.85) ರಸ್ತೆಗಳು ಮಣ್ಣು ಮತ್ತು ಕಲ್ಲಿನಿಂದ ಕೂಡಿದ ಕಚ್ಚಾ ರಸ್ತೆಗಳು ಎಂಬುದು ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಯ ಸ್ಥಿತಿಗತಿಗೆ ಕನ್ನಡಿ ಹಿಡಿಯುತ್ತದೆ. 2018ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಶಾಲಾ ಬಾಲಕಿಯೊಬ್ಬಳು ಹಳ್ಳದಲ್ಲಿ ಕೊಚ್ಚಿಹೋದ ಪ್ರಕರಣದ ಬಳಿಕ ಕಾಲುಸಂಕಗಳ ನಿರ್ಮಾಣ ಮತ್ತು ನಿರ್ವಹಣೆಗೆ ರಾಜ್ಯ ಸರ್ಕಾರ ಆಸಕ್ತಿ ತೋರಿತ್ತು. ಆದರೆ, ಆ ಯೋಜನೆಯೂ ಕುಂಟುತ್ತಾ ಸಾಗಿದೆ. ಸಂಪರ್ಕದ ತೀವ್ರ ಸಮಸ್ಯೆಯು ಜನರಿಗೆ ಉದ್ಯೋಗ, ಶಿಕ್ಷಣ, ಆರೋಗ್ಯದಂತಹ ಅಗತ್ಯ ಸೇವೆಗಳನ್ನು ಪಡೆಯುವುದಕ್ಕೆ ಅಡ್ಡಿಯಾಗುತ್ತಿದೆ. ಇದಕ್ಕೆ ಪರಿಹಾರ ಒದಗಿಸಲು ಗ್ರಾಮ ಪಂಚಾಯಿತಿಯಿಂದ ರಾಜ್ಯ ಸರ್ಕಾರದವರೆಗೆ ಎಲ್ಲ ಹಂತದ ಆಡಳಿತ ವ್ಯವಸ್ಥೆ ಸಮರೋಪಾದಿಯಲ್ಲಿ ಸ್ಪಂದಿಸಬೇಕಿದೆ. ಕೋವಿಡ್ ಬಿಕ್ಕಟ್ಟು ವೈದ್ಯಕೀಯ ಸೌಕರ್ಯದ ಅನಿವಾರ್ಯವನ್ನು ದ್ವಿಗುಣಗೊಳಿಸಿದೆ. ಸಂಚಾರಿ ಕ್ಲಿನಿಕ್‌ಗಳು, ಆಂಬುಲೆನ್ಸ್ ಸೇವೆ, ಆರೋಗ್ಯ ಕೇಂದ್ರಗಳ ಸಂಖ್ಯೆ ಹೆಚ್ಚಿಸುವಂತಹ ಕ್ರಮಗಳ ಮೂಲಕ ಗುಡ್ಡಗಾಡು ಪ್ರದೇಶದ ಜನರಿಗೆ ವೈದ್ಯಕೀಯ ಸೌಲಭ್ಯವನ್ನು ಇನ್ನಷ್ಟು ಸನಿಹವಾಗಿಸಬೇಕಾಗಿದೆ.

ದಿನದ ಟ್ವೀಟ್

ದುರುಪಯೋಗ ಸಲ್ಲ

ಬಸವಣ್ಣನವರ ವಾರಸುದಾರಿಕೆಯನ್ನು ಪ್ರತಿಪಾದಿಸುವ ಕೆಲವು ಲಿಂಗಾಯತ ಮಠಾಧೀಶರು ಮತ್ತು ಮಠಗಳಿಗೆ ಬಸವಣ್ಣನವರ ಆಶಯಗಳು, ಶರಣ ಚಳವಳಿಯ ಹೋರಾಟದ ಹಿನ್ನೆಲೆ ತಿಳಿದಂತಿಲ್ಲ. ಬದಲಾದ ಕಾಲಘಟ್ಟದಲ್ಲಿ ಬಸವಣ್ಣನವರನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲಾಗಿದೆ. ಬಸವಣ್ಣನವರ ಆಶಯಗಳು ಸಾಕಾರಗೊಳ್ಳಲಿ.

ಮೂರ್ತಿ ಬಿ.ಎನ್., ವಕೀಲ

25 ವರ್ಷಗಳ ಹಿಂದೆ

ಶುಕ್ರವಾರ, 14-6-1996

• **ದಳದಿಂದ ಹೆಗಡೆ ಉಚ್ಚಾಟನೆ**

ನವದೆಹಲಿ, ಜೂನ್ 13 (ಪಿಟಿಐ, ಯುಎನ್‌ಐ)– ಕರ್ನಾಟಕದ ಮಾಜಿ ಮುಖ್ಯಮಂತ್ರಿ ಮತ್ತು ಜನತಾದಳದ ಹಿರಿಯ ನಾಯಕ ರಾಮಕೃಷ್ಣ ಹೆಗಡೆ ಅವರನ್ನು ಪಕ್ಷ ವಿರೋಧಿ ಚಟುವಟಿಕೆಗಾಗಿ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷಗಳ ಕಾಲ ಉಚ್ಚಾಟಿಸಲಾಗಿದೆ.

ಹೆಗಡೆ ಅವರ ಉಚ್ಚಾಟನೆಯನ್ನು ಪಕ್ಷದ ಅಧ್ಯಕ್ಷ ಲಾಲೂ ಪ್ರಸಾದ್ ಯಾದವ್ ಅವರು ಇಂದು ಇಲ್ಲಿ ಪ್ರಕಟಿಸಿದರು. 'ಕಳೆದ 5 ವರ್ಷಗಳಿಂದ ಹೆಗಡೆ ಅವರು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಪ್ರಧಾನಿ ಸ್ಥಾನಕ್ಕೆ ಎಚ್.ಡಿ. ದೇವೇಗೌಡ ಅವರನ್ನು ಆಯ್ಕೆ ಮಾಡಿದ ನಂತರ ಹೆಗಡೆ ಅವರು ಪಕ್ಷವನ್ನು ದುರ್ಬಲಗೊಳಿಸುವ ಯತ್ನವನ್ನು ಇನ್ನಷ್ಟು ಹೆಚ್ಚಿಸಿದರು ಎಂದು ಲಾಲೂ ಆರೋಪಿಸಿದ್ದಾರೆ.

ಹೆಗಡೆ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದಾರೆ ಎಂದು ಕರ್ನಾಟಕ ಜನತಾದಳ ಘಟಕದ ಅಧ್ಯಕ್ಷ ಮತ್ತು ನಾಗರಿಕ ವಿಮಾನಯಾನ ಸಚಿವ ಸಿ.ಎಂ. ಇಬ್ರಾಹಿಂ ಅವರು ಜೂನ್ 10ರಂದು ನೀಡಿದ ದೂರಿನ ಅನ್ವಯ ಹೆಗಡೆ ಅವರ ವಿರುದ್ಧ ಈ ಕ್ರಮ ಕೈಗೊಳ್ಳಲಾಯಿತು.

• **ಉದ್ಯಮಗಳಲ್ಲಿ 'ಮಾಲಿನ್ಯ ತಡೆ ಇನ್‌ಸ್ಪೆಕ್ಟರ್'ಗಳ ನೇಮಕಕ್ಕೆ ಶಾಸನ**

ಬೆಂಗಳೂರು, ಜೂನ್ 13– ರಾಜ್ಯದ ಬೃಹತ್ ಕೈಗಾರಿಕೆಗಳು ಸೃಷ್ಟಿಸುತ್ತಿರುವ ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸರ್ವ ಸಿದ್ಧತೆ ನಡೆಸಿದೆ.

ಪರಿಸರ ಮಾಲಿನ್ಯ ಸೃಷ್ಟಿಸುತ್ತಿರುವ ರಾಜ್ಯದ ಬೃಹತ್ ಉದ್ಯಮಗಳಲ್ಲಿ, ಮಾಲಿನ್ಯ ತಡೆಗಟ್ಟುವ ದೃಷ್ಟಿಯಿಂದ ಉದ್ಯಮದೊಳಗೇ 'ಪರಿಸರ ಮಾಲಿನ್ಯ ತಡೆ ಇನ್‌ಸ್ಪೆಕ್ಟರ್'ಗಳನ್ನು ನೇಮಿಸುವ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 14-6-1971

• **ಭಾಷಣದಲ್ಲಿ ಜಾತ್ಯತೀತತೆ, ಕೃತಿಯಲ್ಲಿ ಸ್ವಜಾತಿ ಹಿತದ ರಕ್ಷಣೆ ಪ್ರವೃತ್ತಿಯ ಖಂಡನೆ**

ಬೆಂಗಳೂರು, ಜೂನ್ 13– ವೇದಿಕೆಯ ಮೇಲೆ ಜಾತ್ಯತೀತ ತತ್ವ ಕುರಿತು ಭಾಷಣ ಮಾಡಿ, ಅಧಿಕಾರ ಬಂದ ಮೇಲೆ ತಮ್ಮ ಜಾತಿಯವರ ಯೋಗಕ್ಷೇಮ ಮಾತ್ರವನ್ನೇ ನೋಡಿಕೊಳ್ಳುವ ರಾಜಕಾರಣಿಗಳನ್ನು ಪ್ರದೇಶ ಕಾಂಗ್ರೆಸ್ ಸಮಿತಿ (ಹಂಗಾಮಿ) ಸಂಚಾಲಕ ಶ್ರೀ ಡಿ. ದೇವರಾಜ ಅರಸು ಅವರು ಇಂದು ಇಲ್ಲಿ ತರಾಟೆಗೆ ತೆಗೆದುಕೊಂಡರು.

ಪುರಭವನದಲ್ಲಿ ಅಖಿಲ ಮೈಸೂರು ನಾಯಕ ಜನಾಂಗದ ಮಹಾಸಮ್ಮೇಳನವನ್ನು ಉದ್ಘಾಟಿಸಿದ ಅವರು, ಹಿಂದುಳಿದ ವರ್ಗಗಳ ರಾಜಕೀಯ ಜಾಗೃತಿಗೆ ಕರೆಯಿತ್ತರು.

'ಈ ಮಹತ್ಕಾರ್ಯ ಸಾಧನೆಗೆ' ಒಗ್ಗಟ್ಟು ಮತ್ತು ಶಿಸ್ತು ಅಗತ್ಯವೆಂದು ಶ್ರೀ ಅರಸು ಸ್ಪಷ್ಟಪಡಿಸಿದರು.

• **ಪಕ್ಷಾಂತರ ಕಾರಣ ಪ್ರಕಾಶ ಸಿಂಗ್ ಬಾದಲ್ ಸಂಪುಟದ ರಾಜೀನಾಮೆ**

ಚಂಡೀಗಡ, ಜೂನ್ 13– ಮುಖ್ಯಮಂತ್ರಿ ಶ್ರೀ ಪ್ರಕಾಶ ಸಿಂಗ್ ಬಾದಲ್ ಅವರ ಶಿಫಾರಸಿನ ಮೇರೆಗೆ ಪಂಜಾಬ್ ರಾಜ್ಯದ ವಿಧಾನಸಭೆಯನ್ನು ರಾಜ್ಯಪಾಲ ಡಾ. ಡಿ.ಸಿ. ಪಾವಟೆ ಅವರು ಇಂದು ವಿಸರ್ಜಿಸಿದರು.

ಬಾದಲ್ ಮಂತ್ರಿಮಂಡಲಕ್ಕೆ ಬೆಂಬಲ ಕೊಡುವುದನ್ನು ಹಿಂತೆಗೆದುಕೊಂಡರು. ವಿರೋಧಿ ಅಕಾಲಿದಳ ರಚಿಸಲು 18 ಮಂದಿ ಅಕಾಲಿ ಶಾಸಕರು ನಿರ್ಧಾರ ಕೈಗೊಂಡ ಒಂದು ಗಂಟೆಯೊಳಗೆ ಈ ಪ್ರಕಟಣೆ ಹೊರಬಿತ್ತು.

ಮೂವರು ಮಕ್ಕಳನ್ನು ಹೊಂದಬಹುದು ಎಂಬ ಸರ್ಕಾರದ ನೀತಿಯನ್ನು ಕೇಳುವವರೇ ಇಲ್ಲ

ಮಕ್ಕಳ ಒಲ್ಲದ ಚೀನಾ ಯುವಜನ

ವಿಶ್ಲೇಷಣೆ

ಸುಯ್ ಲಿ ವೀ, ಎಲ್ಸಿ ಚೆನ್

ಮಗು ಬೇಕು ಎಂದು ಹುವಾಂಗ್ ಯುಲಾಂಗ್‌ಗೆ ಅನಿಸಿದ್ದೇ ಇಲ್ಲ. ಹುವಾಂಗ್ ಮಗುವಾಗಿದ್ದಾಗ ಆತನನ್ನು ಹೆತ್ತವರು, ಸಂಬಂಧಿಕರ ಮನೆಯಲ್ಲಿ ಬಿಟ್ಟು ದೂರದ ಊರಿನ ಕಾರ್ಖಾನೆಯಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. ಮಗುವನ್ನು ನೋಡಲು ಬರುತ್ತಿದ್ದುದು ವರ್ಷಕ್ಕೆ ಒಮ್ಮೆ ಮಾತ್ರ. ಇದು ಹುವಾಂಗ್‌ನಲ್ಲಿ ಮುನಿಸು ಮೂಡಲು ಕಾರಣವಾಗಿತ್ತು. ಈಗ, ಕುಟುಂಬದ ಹೆಸರು ಉಳಿಯಬೇಕು, ಮಗು ಬೇಕು ಎಂಬ ಯಾವ ಭಾವನೆಯೂ ಹುವಾಂಗ್ ಅವರಲ್ಲಿ ಇಲ್ಲ.

ಹಾಗಾಗಿಯೇ 26ನೇ ವಯಸ್ಸಿನಲ್ಲಿ ಅವರು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು.

'ನಮ್ಮ ತಲೆಮಾರಿಗೆ ಮಕ್ಕಳ ಅಗತ್ಯ ಇಲ್ಲ. ಈಗ ನಾವು ಯಾವುದೇ ಹೊರೆ ಇಲ್ಲದೆ ಬದುಕಬಹುದು. ನಮ್ಮ ಸಂಪನ್ಮೂಲವನ್ನು ನಮ್ಮದೇ ಬದುಕಿಗಾಗಿ ಏಕೆ ಬಳಸಿಕೊಳ್ಳಬಾರದು' ಎಂದು ದಕ್ಷಿಣ ಚೀನಾದ ಗುವಾಂಗ್‌ಝು ನಗರದ ನಿವಾಸಿಯಾಗಿರುವ ಅವಿವಾಹಿತ ಹುವಾಂಗ್ ಕೇಳುತ್ತಾರೆ.

'ದುಪ್ಪಟ್ಟು ಆದಾಯ, ಮಕ್ಕಳು ಇಲ್ಲ' (ಡಿಂಕ್- ಡಬಲ್ ಇನ್‌ಕಮ್, ನೋ ಚಿಲ್ಡ್ರನ್) ಎಂಬ ಜೀವನ ಶೈಲಿಗಾಗಿ ಹುವಾಂಗ್ ಯತ್ನಿಸುತ್ತಿದ್ದಾರೆ. ಈ ಪರಿಕಲ್ಪನೆ ದಶಕಗಳಿಂದ ಇದ್ದರೂ ಚೀನಾದಲ್ಲಿ ಇದು ಈಗ ಮುಖ್ಯವಾಹಿನಿಗೆ ಬಂದಿದೆ. ಜೀವನವೆಚ್ಚ ಹೆಚ್ಚಳ ಮತ್ತು ಇತರ ಆರ್ಥಿಕ ಹೊರೆಗಳಿಂದಾಗಿ ಮಕ್ಕಳನ್ನು ಪಡೆಯಲು ಯುವಜನ ಬಯಸುತ್ತಿಲ್ಲ. ಶಾಲೆ ಮತ್ತು ಅಪಾರ್ಟ್‌ಮೆಂಟ್‌ಗಳಿಗಾಗಿ ಸ್ಪರ್ಧೆ ಹೆಚ್ಚಾಗಿದೆ. ಒಂದೇ ಮಗು ಸಾಕು ಎಂದು ಕೆಲವು ದಂಪತಿ ಹೇಳಿದರೆ, ಕೆಲವರಿಗೆ ಒಂದು ಮಗುವೂ ಬೇಡ.

ಜನಸಂಖ್ಯೆಗೆ ಸಂಬಂಧಿಸಿ ಎದುರಾಗಬಹುದಾದ ಬಿಕ್ಕಟ್ಟು ತಪ್ಪಿಸಲು ಚೀನಾ ಸರ್ಕಾರ ನಡೆಸುತ್ತಿರುವ ಪ್ರಯತ್ನ ಮತ್ತು ಜನರ ಜೀವನಶೈಲಿಯ ನಡುವೆ ಸಂಘರ್ಷ ಇದೆ. ಚೀನಾ ತನ್ನ ಕುಟುಂಬ ಯೋಜನೆ ನೀತಿಯನ್ನು ಪರಿಷ್ಕರಿಸಿ, ದಂಪತಿಯು ಇಬ್ಬರು ಮಕ್ಕಳ ಬದಲು ಮೂವರು ಮಕ್ಕಳನ್ನು ಹೊಂದಬಹುದು ಎಂದಿದೆ. ದಂಪತಿ ಮೂವರು ಮಕ್ಕಳನ್ನು ಹೊಂದಲು ಉತ್ತೇಜನ ನೀಡುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಆದರೆ, ಹುವಾಂಗ್‌ನಂಥವರು ಮಕ್ಕಳೇ ಬೇಡ ಎನ್ನುತ್ತಿದ್ದಾರೆ. ಅದನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ಶಸ್ತ್ರಕ್ರಿಯೆಗೂ ಒಳಗಾಗುತ್ತಿದ್ದಾರೆ.

ಸಂತಾನಶಕ್ತಿಹರಣ ಶಸ್ತ್ರಕ್ರಿಯೆ ಮಾಡಿಸಿಕೊಳ್ಳುವ ಹುವಾಂಗ್‌ನ ನಿರ್ಧಾರ ಅತಿರೇಕ ಅನಿಸಬಹುದು. ಆದರೆ, ಮಕ್ಕಳು ಬೇಡ ಎಂದು ಜನರು ನಿರ್ಧರಿಸುತ್ತಿರುವುದೇ ದೇಶದ ಜನಸಂಖ್ಯೆ ಕುಗ್ಗಲು ಮುಖ್ಯ ಕಾರಣ ಎಂದು ಜನಸಂಖ್ಯಾಶಾಸ್ತ್ರಜ್ಞರು ಹಿಂದೆಯೇ ಎಚ್ಚರಿಸಿದ್ದರು. ಇಲ್ಲಿ ಈಗ ಕುಟುಂಬದ ಸರಾಸರಿ ಗಾತ್ರವು 2.62 ಜನ. 2010ರಲ್ಲಿ ಇದು 3.1 ಇತ್ತು.

ಸಂತಾನಶಕ್ತಿಹರಣ ಶಸ್ತ್ರಕ್ರಿಯೆ ಮಾಡಿಸಿಕೊಂಡ ವಿಚಾರವನ್ನು ಬಹಿರಂಗಪಡಿಸಲು ಬಯಸದ ಜನರೂ ಇದ್ದಾರೆ. ಈ ಲೇಖನಕ್ಕಾಗಿ ಮಾತನಾಡಿಸಿದ ಇಬ್ಬರು ತಮ್ಮ ಪೂರ್ಣ ಹೆಸರು ಬರೆಯಬೇಡಿ ಎಂದು ವಿನಂತಿಸಿದ್ದಾರೆ. ಶಸ್ತ್ರಕ್ರಿಯೆ ಮಾಡಿಸಿಕೊಂಡ ಬಗ್ಗೆ ಕುಟುಂಬದ ಕೆಲವರು ಮತ್ತು ಗೆಳೆಯರಿಗೆ ಗೊತ್ತಿಲ್ಲ ಎಂದು ಅವರು ಹೇಳಿದ್ದಾರೆ.

ಅವಿವಾಹಿತ ಯುವಕರು ಇಂತಹ ಶಸ್ತ್ರಕ್ರಿಯೆ ಮಾಡಿಸಿಕೊಳ್ಳುವುದನ್ನು ಚೀನಾದ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಕಳಂಕ ಎಂದೇ ಭಾವಿಸಲಾಗುತ್ತದೆ. ಇಂತಹ ಶಸ್ತ್ರಕ್ರಿಯೆ ಮಾಡಿಸಿಕೊಳ್ಳಬೇಕಾದರೆ ಕೆಲವು ನಗರಗಳಲ್ಲಿ ವೈದ್ಯರು ಮದುವೆ ಪ್ರಮಾಣಪತ್ರ ಮತ್ತು ಸಂಗಾತಿಯ ಸಮ್ಮತಿಪತ್ರ ಕೇಳುತ್ತಿದ್ದಾರೆ. ಮದುವೆ ಆಗಿದೆಯೇ ಎಂದು ವೈದ್ಯರು ಹುವಾಂಗ್‌ಗೂ ಕೇಳಿದ್ದರು. ಮದುವೆ ಆಗಿ ಮಕ್ಕಳು ಇವೆ ಎಂದು ಹುವಾಂಗ್ ಸುಳ್ಳು ಹೇಳಿದ್ದರು.

ತೀವ್ರ ಪ್ರಮಾಣದಲ್ಲಿ ಆರ್ಥಿಕ ಅಭಿವೃದ್ಧಿಯ ಸಂದರ್ಭದಲ್ಲಿ ಜನಸಂಖ್ಯೆ ಹೆಚ್ಚಳಕ್ಕೆ ಕಡಿವಾಣ ಹಾಕಲು ಸರ್ಕಾರವು ನಿರ್ಧರಿಸಿ ಒಂದು ಕುಟುಂಬಕ್ಕೆ ಒಂದೇ ಮಗು ಎಂಬ ನೀತಿ ಜಾರಿಗೆ ತಂದಾಗಲೇ ಸಂತಾನಶಕ್ತಿಹರಣ ಶಸ್ತ್ರಕ್ರಿಯೆ ಬಗ್ಗೆ ಜನರು ತಿಳಿದುಕೊಂಡಿದ್ದರು. ಒಂದು ಮಗು ನೀತಿಯ ಕಾರಣಕ್ಕೆ ಹಲವು ಮಹಿಳೆಯರನ್ನು ಬಲವಂತವಾಗಿ ಶಸ್ತ್ರಕ್ರಿಯೆಗೆ ಒಳಪಡಿಸಲಾಗಿತ್ತು. ಆಗಲೂ ಪುರುಷರನ್ನು ಶಸ್ತ್ರಕ್ರಿಯೆಗೆ ಒಳಪಡಿಸಿದ ಪ್ರಮಾಣ ಕಡಿಮೆಯೇ ಇತ್ತು.

ಮೂವರು ಮಕ್ಕಳ ನೀತಿಯ ಮೂಲಕ ಸಂತಾನ ಶಕ್ತಿಹರಣ ಶಸ್ತ್ರಕ್ರಿಯೆಗೆ ತಡೆ ಒಡ್ಡಲು ಸರ್ಕಾರ ಬಯಸಿದೆ. ಆದರೆ, ಜನರೇ ಸ್ವಯಂಪ್ರೇರಣೆಯಿಂದ ಶಸ್ತ್ರಕ್ರಿಯೆಗೆ ಒಳಗಾಗುತ್ತಿದ್ದಾರೆ.

ಫ್ಯುಜಿಯನ್ ಪ್ರಾಂತ್ಯದ ಜಿಯಾಂಗ್ (29) ಅವರ ಶಸ್ತ್ರಕ್ರಿಯೆಯ ಕೋರಿಕೆಯನ್ನು ಆರು ಆಸ್ಪತ್ರೆಗಳು ತಿರಸ್ಕರಿಸಿವೆ. ಕುಟುಂಬ ಯೋಜನೆ ಪ್ರಮಾಣಪತ್ರ ಕೊಟ್ಟಿಲ್ಲ ಎಂಬುದು ಕಾರಣ. ಈ ಪ್ರಮಾಣಪತ್ರದಲ್ಲಿ ವೈವಾಹಿಕ ಸ್ಥಿತಿ ಮತ್ತು ಮಕ್ಕಳೆಷ್ಟು ಎಂಬ ಮಾಹಿತಿ ಇರುತ್ತದೆ.

'ನಿನಗೆ ಮದುವೆ ಆಗಿಲ್ಲ ಮತ್ತು ಮಕ್ಕಳು ಇಲ್ಲ. ನೀನು ದೇಶದ ಜನಸಂಖ್ಯಾ ನೀತಿಗೆ ವಿರುದ್ಧ ಹೋಗುತ್ತಿದ್ದಿ' ಎಂದು ಜಿಯಾಂಗ್‌ಗೆ ಹೇಳಲಾಗಿತ್ತು. ಕೊನೆಗೂ ಚೆಂಗ್ಡು ಪ್ರಾಂತ್ಯದ ಒಂದು ಆಸ್ಪತ್ರೆಯು ಅವರಿಗೆ ಶಸ್ತ್ರಚಿಕಿತ್ಸೆ ನಡೆಸಿತು.

ಪರಂಪರೆ, ವಂಶ ಮುಂದುವರಿಕೆ ಮತ್ತು ಅಂತಿಮವಾಗಿ ನಿವೃತ್ತ ಜೀವನದಲ್ಲಿ ಆಸರೆಯ ಕಾರಣಗಳಿಗಾಗಿ ಮಕ್ಕಳು ಬೇಕು ಎಂಬುದಕ್ಕೆ ಚೀನಾದ ಜನರು ಹೊಂದಿಕೊಂಡಿದ್ದರು. ಸಾಮಾಜಿಕ ಭದ್ರತೆ ಯೋಜನೆಗಳ ವಿಸ್ತರಣೆ, ವಿಮಾ ಸೌಲಭ್ಯಗಳು ಜನರಿಗೆ ಈಗ ಹೆಚ್ಚಿನ ಆಯ್ಕೆಗಳನ್ನು ನೀಡಿವೆ.

ಜಗತ್ತಿನಲ್ಲಿಯೇ ಅತಿಹೆಚ್ಚು ಅವಿವಾಹಿತರು ಇರುವ ದೇಶ ಚೀನಾ. 2018ರಲ್ಲಿ 24 ಕೋಟಿ ಜನರು ಅವಿವಾಹಿತರಿದ್ದರು. ಇದು ಒಟ್ಟು ಜನಸಂಖ್ಯೆಯ ಶೇ 17ರಷ್ಟು. ಅಮೆರಿಕಕ್ಕೆ ಹೋಲಿಸಿದರೆ ಈ ಪ್ರಮಾಣವು ಕಡಿಮೆಯೇ. ಆದರೆ, 2010ರ ಬಳಿಕ ಈ ಸಂಖ್ಯೆ ಮೂರನೇ ಒಂದರಷ್ಟು ಹೆಚ್ಚಳವಾಗಿದೆ.

'ಈಗಿನ ತಲೆಮಾರಿನ ಯುವಜನ, ಹಿಂದಿನ ತಲೆಮಾರಿನವರ ಹಾಗೆ ಕಷ್ಟಗಳನ್ನು ಸಹಿಸಿಕೊಳ್ಳುವ ಸಾಮರ್ಥ್ಯ ಹೊಂದಿಲ್ಲ. ವಯಸ್ಸಾದಾಗ ಮಕ್ಕಳು ನೋಡಿಕೊಳ್ಳುವುದಿಲ್ಲ ಮಾತ್ರವಲ್ಲ, ತಮ್ಮ ಮೇಲೆಯೇ ಅವಲಂಬಿತರಾಗಬಹುದು ಎಂದು ಯೋಚಿಸುವವರು ಬಹಳ ಜನ ಇದ್ದಾರೆ. ಹಾಗಾಗಿಯೇ, ಹೆಚ್ಚು ಹಣ ಉಳಿತಾಯ ಮಾಡಿ ವೃದ್ಧಾಶ್ರಮ ಸೇರಿಕೊಳ್ಳುವುದು ಅಥವಾ ವಿಮಾ ಪಾಲಿಸಿ ಖರೀದಿಸುವುದು ಉತ್ತಮ ಎಂದು ಜನರು ಭಾವಿಸಿದ್ದಾರೆ' ಎಂದು ಝುನ್‌ಜಿಯಾಂಗ್‌ನ ಹೆ ಫು ಹೇಳುತ್ತಾರೆ.

ಜರ್ನಲ್ ಆಫ್ ಚೈನೀಸ್ ವಿಮೆನ್ಸ್ ಸ್ಟಡೀಸ್ 2018ರಲ್ಲಿ ಪ್ರಕಟಿಸಿದ ವರದಿಯೊಂದರ ಪ್ರಕಾರ, ಹುಟ್ಟಿನಿಂದ 17 ವರ್ಷದವರೆಗೆ ಮಗುವನ್ನು ಬೆಳೆಸಲು ನೇರವಾಗಿ ಆಗುವ ವೆಚ್ಚವು 30 ಸಾವಿರ ಡಾಲರ್ (ಸುಮಾರು ₹ 22 ಲಕ್ಷ). ಇದು ಚೀನಾದ ಪೌರರ ವಾರ್ಷಿಕ ಸರಾಸರಿ ಸಂಬಳಕ್ಕಿಂತ ಏಳು ಪಟ್ಟು ಹೆಚ್ಚು.

ವುಕ್ಸಿ ನಗರದಲ್ಲಿ ನೆಲೆಸಿರುವ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿ ಹುವಾಂಗ್ (24), ತಮ್ಮ ಭಾವಿ ಸಂಗಾತಿ 28 ವರ್ಷದ ಯುವತಿಯನ್ನು ಡಿಂಕ್ ವೇದಿಕೆಯೊಂದರಲ್ಲಿ ಭೇಟಿಯಾದರು. 'ಮಗುವನ್ನು ಹೊಂದುವುದರ ವೆಚ್ಚವು ಎಷ್ಟು ಹೆಚ್ಚು, ಅದನ್ನು ನೆನೆಸಿಕೊಂಡರೆ ಭಯವಾಗುತ್ತದೆ ಎಂಬುದನ್ನು ಆಕೆಗೆ ನಾನು ನಿರಂತರವಾಗಿ ವಿವರಿಸುತ್ತಿದ್ದೇನೆ' ಎಂದು ಹುವಾಂಗ್ ಹೇಳುತ್ತಾರೆ.

ಮಕ್ಕಳನ್ನು ಹೊಂದುವ ವಿಚಾರದಲ್ಲಿ ತಮಗೆ ಇರುವ ಭಯವನ್ನು ಸಹಪಾಠಿ ಗೆಳೆಯರಿಗೆ ಹುವಾಂಗ್ ಹೇಳಿದ್ದಾರೆ. ಸಂತಾನಶಕ್ತಿಹರಣ ಶಸ್ತ್ರಕ್ರಿಯೆಯ ಸಲಹೆಯು ಅವರಿಂದ ಬಂತು. ಸುಝೌ ನಗರದಲ್ಲಿ ಕಳೆದ ನವೆಂಬರ್‌ನಲ್ಲಿ ಹುವಾಂಗ್ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಇಲ್ಲಿನ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆ ಮಾಡಲು ಒಪ್ಪುವ ಮುನ್ನ ಆರು ಆಸ್ಪತ್ರೆಗಳನ್ನು ಹುವಾಂಗ್ ಸಂಪರ್ಕಿಸಿದ್ದರು.

ಹೆಚ್ಚು ಪ್ರಬಲವಾದ ಸಾಮಾಜಿಕ ಭದ್ರತಾ ವ್ಯವಸ್ಥೆ ಇರುವ ಐಸ್‌ಲ್ಯಾಂಡ್ ಅಥವಾ ನ್ಯೂಜಿಲೆಂಡ್‌ಗೆ ವಲಸೆ ಹೋಗುವುದು ಹುವಾಂಗ್ ಅವರ ನಿವೃತ್ತಿಯ ಯೋಜನೆ. 'ಮಗ ಅಥವಾ ಮಗಳು ಹೆತ್ತವರ ಸೇವೆ ನಡೆಸುವ ಅವಧಿಯು ಸುಮಾರು 10 ವರ್ಷ ಎಂಬುದನ್ನು ಲೆಕ್ಕ ಹಾಕಿದ್ದೇನೆ. ಅದಕ್ಕಾಗಿ ಮಕ್ಕಳನ್ನು ಹೊಂದುವುದು ಫಲಪ್ರದವಲ್ಲ' ಎಂದು ಹುವಾಂಗ್ ಹೇಳುತ್ತಾರೆ.

ಮಗುವೊಂದನ್ನು ಬೆಳೆಸುವುದು ಭಾರಿ ವೆಚ್ಚದಾಯಕ ಮತ್ತು ಪ್ರತಿಫಲ ಅಲ್ಪ. ಒಂದು ಮಗುವನ್ನು ಹೊಂದುವುದು ಭಾರಿ ತ್ರಾಸದಾಯಕ ಎಂಬುದು ಹುವಾಂಗ್ ಅವರ ಅಭಿಪ್ರಾಯ.

ದಿ ನ್ಯೂಯಾರ್ಕ್ ಟೈಮ್ಸ್

ಚುರುಮುರಿ

ಶತಕದ ಓಟ

• ಸುಮಂಗಲಾ

'ಮೊದಲು 'ಪಿ' ಶತಕ ಬಾರಿಸಿದರೆ, ನಾನೇನು ಕಡಿಮೆ ಎಂಬಂತೆ ಆಟವಾಡಿದ 'ಡಿ'ಯಿಂದ ಇದೀಗ ಒಂದು ಅದ್ಭುತ ಕೈಚಳಕದ ಶತಕ, ಇಬ್ಬರ ಜೊತೆಯಾಟದಲ್ಲಿ ಶತಕದ ನಂತರ ಫೋರ್ ಯಾರು ಬಾರಿಸುವವರೆಂದು ಪ್ರೇಕ್ಷಕರು ಕಾಯುತ್ತಿದ್ದಾರೆ... ಇವರಿಗೆ ಸಡ್ಡು ಹೊಡೆಯುವಂತೆ 'ಎ' ತಂಡದ ಎಲ್ಲ ಸದಸ್ಯರೂ ದ್ವಿಶತಕದತ್ತ ಮುನ್ನಡೆದಿದ್ದಾರೆ. ಎಲ್ಲೆಡೆ ಶತಕದ ಸಿಡಿತ... ಪ್ರಗತಿಯತ್ತ ದಾಪುಗಾಲು' ಬೆಕ್ಕಣ್ಣ ಭಲೇ ಖುಷಿಯಿಂದ ಕ್ರಿಕೆಟ್ ಕಾಮೆಂಟರಿ ವದರುತ್ತಿತ್ತು.

'ಯಾರಲೇ ಅದು ಪಿ, ಡಿ, ಎ... ಈಗೆಲ್ಲಿ ಕ್ರಿಕೆಟ್ ಶುರುವಾಗೈತಿ' ಎಂದೆ.

'ಇದು ಪಿಆರ್ ಕ್ರಿಕೆಟ್, ಅಂದ್ರ ಪ್ರೈಸ್ ರೈಸ್, ಬೆಲೆಯೇರಿಕೆ ಕ್ರಿಕೆಟ್. ಪಿ ಅಂದ್ರ ಪೆಟ್ರೋಲ್, ಡಿ ಅಂದ್ರ ಡೀಸೆಲ್, ಎ ಅಂದ್ರೆ ಅಡುಗೆ ಎಣ್ಣೆ' ಮುದದಿಂದ ವಿವರಿಸಿತು.

'ಸಾಮಾನು ತಗಳೂ ಮುಂದ ನಮಗೆ ಕಣ್ಣೀರು ಕಪಾಳಕ್ಕೆ ಬರತೈತಿ, ನೀ ಎಷ್ಟ್ ಖುಷಿಯಾಗೀಯಲ್ಲ. ಪೆಟ್ರೋಲು, ಡೀಸೆಲು ಇಷ್ಟು ತುಟ್ಟಿಯಾದ್ರ ಮಂದಿ ಅಡ್ಡಾಡೂದು ಹೆಂಗ? ಬೋಂಡಾ, ಬಜ್ಜಿ ಬಿಡು, ವಗ್ಗರಣೆಗೆ ಎಣ್ಣೆ ಹಾಕೂದು ಬಿಡಬೇಕೇನು?'

ಬೆಕ್ಕಣ್ಣ ನಡುವೆಯೇ ಬಾಯಿ ಹಾಕಿ ವಾದಿಸತೊಡಗಿತು. 'ಡಾಕ್ಟ್ರು, ಸರ್ಕಾರ ಎಷ್ಟ್ ಬಡಕೊಂಡ್ರೂ ಮಂದಿ ಸುಮ್ಮುಮ್ನೆ ಅಡ್ಡಾಡತಿದ್ರು, ಹಿಂಗಾದ್ರ ಕೊರೊನಾ ಕಂಟ್ರೋಲು ಮಾಡೂದು ಹೆಂಗ? ಪೆಟ್ರೋಲು, ಡೀಸೆಲು ತುಟ್ಟಿ ಮಾಡಿದ್ರ, ಕೈಗೆ, ಕಾಲಿಗೆ ಬಿಸಿ ತಾಗತೈತಿ. ಅಡುಗೆ ಎಣ್ಣೆ ಕಡಿಮೆ ತಿಂದ್ರನೇ ವಳ್ಳೇದು. ಕೊಬ್ಬು ಹೃದಯಕ್ಕೆ ವಳ್ಳೇದಲ್ಲ ಅಂತ ಡಾಕ್ಟ್ರು ಹೇಳತಾರ'.

'ಬ್ಯಾಳೆಕಾಳು ಬೆಲೆನೂ ಹೆಚ್ಚಾಗೈತಿ. ಅವನ್ನೂ ತಿನ್ನೂದು ಬಿಟ್ಟು ಬರೀ ಗಾಳಿ ಕುಡಕೊಂಡು ಬದುಕಬೇಕೇನಲೇ?'

'ಬ್ಯಾಳೆಕಾಳು ಬೆಳೆದ ರೈತರಿಗೆ, ಹೊಲದಾಗೆ ದುಡಿಯೋವ್ರಿಗೆ ಕೈತುಂಬ ರೊಕ್ಕ ಸಿಗತದಲ್ಲ. ತೆರಿಗೆ ರೊಕ್ಕ ದೇಶಕ್ಕೆ ಹೋಗತೈತಿ, ಅಷ್ಟರ ರಾಷ್ಟ್ರಭಕ್ತಿ ಬ್ಯಾಡೇನು?'

'ಸರಿ, ಹಂಗಾರೆ ಈ ಸಲ ಕರೆಂಟು ಬಿಲ್ ನೀ ಕಟ್ಟು' ಎಂದು ಬಿಲ್ ಕೈಗಿಟ್ಟೆ.

ಬಿಲ್ ಮುಟ್ಟಿದ್ದೇ ಶಾಕ್ ಹೊಡೆಸಿಕೊಂಡು ತೆಪ್ಪಗಾಯಿತು ಬೆಕ್ಕಣ್ಣ!

ಚರ್ಚೆ

ಪರೀಕ್ಷೆ ವಿಧಾನದ 'ಮರುಪರೀಕ್ಷೆ'

ಶಾಲೆಗೂ ಕೋಚಿಂಗ್ ಸೆಂಟರಿಗೂ ವ್ಯತ್ಯಾಸವೇ ಇಲ್ಲದಂತೆ ಆಗಿರುವ ಪರಿಸ್ಥಿತಿ ನಿರ್ಮಾಣವಾಗಿರುವುದಕ್ಕೆ ಪರೀಕ್ಷೆಗಳೇ ಮುಖ್ಯ ಕಾರಣ

• ಉದಯ ಗಾಂವಕಾರ

ಕೋವಿಡ್- 19ರ ಮೊದಲ ಅಲೆ ಮತ್ತು ಎರಡನೇ ಅಲೆಯಿಂದಾಗಿ ಬಹಳಷ್ಟು ಶೈಕ್ಷಣಿಕ ದಿನಗಳು ನಷ್ಟವಾಗಿವೆ. ವಿಡಿಯೊ ಪಾಠಗಳು, ವರ್ಚುವಲ್ ಕ್ಲಾಸುಗಳು ಅಂತೆಲ್ಲ ಏಕಮುಖದ ಮತ್ತು ಎಲ್ಲರನ್ನೂ ತಲುಪದ ವಿಧಾನಗಳನ್ನು ಬೆಳಕಿಂಡಿಗಳೆಂದು ಭಾವಿಸಿ ಇನ್ನಷ್ಟು ನಷ್ಟ ಅನುಭವಿಸಿದೆವು. ಕಲಿಕೆಯ ಹೊಸ ದಾರಿಗಳನ್ನು ಹುಡುಕಲು ಈ 'ಬೆಳಕಿಂಡಿ'ಗಳೇ ತಡೆಯಾದವು.

ಈ ನಡುವೆ ಸಿಬಿಎಸ್‌ಇ ಪಠ್ಯಕ್ರಮದ ಹತ್ತನೇ ತರಗತಿ ಪರೀಕ್ಷೆ ರದ್ದುಗೊಳಿಸಲಾಗಿದೆ. ರಾಜ್ಯ ಪಠ್ಯಕ್ರಮದಲ್ಲೂ ಒಂಬತ್ತನೇ ತರಗತಿಯವರೆಗಿನ ವಿದ್ಯಾರ್ಥಿಗಳು ಮುಂದಿನ ತರಗತಿಗೆ ಉತ್ತೀರ್ಣಗೊಂಡಿದ್ದಾರೆ. ಕೋವಿಡ್ ತಂದೊಡ್ಡಿರುವ ಆರ್ಥಿಕ ಮತ್ತು ಆರೋಗ್ಯ ಬಿಕ್ಕಟ್ಟಿನಿಂದಾಗಿ ಎಸ್‌ಎಸ್‌ಎಲ್‌ಸಿ ಮಕ್ಕಳೂ ಪರೀಕ್ಷೆ ಕುರಿತು ಯೋಚಿಸುವ ಸ್ಥಿತಿಯಲ್ಲಿ ಇಲ್ಲ. ಪರೀಕ್ಷೆಯನ್ನು ಮುಂದೂಡಿದರೆ ಸಮಸ್ಯೆಯೂ ಮುಂದೂಡಲ್ಪಡುತ್ತದೆ, ಪರಿಹಾರವಾಗುವುದಿಲ್ಲ. ನೆಟ್‌ವರ್ಕಿಲ್ಲ, ಸ್ಮಾರ್ಟ್‌ಫೋನ್ ಇಲ್ಲ, ಡೇಟಾಪ್ಯಾಕ್ ಇಲ್ಲ... ಹತ್ತಾರು ಇಲ್ಲಗಳ ನಡುವೆ ಈ ಮಕ್ಕಳನ್ನು ವರ್ಚುವಲ್ ಕ್ಲಾಸ್‌ಗೆ, ಹೊಸ ಕ್ರಮದ ಪರೀಕ್ಷೆಗೆ ಅಣಿಗೊಳಿಸಬೇಕಾದ ಸ್ಥಿತಿ ಅನಿವಾರ್ಯದ್ದಲ್ಲ. ಪರೀಕ್ಷೆ ನಡೆದಿದೆಯೋ ಇಲ್ಲವೋ ಎಂಬಲ್ಲಿಂದ ಕಲಿಕೆಯ ಅನುಭವಗಳನ್ನು ಒದಗಿಸಲಾಗಿದೆಯೋ ಇಲ್ಲವೋ ಎಂಬಲ್ಲಿಗೆ ಚರ್ಚೆಯ ಮಗ್ಗುಲು ಬದಲಾಯಿಸಲು ಇದು ಸಕಾಲ. 1938ರ ಜಾಕಿರ್ ಹುಸೇನ್ ಸಮಿತಿಯೇ ಪರೀಕ್ಷೆಗಳನ್ನು ಭಾರತೀಯ ಶಿಕ್ಷಣ ವ್ಯವಸ್ಥೆಯ ಶಾಪವೆಂದು ಕರೆದಿತ್ತು. ಪರೀಕ್ಷೆಗಳಿಗೆ ಅವಶ್ಯಕತೆಗಿಂತ ಹೆಚ್ಚು ಬೆಲೆ ನೀಡುತ್ತಿರುವುದರಿಂದಾಗಿ ಇಡೀ ವ್ಯವಸ್ಥೆ ಕೊಳೆಯುತ್ತಿದೆ ಎಂದು ಆರೋಪಿಸಿತ್ತು.

ಕಲಿಕೆಯನ್ನು ಖಾತರಿಗೊಳಿಸಲು ಪರಿಣಾಮಕಾರಿಯಾದ ಯಾವುದೇ ಪ್ರಯತ್ನಗಳು ನಡೆಯದಿದ್ದರೂ ಪರೀಕ್ಷೆಗಳು ಬೇಕು ಎಂಬ ಪರಿಸರದಲ್ಲಿ ನಾವಿದ್ದೇವೆ. ಆದ್ದರಿಂದಲೇ, ಕೋವಿಡ್ ನಡುವೆಯೂ ಪರೀಕ್ಷೆ ನಡೆಸಿದರೆ ಮೆಚ್ಚುಗೆ ದೊರೆಯುತ್ತದೆ. ಪರೀಕ್ಷೆ ನಡೆಸದೆ ಮುಂದಿನ ತರಗತಿಗೆ ಕಳುಹಿಸಿದರೆ ಮಕ್ಕಳ ಭವಿಷ್ಯವನ್ನು ಹಾಳುಮಾಡಲಾಗಿದೆ ಎಂಬ ಟೀಕೆಗೆ ಗುರಿಯಾಗಬೇಕಾಗುತ್ತದೆ. ಎಲ್ಲರೂ ಉತ್ತೀರ್ಣರಾದರೆ, ಜಾಣರಿಗೆ ಅನ್ಯಾಯವೆಂತಲೂ ಪರೀಕ್ಷೆಯಿಲ್ಲದೆ ಉತ್ತೀರ್ಣರಾಗುವುದು ಅನೈತಿಕವೆಂತಲೂ ಅನೇಕರು ಅಭಿಪ್ರಾಯಪಡುತ್ತಾರೆ. ಕಲಿಯುವುದು ಪರೀಕ್ಷೆಗಾಗಿ ಎಂಬ ಸಾಮಾನ್ಯ ನಂಬಿಕೆಯಿಂದ ಸೃಷ್ಟಿಯಾದ ಯೋಚನೆಗಳಿವು. ಇದರಿಂದ ಕಲಿಯುವ ಕ್ರಿಯೆಗೆ ಮಹತ್ವವೇ ಇಲ್ಲದಂತಾಗಿದೆ.

ಪರೀಕ್ಷೆಗಳನ್ನು ಪಳಗಿಸಿ ಕಲಿಕೆಯ ದಾರಿಗೆ ಅವುಗಳನ್ನು ತರಲು ಸಾಧ್ಯವಾಗದಿರುವುದರ ಹಿಂದೆ ಸಂಕೀರ್ಣವಾದ ಕಾರಣಗಳಿವೆ. ಜನಾಭಿಪ್ರಾಯವನ್ನು ರೂಪಿಸುವಲ್ಲಿ ಪ್ರಭಾವಿಯಾಗಿರುವ ಹಿತಾಸಕ್ತಿಗಳು ಇದರ ಹಿಂದೆ ಕೆಲಸ ಮಾಡುತ್ತವೆ. ಸಂಕಲನಾತ್ಮಕವಾದ ಬೋರ್ಡ್ ಪರೀಕ್ಷೆಗಳು ಅರ್ಥಪೂರ್ಣ ಕಲಿಕೆಯನ್ನು ಬೆಂಬಲಿಸುವುದಿಲ್ಲ. ಬದಲಾಗಿ, ಪುನರಾವರ್ತನೆ, ಸರಣಿ ಪರೀಕ್ಷೆಗಳ ಒತ್ತಡ ಮತ್ತಿತ್ಯಾದಿ ಮಕ್ಕಳ ಕಲಿಕೆಯ ಸಮಯವನ್ನು ವಿವೇಚನೆಯಿಲ್ಲದೆ ಹಾಳುಮಾಡುತ್ತವೆ. ಶಾಲೆಗೂ ಕೋಚಿಂಗ್ ಸೆಂಟರಿಗೂ ವ್ಯತ್ಯಾಸವೇ ಇಲ್ಲದಂತಾಗಿರಲು ಈ ಪರೀಕ್ಷೆಗಳೇ ಕಾರಣ. ರಾಷ್ಟ್ರ ನಿರ್ಮಾಣಕ್ಕಾಗಿ ಸ್ವತಂತ್ರ ಚಿಂತಕರನ್ನು ತಯಾರು ಮಾಡುವ ಯಾವ ಉದ್ದೇಶವೂ ಇಲ್ಲದ ಮತ್ತು ಶಾಲೆಗಳನ್ನು ಟ್ಯೂಷನ್ ಸೆಂಟರುಗಳನ್ನಾಗಿ ಮಾಡುವ ಬೋರ್ಡ್ ಪರೀಕ್ಷೆಗಳು ರದ್ದಾಗುವುದು ಶಿಕ್ಷಣ ಕ್ಷೇತ್ರಕ್ಕೆ ದೊರೆಯುವ ದೊಡ್ಡ ಕೊಡುಗೆಯೇ ಆಗಬಲ್ಲದು. ಕೋವಿಡ್-19 ಜಗತ್ತನ್ನು ಬೇರೆಯದೇ ದೃಷ್ಟಿಕೋನದಲ್ಲಿ ಗ್ರಹಿಸುವಂತೆ ಮಾಡಿರುವುದು ಸುಳ್ಳಲ್ಲ. ಪರೀಕ್ಷೆಗಳ ಕುರಿತಂತೆಯೂ ನಮ್ಮ ದೃಷ್ಟಿಕೋನ ಬದಲಾಗಬೇಕಿದೆ. ದೇಸಿ ದನಗಳನ್ನು ಬಾಲ ಹಿಡಿದು ಪಳಗಿಸಲಾಗದು, ಅವುಗಳ ಕೋಡು ಹಿಡಿಯಬೇಕು ಎನ್ನುತ್ತಾರೆ. ಭಾರತದಲ್ಲಿ ಶೈಕ್ಷಣಿಕ ಸುಧಾರಣೆ ತರುವ ಮೊದಲು ಬೋರ್ಡ್ ಪರೀಕ್ಷೆಗಳನ್ನು ರದ್ದುಪಡಿಸಬೇಕು.

2005ರ ಪಠ್ಯಕ್ರಮ ನೆಲೆಗಟ್ಟು ಮೌಲ್ಯಮಾಪನ ಸುಧಾರಣೆಗೆ ನೀಡಿದ ಸಲಹೆಗಳು ಮತ್ತು 2009ರ ಶಿಕ್ಷಣ ಹಕ್ಕು ಕಾಯ್ದೆ ನೀಡಿರುವ ಅವಕಾಶಗಳನ್ನು ಬಳಸಿಕೊಂಡು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ವಿಧಾನಗಳನ್ನು ಜಾರಿಗೆ ತರಲಾಯಿತಾದರೂ ಜನಾಭಿಪ್ರಾಯದ ಮೇಲೆ ಪ್ರಭಾವ ಬೀರುವ ಒಂದು ಗುಂಪಿನ ಒತ್ತಡಕ್ಕೆ ಮಣಿದು, ಆ ವ್ಯವಸ್ಥೆ ಬಣ್ಣ ಕಳೆದುಕೊಂಡು ಹಿಂದಕ್ಕೆ ಸರಿಯಿತು. ಕಲಿಕೆ– ಮೌಲ್ಯಮಾಪನಗಳನ್ನು ಸಮನ್ವಯಗೊಳಿಸುವ ಪರಿಣಾಮಕಾರಿ ದಾರಿಗಳು ಹೊಳೆಯದೆ ಹಳೆಯ ಮಾದರಿಗೇ ಅಂಟಿಕೊಂಡಿರಬೇಕಾಯಿತು. ಹಳೆಯದರಿಂದ ಹೊರಬರಲಾರದಷ್ಟು ಹೊರೆ ಇರುವುದೂ ಇದಕ್ಕೆ ಕಾರಣ ಇರಬಹುದು. ರಾಷ್ಟ್ರೀಯ ಶಿಕ್ಷಣ ನೀತಿಯು ಪರೀಕ್ಷಾ ಸುಧಾರಣೆ ಕುರಿತು ಮಾತನಾಡುತ್ತಿದೆಯಾದರೂ ಪರೀಕ್ಷೆ ನಡೆಸುವ ಸಲುವಾಗಿಯೇ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ ಸ್ಥಾಪಿಸಲು ಹೊರಟಿದೆ!

ಮುಂದಿನ ವರ್ಷದ ಹೊತ್ತಿಗೆ ಎಲ್ಲವೂ ತಿಳಿಯಾಗಬಹುದು. ಕಠಿಣವಾದ ಬದುಕು ಅಷ್ಟರಲ್ಲಿ ಈ ಮಕ್ಕಳನ್ನು ಯಾವೆಲ್ಲ ದಾರಿಗೆ ಕೊಂಡೊಯ್ಯಬಹುದೋ ಹೇಳತೀರದು. ಎಲ್ಲಿಗೇ ಹೋಗಲಿ, ಹತ್ತು- ಹನ್ನೆರಡು ವರ್ಷಗಳವರೆಗೆ ಶಾಲೆಯ ಮೆಟ್ಟಿಲುಗಳನ್ನು ಸವೆಸಿದ ಮಕ್ಕಳಿಗೆ ಎಸ್‌ಎಸ್‌ಎಲ್‌ಸಿ- ಪಿಯು ಪ್ರಮಾಣ ಪತ್ರವನ್ನು ಹಿಡಿದುಕೊಳ್ಳುವ ಯೋಗ್ಯತೆ ಇದೆ. ಇಲ್ಲವೆಂದು ಯಾರಾದರೂ ಭಾವಿಸಿದರೆ ಅದು ಒಟ್ಟೂ ಶೈಕ್ಷಣಿಕ ವ್ಯವಸ್ಥೆಯ ಮೌಲ್ಯಮಾಪನವಾಗುತ್ತದೆಯೇ ಹೊರತು ಮಕ್ಕಳದ್ದಲ್ಲ. ಅಷ್ಟಲ್ಲದೆ, ಮಗು ಶಾಲೆಯಲ್ಲಿ ಪಡೆದ ಕಲಿಕೆಯ ಅನುಭವಗಳನ್ನು ಸ್ಮರಣೆಕೇಂದ್ರಿತ ಪ್ರಶ್ನೆಗಳಿಂದ ಅಳೆಯಲಾಗದು ಕೂಡಾ.

ಬೋರ್ಡ್ ಪರೀಕ್ಷೆಗಳು ರದ್ದಾದ ಮೇಲಷ್ಟೇ ಕಲಿಕೆಯ ಜೊತೆಯಲ್ಲಿ ಸಾಗುವ ಮತ್ತು ಕಲಿಕೆಗಾಗಿಯೇ ನಡೆಯುವ ಮೌಲ್ಯಮಾಪನ ವಿಧಾನಗಳು ವಿಕಾಸಗೊಳ್ಳಲು ಸಾಧ್ಯ.

ವಾಚಕರ ವಾಣಿ

ಬ್ಯಾಂಕ್ ಪರೀಕ್ಷೆ: ಮನೋಬಲ ಹೆಚ್ಚಳ

ಐಬಿಪಿಎಸ್ ನಡೆಸುವ ಪ್ರಾದೇಶಿಕ, ಗ್ರಾಮೀಣ ಬ್ಯಾಂಕಿಂಗ್ (ಆರ್‌ಆರ್‌ಬಿ) ನೇಮಕಾತಿಯ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳೆರಡನ್ನೂ ಈ ಬಾರಿ ಕನ್ನಡದಲ್ಲಿ ಬರೆಯಲು ಅವಕಾಶ ದಕ್ಕಿರುವುದು ಸ್ವಾಗತಾರ್ಹ. ಇದರಿಂದ, ಕನ್ನಡ ಮಾಧ್ಯಮದಲ್ಲಿ ಓದಿದ ಗ್ರಾಮೀಣ ಪ್ರತಿಭೆಗಳಿಗೆ ಧೈರ್ಯವಾಗಿ ಬ್ಯಾಂಕ್ ಪರೀಕ್ಷೆ ಎದುರಿಸುವ ಮನೋಬಲ ಬರುತ್ತದೆ.

ಈ ಪರೀಕ್ಷೆಗೆ ಸಂಬಂಧಪಟ್ಟ ಪಠ್ಯಪುಸ್ತಕಗಳು ಅಭ್ಯರ್ಥಿಗಳ ಕೈ ಸೇರುವಂತಾಗಬೇಕು. ಸಂಬಂಧಪಟ್ಟ ಆನ್‌ಲೈನ್ ತರಗತಿಗಳು ನಡೆದರೆ ಅನುಕೂಲವಾಗುತ್ತದೆ. ಹೀಗೆ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳನ್ನೂ ಕನ್ನಡದಲ್ಲಿ ನಡೆಸಲು ಮುಂದಾದರೆ ಗ್ರಾಮೀಣ ವಿದ್ಯಾರ್ಥಿಗಳೂ ಎಲ್ಲರಂತೆ ಎಲ್ಲ ಕ್ಷೇತ್ರಗಳಲ್ಲೂ ಸಮಾನ ನೆಲೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತದೆ.

ಎಂ.ಎಸ್.ಉಷಾ ಪ್ರಕಾಶ್, ಮೈಸೂರು

ಮಾತಿನಲ್ಲಿ ವ್ಯಂಗ್ಯ, ಚೇತೋಹಾರಿ ಹಾಸ್ಯಪ್ರಜ್ಞೆ

ಡಾ. ಸಿದ್ಧಲಿಂಗಯ್ಯ ಅತ್ಯಂತ ವೈವಿಧ್ಯಮಯ ಬದುಕನ್ನು ಅನುಭವಿಸಿದವರು. ಕಳೆದ 48 ವರ್ಷಗಳ ಆತನ ಒಡನಾಟ ಸ್ಮರಣೀಯವಾದದ್ದು. ಅವರ 'ಹೊಲೆಮಾದಿಗರ ಹಾಡು' ಸಂಕಲನದ ಎಲ್ಲಾ ಕವಿತೆಗಳನ್ನು 'ಶೂದ್ರ' ಪತ್ರಿಕೆಯಲ್ಲಿ ಪ್ರಕಟಿಸಿದೆ. ಅದು ಪುಸ್ತಕ ರೂಪದಲ್ಲಿ ಬರುವುದಕ್ಕೆ ಸಂಬಂಧಿಸಿದಂತೆ ಕಿ.ರಂ.ನಾಗರಾಜ್ ಅವರ ಮನೆಯಲ್ಲಿ ನಡೆದ ಚರ್ಚೆಯನ್ನು ಮರೆಯಲು ಸಾಧ್ಯವಿಲ್ಲ. ಆ ಸಂಕಲನ ಕರ್ನಾಟಕದಲ್ಲಿ ದಲಿತ ಚಳವಳಿಗೆ ಸಂಬಂಧಿಸಿದಂತೆ ಪರೋಕ್ಷವಾಗಿ ಮ್ಯಾನಿಫೆಸ್ಟ್ ರೀತಿಯಲ್ಲಿ ಪ್ರಭಾವ ಬೀರಿತು. ಹಾಗೆಯೇ ಬೂಸಾ ಚಳವಳಿಗೆ ಸಂಬಂಧಿಸಿದಂತೆ ನಾವೆಲ್ಲರೂ ಒಟ್ಟಿಗೆ ಅದರಲ್ಲಿ ತೊಡಗಿಸಿಕೊಂಡಿದ್ದೆವು.

ತುರ್ತುಪರಿಸ್ಥಿತಿ ವಿರೋಧಿಸಿ ಕೊಚ್ಚಿನ್‌ನಲ್ಲಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಸಿದ್ಧಲಿಂಗಯ್ಯ, ಡಿ.ಆರ್. ನಾಗರಾಜ್ ಮತ್ತು ನಾನು ಭಾಗವಹಿಸಿದ್ದೆವು. ಅದರ ಉದ್ಘಾಟನೆ ನಮ್ಮ ಶಿವರಾಮ ಕಾರಂತರು, ಅಧ್ಯಕ್ಷತೆ ಇ.ಎಂ.ಎಸ್.ನಂಬೂದಿರಿಪಾಡ್ ಅವರದ್ದು. ಬಂಡಾಯ ಸಾಹಿತ್ಯ ಸಂಘಟನೆಯ ಹುಟ್ಟಿಗೆ ಸಂಬಂಧಿಸಿದ್ದೂ ಸೇರಿದಂತೆ ಎಷ್ಟೊಂದು ಶ್ರೀಮಂತ ನೆನಪುಗಳಿಗೆ ಸಿದ್ಧಲಿಂಗಯ್ಯ ಕಾರಣಕರ್ತರಾದರು. ಆತ ನಮ್ಮ ನಡುವಿನ ಅಪೂರ್ವ ಭಾಷಣಕಾರರಾಗಿದ್ದರು. ಅವರ ಮಾತಿನ ವ್ಯಂಗ್ಯ ಹಾಗೂ ಹಾಸ್ಯಪ್ರಜ್ಞೆ ಚೇತೋಹಾರಿಯಾಗಿರುತ್ತಿದ್ದವು. ಇಂತಹ ಮಹತ್ವದ ಗೆಳೆಯನಿಗೆ ಯಾವ ರೀತಿಯಲ್ಲಿ ಶ್ರದ್ಧಾಂಜಲಿ ಅರ್ಪಿಸುವುದು?

ಶೂದ್ರ ಶ್ರೀನಿವಾಸ್, ಬೆಂಗಳೂರು

ಕುರ್ಚಿ ರಕ್ಷಿಸುವ ಕೆಲಸವೇಕೆ?

ಮುಖ್ಯಮಂತ್ರಿ ಯಡಿಯೂರಪ್ಪನವರ ಕುರ್ಚಿ ಭದ್ರಪಡಿಸಲು ಸ್ವಾಮೀಜಿಗಳ ದಂಡೇ ನಿಂತಂತಿದೆ. ಆಧ್ಯಾತ್ಮಿಕ ಚಿಂತನೆ ಮಾಡಿಕೊಂಡು, ಭಕ್ತರನ್ನು ಆಶೀರ್ವದಿಸುತ್ತಾ, ಲೋಕಕಲ್ಯಾಣದ ಹಿತವನ್ನು ಬಯಸುವುದು ಸ್ವಾಮೀಜಿಗಳ ಧರ್ಮ. ಅದು ಬಿಟ್ಟು ಒಬ್ಬ ರಾಜಕೀಯ ನಾಯಕನ ಹಿಂದೆ ನಿಂತು ರಾಜಕೀಯ ರಕ್ಷಣೆ ಕೊಡುತ್ತಿರುವ ಸ್ವಾಮೀಜಿಗಳ ಚಿತ್ರವೊಂದನ್ನು ಇಂದು ದಿನಪತ್ರಿಕೆಯಲ್ಲಿ ನೋಡಿ ಮುಜುಗರವಾಯಿತು! ಈ ಬಗೆಯ ಬೆಳವಣಿಗೆ ರಾಜಕೀಯ, ಧಾರ್ಮಿಕ ಎರಡೂ ಕ್ಷೇತ್ರಗಳಿಗೆ ಒಳ್ಳೆಯದಲ್ಲ. ಇದು ನಿಲ್ಲಲಿ.

ವೀರೇಶ ಬಂಗಾರಶೆಟ್ಟರ, ಕುಷ್ಟಗಿ

ಬ್ರ್ಯಾಂಡ್ ಮೌಲ್ಯ ಕುಗ್ಗಿಸುವ ಕಳಾಹೀನ ಹೆಸರು

ಉದ್ಯಮಿ ಆನಂದ್ ಮಹೀಂದ್ರ ಅವರು ಬೆಂಗಳೂರಿಗೆ 'ಟೆಕ್‌ಹಳ್ಳಿ' ಎಂಬ ಹೊಸ ಹೆಸರನ್ನು ನೀಡಲು ಮುಂದಾಗಿರುವುದನ್ನು ಎಸ್.ಆರ್.ವಿಜಯಶಂಕರ ಅವರು ಸರಿಯಾಗಿಯೇ ಪ್ರಶ್ನಿಸಿದ್ದಾರೆ (ಸಂಗತ, ಜೂನ್ 12). 'ಸುಲಿದ ಬಾಳೆಯ ಹಣ್ಣಿನಂದದಿ... ಸುಲಭವಾಗಿರ್ಪ ಲಲಿತವಹ ಕನ್ನಡ' ಎಂದು ಕನ್ನಡ ಭಾಷೆಯನ್ನು ಕವಿ ಮಹಾಲಿಂಗರಂಗರು ವರ್ಣಿಸಿದ್ದರು. ಆನಂದ್ ಸೂಚಿಸಿರುವ 'ಟೆಕ್‌ಹಳ್ಳಿ' ಎಂಬ ಹೊಸ ಹೆಸರು ಸುಲಭವಾಗಿಯೂ ಇಲ್ಲ, ಸುಲಲಿತವಾಗಿಯೂ ಇಲ್ಲ, ಸುಂದರವಾಗಿಯೂ ಇಲ್ಲ. ಈ ಕಳಾಹೀನ ಹೆಸರು ಬೆಂಗಳೂರಿನ ಬ್ರ್ಯಾಂಡ್ ಮೌಲ್ಯವನ್ನು ಹೆಚ್ಚಿಸುವುದಕ್ಕಿಂತ ಹಾಳು ಮಾಡುವಂತಿದೆ. ಒಂದು ವೇಳೆ ನಿಜವಾಗಿಯೂ ಬೆಂಗಳೂರಿಗೆ ದೇಸಿ ಸಂಸ್ಕೃತಿಗೆ ಹೊಂದುವಂತಹ ಹೆಸರನ್ನು ಮರುನಾಮಕರಣ ಮಾಡಬೇಕಿದ್ದರೆ, ಆ ಹೆಸರು ಕನ್ನಡದ ಕವಿಗಳು, ಸಾಹಿತಿಗಳು ಸೂಚಿಸುವ ಹೆಸರಾಗಿರಬೇಕು. ಆಗ ಕನ್ನಡದ ಗೌರವ ಉಳಿಯುವುದರ ಜೊತೆಗೆ 'ಟೆಕ್‌ಹಳ್ಳಿ' ಎಂಬಂತಹ ವಿಚಿತ್ರ ಪದದ ಜನನವಾಗುವುದಿಲ್ಲ.

ಪೃಥ್ವಿರಾಜ್, ದಾವಣಗೆರೆ

ನಿಯಮ ತಿದ್ದುಪಡಿಯಾಗಲಿ, ಜೋಲಿ ತಪ್ಪಲಿ

ಕಾರವಾರ ತಾಲ್ಲೂಕಿನ ಮಚ್ಚಳ್ಳಿಗೆ ರಸ್ತೆ ಸಂಪರ್ಕ ಇಲ್ಲದ್ದರಿಂದ ಮಹಿಳೆಯೊಬ್ಬರನ್ನು ಚಿಕಿತ್ಸೆಗಾಗಿ ಏಳು ಕಿಲೊಮೀಟರ್ ದೂರ ನಾಲ್ಕು ಮಂದಿ ಹೊತ್ತು ಸಾಗಿಸಿದ ಚಿತ್ರ (ಪ್ರ.ವಾ., ಜೂನ್ 14) ಮನಕಲಕುವಂತಿದೆ. ಉತ್ತರ ಕನ್ನಡ ಜಿಲ್ಲೆ ನೈಸರ್ಗಿಕವಾಗಿ ಸಂಪದ್ಭರಿತವಾಗಿದ್ದರೂ ಜನರ ಜೀವನ ಮಾತ್ರ ಸುಂದರವಾಗಿಲ್ಲ. ಹೊಲ, ಗದ್ದೆ, ತೋಟ ಇರುವ ಸ್ಥಳದಲ್ಲಿಯೇ ಮನೆ ಕಟ್ಟಿ ವಾಸಿಸುವ ಜನರು ಸದಾ ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಜೋಲಿ, ಸಂಕ, ಹಳ್ಳ, ಹೊಳೆ, ಗುಡ್ಡ, ಕೊಂಪೆ, ಕಾಲುದಾರಿ ಜನರಿಗೆ ಚಿರಪರಿಚಿತ ಪದಗಳು. ಮಳೆಗಾಲದಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆ ಸರ್ವೇ ಸಾಮಾನ್ಯ.

ತುರ್ತು ಚಿಕಿತ್ಸೆಗಾಗಿ ಶಿರಸಿ- ಯಲ್ಲಾಪುರದವರು ಹುಬ್ಬಳ್ಳಿ– ಧಾರವಾಡ ಕಡೆಗೂ, ಕಾರವಾರ- ಅಂಕೋಲದವರು ಗೋವಾ ಕಡೆಗೂ, ಹೊನ್ನಾವರ- ಭಟ್ಕಳ ಭಾಗದವರು ಮಣಿಪಾಲದ ಕಡೆಗೂ, ಸಿದ್ದಾಪುರದವರು ಶಿವಮೊಗ್ಗ ಕಡೆಗೂ ಓಡುವ ಪರಿಸ್ಥಿತಿ ಇರುವ ಚತುರ್ಮುಖ ಸಂಪರ್ಕಿತರ ಜಿಲ್ಲೆ ನಮ್ಮದು. ಕರಾವಳಿ, ಮಲೆನಾಡು, ದಟ್ಟ ಕಾಡು, ಬಯಲುಸೀಮೆ ಹೀಗೆ ವಿವಿಧ ಭೌಗೋಳಿಕ ಹಿನ್ನೆಲೆಯಲ್ಲಿ ವಾಸಿಸುವ ಜನರಿಗೆ ಹಲವೆಡೆ ಇನ್ನೂ ಕನಿಷ್ಠ ನಾಗರಿಕ ಸೌಲಭ್ಯ ನೀಡಲು ಸಾಧ್ಯವಾಗದೇ ಜಿಲ್ಲಾಡಳಿತ ಕೈಕಟ್ಟಿ ಕುಳಿತಿದೆ. ಈ ಸಮಸ್ಯೆಗಳ ಪರಿಹಾರಕ್ಕೆ ತೊಡಕಾಗಿರುವುದು ಅರಣ್ಯ ಕಾಯ್ದೆ ಮತ್ತು ಪ್ರಜಾಪ್ರತಿನಿಧಿಗಳ ನಿರಾಸಕ್ತಿ. ಚುನಾವಣಾ ಸಮಯದಲ್ಲಿ ಮತದಾರರ ಮೇಲಿರುವ ಅಕ್ಕರೆ, ಚುನಾವಣೆಯ ನಂತರವೂ ಇದ್ದರೆ ಹೀಗಾಗುವುದಿಲ್ಲ. ಅರಣ್ಯ ರಕ್ಷಣೆಯ ನೆಪದಲ್ಲಿ ನಾಗರಿಕ ಸೌಲಭ್ಯ ನೀಡಲು ಅಡ್ಡಗಾಲು ಹಾಕುವ ನಿಯಮಗಳಿಗೆ ತಿದ್ದುಪಡಿ ಮಾಡುವ ಮೂಲಕ ಜನರಿಗೆ ನಾಗರಿಕ ಸೌಲಭ್ಯ ನೀಡಲಿ.

ಗಣಪತಿ ನಾಯ್ಕ್, ಕಾನಗೋಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಐಪಿಒ ಲಾಭ ನಷ್ಟದ ಲೆಕ್ಕಾಚಾರ

● ವಿಜಯ್ ಜೋಷಿ

2020ರಲ್ಲಿ ಜಾರಿಗೆ ಬಂದ ಮೊದಲ ಸುತ್ತಿನ ಲಾಕ್‌ಡೌನ್ ನಿರ್ಬಂಧಗಳು ಹಂತ ಹಂತವಾಗಿ ಸಡಿಲಿಕೆ ಆಗುತ್ತಿದ್ದವು. ಬೆಂಗಳೂರಿನ ಖಾಸಗಿ ಕಂಪನಿಯೊಂದರ ಉದ್ಯೋಗಿ ಶ್ರೇಯಸ್ ಅವರು ಮನೆಯಿಂದಲೇ ಕೆಲಸ ಮಾಡುತ್ತಿದ್ದರು. ಮೊಬೈಲ್ ಆ್ಯಪ್ ಹಾಗೂ ವೆಬ್‌ಸೈಟ್ ಮೂಲಕ ಡಿಸ್ಕೌಂಟ್ ಬ್ರೋಕರೇಜ್ ಸೇವೆ ನೀಡುವ ಹೆಸರಾಂತ ಕಂಪನಿಯೊಂದರ ಜಾಹೀರಾತು ಅವರ ಕಣ್ಣಿಗೆ ಬಿತ್ತು. 'ಮನೆಯಿಂದಲೇ ಡಿ–ಮ್ಯಾಟ್ ಖಾತೆ ತೆರೆಯಿರಿ' ಎಂಬುದು ಆ ಜಾಹೀರಾತಿನ ಒಕ್ಕಣೆ.

ಬ್ಯಾಂಕ್ ಖಾತೆಯ ವಿವರಗಳು, ಆಧಾರ್, ಪ್ಯಾನ್ ವಿವರಗಳನ್ನು ಸಲ್ಲಿಸಿ ಡಿ–ಮ್ಯಾಟ್ ಖಾತೆ ತೆರೆದ ಶ್ರೇಯಸ್ ಅವರು ಈಗ ಹೂಡಿಕೆಯನ್ನು ಒಂದು ಹವ್ಯಾಸವನ್ನಾಗಿ ಬೆಳೆಸಿಕೊಂಡಿದ್ದಾರೆ. ಸಾಫ್ಟ್‌ವೇರ್ ಜಗತ್ತಿನಲ್ಲಿ ಕಂಪ್ಯೂಟರ್‌ಗೆ ಅರ್ಥವಾಗುವ ಭಾಷೆಯಲ್ಲಿ ಮಾತನಾಡಿಕೊಂಡು ಇದ್ದ ಅವರು ಈಗ ಹೂಡಿಕೆ ಜಗತ್ತಿನ ಪರಿಭಾಷೆಯನ್ನು ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಅವರಿಗೆ ತಂತ್ರಜ್ಞಾನ ನೆರವಿಗೆ ಬಂದಿದೆ.

ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳು ಆರ್ಥಿಕವಾಗಿ ಎಷ್ಟು ಸದೃಢವಾಗಿವೆ, ಅವುಗಳಲ್ಲಿನ ಕಾರ್ಪೊರೇಟ್ ಆಡಳಿತ ಎಷ್ಟು ಉತ್ತಮವಾಗಿದೆ ಎಂಬುದನ್ನೆಲ್ಲ ತಂತ್ರಜ್ಞಾನದ ನೆರವಿನಿಂದಾಗಿ ಈಗ ಕುಳಿತ ಜಾಗದಿಂದಲೇ ನೋಡಬಹುದು. ಅಷ್ಟೇ ಅಲ್ಲ, ಐಪಿಒಗಳಲ್ಲಿ (ಕಂಪನಿಯ ಷೇರುಗಳನ್ನು ಆರಂಭಿಕ ಹಂತದಲ್ಲಿ ಸಾರ್ವಜನಿಕರು ಖರೀದಿಸುವುದು) ಹಣ ಹೂಡಿಕೆ ಮಾಡುವುದನ್ನು ಕೂಡ ತಂತ್ರಜ್ಞಾನವು ಈಗ ಬಹಳ ಸುಲಭಗೊಳಿಸಿದೆ.

ಈ ವಾರ ನಾಲ್ಕು ಐಪಿಒ: ಜೂನ್ 14ರಿಂದ 18ರ ನಡುವಿನ ಅವಧಿಯಲ್ಲಿ ಕನಿಷ್ಠ ನಾಲ್ಕು ಕಂಪನಿಗಳು ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತಗೊಳಿಸಲಿವೆ (ಇದನ್ನೇ ಷೇರುಪೇಟೆಯ ಪರಿಭಾಷೆಯಲ್ಲಿ ಐಪಿಒ ಎನ್ನಲಾಗುತ್ತದೆ). ತಂತ್ರಜ್ಞಾನವು ಐಪಿಒಗೆ ಅರ್ಜಿ ಸಲ್ಲಿಸುವುದನ್ನು ಕೂಡ ಸರಳಗೊಳಿಸಿ ಬಹಳ ಕಾಲ ಸಂದಿದೆ.

'ಡಿ–ಮ್ಯಾಟ್ ಖಾತೆ ತೆರೆಯುವವರ ಸಂಖ್ಯೆ, ಈಕ್ವಿಟಿಗಳಲ್ಲಿ ಹೂಡಿಕೆ ಮಾಡುವವರ ಸಂಖ್ಯೆ ಈಚಿನ ದಿನಗಳಲ್ಲಿ ಜಾಸ್ತಿ ಆಗಿದೆ. ಅದೇ ರೀತಿಯಲ್ಲಿ, ಈಚಿನ ದಿನಗಳಲ್ಲಿ ಐಪಿಒ ಮೂಲಕ ಹೂಡಿಕೆ ಮಾಡಲು ಮುಂದಾಗುವ ಸಣ್ಣ ಹೂಡಿಕೆದಾರರ ಸಂಖ್ಯೆ ಕೂಡ ಜಾಸ್ತಿ ಆಗಿದೆ. ಸ್ಮಾರ್ಟ್‌ಫೋನ್ ಮೂಲಕವೇ ಐಪಿಒಗೆ ಅರ್ಜಿ ಸಲ್ಲಿಸುವುದು ಸಾಧ್ಯವಾಗಿರುವುದು, ಅರ್ಜಿ ಸಲ್ಲಿಸುವುದರಿಂದ ಆರಂಭಿಸಿ ಷೇರು ತಮ್ಮ ಡಿ–ಮ್ಯಾಟ್ ಖಾತೆಗೆ ಬರುವವರೆಗಿನ ಎಲ್ಲ ಪ್ರಕ್ರಿಯೆಗಳೂ ಸುರಕ್ಷಿತ ಎಂದು ಸಣ್ಣ ಹೂಡಿಕೆದಾರರಿಗೆ ಅನಿಸಿರುವುದು ಅವರು ಹೆಚ್ಚಿನ ಸಂಖ್ಯೆಯಲ್ಲಿ ಹೂಡಿಕೆಗೆ ಮುಂದಾಗುತ್ತಿರುವುದಕ್ಕೆ ಒಂದು ಕಾರಣ' ಎಂದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಷೇರು ಬ್ರೋಕರೇಜ್ ಸೇವೆ ಒದಗಿಸುತ್ತಿರುವವರೊಬ್ಬರು ತಿಳಿಸಿದರು.

'ಹಿಂದೆ ಐಪಿಒ ಅರ್ಜಿ ಪಡೆದು, ಅದನ್ನು ಭರ್ತಿ ಮಾಡಿ, ಐಪಿಒಗೆ ಮುಂದಾಗಿರುವ ಕಂಪನಿಯ ಹೆಸರಿನಲ್ಲಿ ಡಿ.ಡಿ. ಪಡೆದು, ಅದನ್ನು ಕಂಪನಿಗೆ ಕಳುಹಿಸಬೇಕಿತ್ತು. ಇದು ಬಹುದೊಡ್ಡ ಪ್ರಕ್ರಿಯೆ ಆಗಿರುತ್ತಿತ್ತು. ಮನೆಯಿಂದಲೇ ಇವಿಷ್ಟನ್ನೂ ನಿಭಾಯಿಸಲು ಸಾಧ್ಯವೇ ಇರಲಿಲ್ಲ' ಎಂದು ಷೇರು ಬ್ರೋಕರೇಜ್ ಸೇವೆ ನೀಡುವ ರವಿ ಎಡಪತ್ಯ ನೆನಪಿಕೊಳ್ಳುತ್ತಾರೆ. ಆದರೆ ಈಗ, ಒಂದು ಸಾದಾಸೀದಾ ಸ್ಮಾರ್ಟ್‌ಫೋನ್, ಸುಮಾರಾಗಿರುವ ಇಂಟರ್ನೆಟ್ ಸಂಪರ್ಕ ಇದ್ದರೆ ಸಾಕು. ಎಲ್ಲಿಂದ ಬೇಕಿದ್ದರೂ ಐಪಿಒಗೆ ಅರ್ಜಿ ಸಲ್ಲಿಸಬಹುದು. ಐಪಿಒಗೆ ಅರ್ಜಿ ಸಲ್ಲಿಸುವುದನ್ನು ತಂತ್ರಜ್ಞಾನವು ಅತ್ಯಂತ ಸರಳಗೊಳಿಸಿದ್ದರೂ, ಹೂಡಿಕೆದಾರನಿಗೆ ಇರಬೇಕಾದ ಎಚ್ಚರಿಕೆಯ ವಿಚಾರದಲ್ಲಿ ಬದಲಾವಣೆ ಆಗಿಲ್ಲ ಎಂದು ವೈಯಕ್ತಿಕ ಹಣಕಾಸು ಸಲಹೆಗಾರರು ಹೇಳುತ್ತಾರೆ.

'ಐಪಿಒ ಮೂಲಕ ಹೂಡಿಕೆ ಮಾಡುವ ಸಂದರ್ಭದಲ್ಲಿ ಭಾರತದಲ್ಲಿನ ಐಪಿಒ ಇತಿಹಾಸವನ್ನು ಕೂಡ ಒಮ್ಮೆ ಅವಲೋಕಿಸಬಹುದು. ಆಗ ಒಂದಿಷ್ಟು ಹೊಳಹುಗಳು ಸಿಗುತ್ತವೆ. ಷೇರುಪೇಟೆಗೆ ಸೇರ್ಪಡೆಗೊಳ್ಳುವ ದಿನ (Listing day) ಪ್ರತಿ ಮೂರು ಕಂಪನಿಗಳ ಪೈಕಿ ಎರಡು ಕಂಪನಿಗಳು ಹೂಡಿಕೆದಾರರಿಗೆ ಲಾಭ ತಂದುಕೊಟ್ಟಿವೆ. 2017ನೆಯ ಇಸವಿಯ ಸುಮಾರಿನಲ್ಲಿ ದೇಶದ ಷೇರು ಮಾರುಕಟ್ಟೆಯಲ್ಲಿ ನೋಂದಾಯಿತ ಆದ 266 ಕಂಪನಿಗಳ ಪೈಕಿ 37 ಕಂಪನಿಗಳು ಮಾತ್ರ ಸೇರ್ಪಡೆಗೊಳ್ಳುವ ದಿನ (Listing Day) ಶೇಕಡ 20ಕ್ಕಿಂತ ಹೆಚ್ಚಿನ ಪ್ರಮಾಣದ ಲಾಭವನ್ನು ಹೂಡಿಕೆದಾರರಿಗೆ ತಂದುಕೊಟ್ಟಿವೆ. ಐಪಿಒ ಮೂಲಕ ಮಾಡುವ ಹೂಡಿಕೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಲಾಭ ಆಗುವ ಸಾಧ್ಯತೆಯೂ ಇದೆ, ಹೆಚ್ಚು ರಿಸ್ಕ್ ಕೂಡ ಇದೆ ಎಂಬುದನ್ನು ಹೂಡಿಕೆದಾರರು ಅರ್ಥ ಮಾಡಿಕೊಳ್ಳಬೇಕು' ಎಂದು ಹೇಳುತ್ತಾರೆ ಸುವಿಷನ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಬಿ.ಪಿ. ಪ್ರಮೋದ್.



ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್

ಐಪಿಒ ಹೂಡಿಕೆಗೆ ಮುನ್ನ...

- ನೀವು ಹೂಡಿಕೆ ಮಾಡಲು ಇಚ್ಛಿಸಿರುವ ಕಂಪನಿ ಬಗ್ಗೆ ಅಧ್ಯಯನ ಮಾಡಿ. ಕಂಪನಿಯ ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ, ಅವರ ಹಿನ್ನೆಲೆ ಏನು ಎಂಬುದನ್ನು ಗಮನಿಸಿಕೊಳ್ಳಿ. ಕಂಪನಿಯ ಶಕ್ತಿ, ದೌರ್ಬಲ್ಯಗಳು ಏನೇನು ಎಂಬುದನ್ನು ಗೊತ್ತು ಮಾಡಿಕೊಳ್ಳಿ. ಅಧ್ಯಯನ ಇಲ್ಲದೆ ಹಣ ಹೂಡಿಕೆ ಒಳ್ಳೆಯದಲ್ಲ
- ಕಂಪನಿಯ ಮೌಲ್ಯವನ್ನು ಸರಿಯಾಗಿ ಅಂದಾಜು ಮಾಡಿ. ಕಂಪನಿಯು ಪ್ರತಿ ಒಂದು ರೂಪಾಯಿ ಗಳಿಸಲು ಮಾಡುತ್ತಿರುವ ವೆಚ್ಚ ಎಷ್ಟು (PE Ration) ಎಷ್ಟು ಎಂಬುದನ್ನು ತಿಳಿದುಕೊಳ್ಳಿ
- ಬ್ರೋಕರೇಜ್ ಕಂಪನಿಗಳು ಐಪಿಒಗೆ ಹೋಗುತ್ತಿರುವ ಕಂಪನಿಯ ಬಗ್ಗೆ ಸಣ್ಣ ಟಿಪ್ಪಣಿಯನ್ನು ಹೂಡಿಕೆದಾರರಿಗೆ ಒದಗಿಸುವ ಕ್ರಮ ಇದೆ. ಆ ಟಿಪ್ಪಣಿಯನ್ನು ಸರಿಯಾಗಿ ಓದಿದರೆ ಕಂಪನಿಯ ಆರೋಗ್ಯದ ಬಗ್ಗೆ ಪ್ರಾಥಮಿಕ ಮಾಹಿತಿ ಸಿಗುತ್ತದೆ. ಆ ಮಾಹಿತಿಯು, ಆ ಕಂಪನಿಯಲ್ಲಿ ಹೂಡಿಕೆ ಮಾಡುವುದು ಎಷ್ಟರ ಮಟ್ಟಿಗೆ ಪ್ರಯೋಜನಕಾರಿ ಎಂಬುದನ್ನು ತಿಳಿಹೇಳುತ್ತದೆ

ಈಚೆಗಿನ ಕೆಲವು ಐಪಿಒಗಳು, ಮೊದಲ ದಿನ ಅವು ತಂದುಕೊಟ್ಟ ಲಾಭ

ಕಂಪನಿ	ನಿಗದಿಯಾಗಿದ್ದ ಷೇರುಮೌಲ್ಯ	ಮೊದಲ ದಿನದ ಲಾಭ
ಇಂಡಿಗೊ ಪೇಂಟ್ಸ್	₹1,490	110%
ಇಂಡಿಯನ್ ರೈಲ್ವೆ ಫೈನಾನ್ಸ್ ಕಾರ್ಪೊರೇಷನ್	₹26	-4.62%
ಹೋಮ್ ಫಸ್ಟ್ ಫೈನಾನ್ಸ್ ಕಂಪನಿ	₹518	0.87%
ಸ್ಟವ್ ಕ್ರಾಫ್ಟ್	₹385	13.88%
ನ್ಯುರೇಕಾ	₹400	61.44%
ರೈಲ್‌ಟೆಲ್ ಕಾರ್ಪೊರೇಷನ್	₹94	28.19%
ಹೆರಾನ್‌ಬಾ ಇಂಡಸ್ಟ್ರೀಸ್	₹627	31.74%
ಎಂಟಾರ್ ಟೆಕ್ನಾಲಜೀಸ್	₹575	87.62%
ಈಸಿ ಟ್ರಿಪ್ ಪ್ಲಾನರ್ಸ್	₹187	10.43%
ಅನುಪಮ್ ರಾಸಾಯನ್	₹555	-6.58%
ಲಕ್ಷ್ಮಿ ಆರ್ಗ್ಯಾನಿಕ್ ಇಂಡಸ್ಟ್ರೀಸ್	₹130	26.19%
ಕ್ರಾಫ್ಟ್ಸ್‌ಮ್ಯಾನ್ ಆಟೊಮೇಷನ್	₹1,490	-5.03%
ಕಲ್ಯಾಣ್ ಜ್ಯುವೆಲರ್ಸ್	₹87	-14.54%
ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್	₹305	-10.80%
ನಜಾರಾ ಟೆಕ್ನಾಲಜೀಸ್	₹1,101	44.60%
ಬಾರ್ಬಿಕ್ಯೂ ನೇಷನ್ ಹಾಸ್ಪಿಟಾಲಿಟಿ	₹500	17.56%
ಮ್ಯಾಕ್ರೊಟೆಕ್ ಡೆವಲಪರ್ಸ್	₹486	-5.77%

* ಇಲ್ಲಿರುವ ವಿವರಗಳು ಮಾಹಿತಿಗಾಗಿ ಮಾತ್ರ

ಐಪಿಒಗೆ ಸಜ್ಜಾಗಿರುವ ಕೆಲವು ಕಂಪನಿಗಳು

ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ), ಜೊಮ್ಯಾಟೊ, ಆದಿತ್ಯ ಬಿರ್ಲಾ ಸನ್‌ಲೈಫ್ ಆಸ್ತಿ ನಿರ್ವಹಣಾ ಕಂಪನಿ, ಗ್ಲೆನ್‌ಮಾರ್ಕ್ ಲೈಫ್ ಸೈನ್ಸಸ್, ಮಾಂಟೆಕಾರ್ಲೊ ಲಿಮಿಟೆಡ್, ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ಪುರಾಣಿಕ್ ಬಿಲ್ಡರ್ಸ್, ಆರೋಹಣ್ ಫೈನಾನ್ಶಿಯಲ್ ಸರ್ವಿಸಸ್

ಕಾಂಗ್ರೆಸ್‌ಗೆ ಬೇಕಿದೆ ಕಾಯಕಲ್ಪ: ಸಿಬಲ್

ಕಪಿಲ್ ಸಿಬಲ್

ನವದೆಹಲಿ (ಪಿಟಿಐ): 'ತಾನು ಜಡಪಕ್ಷವಲ್ಲ, ಬಿಜೆಪಿಗೆ ಪರ್ಯಾಯವಾದ ಪ್ರಬಲ ರಾಜಕೀಯ ಪಕ್ಷ ಎಂಬುದನ್ನು ಸಾಬೀತುಪಡಿಸಬೇಕಾದರೆ, ಸಂಘಟನಾತ್ಮಕವಾಗಿ ಎಲ್ಲಾ ಹಂತಗಳಲ್ಲೂ ಕಾಂಗ್ರೆಸ್ ವ್ಯಾಪಕವಾದ ಸುಧಾರಣೆಗಳನ್ನು ಮಾಡಬೇಕಾಗಿದೆ' ಎಂದು ಪಕ್ಷದ ಹಿರಿಯ ಮುಖಂಡ ಕಪಿಲ್ ಸಿಬಲ್ ಹೇಳಿದ್ದಾರೆ.

'ಭಾರತಕ್ಕೆ ಪುನರುತ್ಥಾನಗೊಂಡ ಕಾಂಗ್ರೆಸ್‌ನ ಅಗತ್ಯವಿದೆ. ಅದಕ್ಕೆ ಪಕ್ಷವು ಸಕ್ರಿಯವಾಗಿ, ಜಾಗೃತವಾಗಿ ಮತ್ತು ಅರ್ಥಪೂರ್ಣ ರೀತಿಯಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ. ಹಾಗಾಗಬೇಕಾದರೆ ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಪಕ್ಷದ ಸಂಘಟನೆಯಲ್ಲಿ ವ್ಯಾಪಕ ಸುಧಾರಣೆಗಳನ್ನು ಮಾಡಲೇಬೇಕು' ಎಂದು ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಕೋವಿಡ್ ನಿರ್ವಹಣೆಯಲ್ಲಿ ಸರ್ಕಾರ ವಿಫಲವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ದೇಶವನ್ನು ಮುನ್ನಡೆಸುವ ನೈತಿಕತೆಯನ್ನು ಕಳೆದುಕೊಂಡಿದ್ದಾರೆ ಎಂಬ ಭಾವನೆ ಜನರಲ್ಲಿ ಮೂಡಿದೆ. ಕಾಂಗ್ರೆಸ್ ಇದರ ಲಾಭ ಪಡೆಯಬಹುದು ಎಂದಿದ್ದಾರೆ.

ರಾಷ್ಟ್ರಹಿತದ ದೃಷ್ಟಿಯಿಂದ, ಪರ್ಯಾಯ ಮಾರ್ಗಸೂಚಿಯನ್ನು ರೂಪಿಸುವ ಹೊಣೆಯನ್ನು ಕಾಂಗ್ರೆಸ್ ಸ್ವತಃ ಹೊರಬೇಕಾಗಿದೆ ಎಂದು ಅವರು ಹೇಳಿದರು.

ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರು ಎನ್‌ಸಿಪಿ ಮುಖಂಡ ಶರದ್ ಪವಾರ್ ಅವರನ್ನು ಶನಿವಾರ ಭೇಟಿಯಾಗಿ ಚರ್ಚಿಸಿದ್ದಾರೆ. ದೇಶದಲ್ಲಿ ತೃತೀಯ ರಂಗ ರಚಿಸುವ ಬಗ್ಗೆ ಅವರು ಚರ್ಚಿಸಿದ್ದಾರೆ ಎಂಬ ಹಾಪೋಹಗಳೂ ಹುಟ್ಟಿಕೊಂಡಿವೆ. ಈ ಕಾರಣದಿಂದ ಸಿಬಲ್ ಹೇಳಿಕೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ.

ಪಕ್ಷದಲ್ಲಿ ರಚನಾತ್ಮಕ ಬದಲಾವಣೆಗಳಾಗಬೇಕು ಎಂದು ಒತ್ತಾಯಿಸಿ ಕಳೆದ ವರ್ಷ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದ ಪಕ್ಷದ ಹಿರಿಯ 23 ನಾಯಕರಲ್ಲಿ (ಜಿ–23 ಗುಂಪು) ಸಿಬಲ್ ಸಹ ಒಬ್ಬರಾಗಿದ್ದರು.

ವಾಸ್ತವ ಮನಗಾಣಲಿಲ್ಲ: ಕೋಮುವಾದವು ಅಲ್ಪಸಂಖ್ಯಾತರದ್ದಿರಲೀ ಬಹುಸಂಖ್ಯಾತರದ್ದಿರಲೀ ಎರಡೂ ದೇಶಕ್ಕೆ ಅಪಾಯಕಾರಿ ಎಂಬ ವಾಸ್ತವವನ್ನು ಮನಗಾಣುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಪಕ್ಷದ ಈಚಿನ ಸೋಲುಗಳಿಗೆ ಇದೇ ಕಾರಣ ಎಂದು ಸಿಬಲ್ ಹೇಳಿದ್ದಾರೆ.

2014ರ ಲೋಕಸಭಾ ಚುನಾವಣೆಯ ನಂತರ, ಸೋಲಿನ ಕಾರಣ ತಿಳಿಯಲು ಎ.ಕೆ. ಆ್ಯಂಟನಿ ನೇತೃತ್ವದ ಸಮಿತಿಯನ್ನು ರಚಿಸಲಾಗಿತ್ತು. ಕೋಮುವಾದ ವಿರುದ್ಧ ಜಾತ್ಯತೀತತೆ ಎಂಬ ಆಧಾರದಲ್ಲಿ ಚುನಾವಣೆಯನ್ನು ಎದುರಿಸಿದ್ದರಿಂದ, 'ಕಾಂಗ್ರೆಸ್ ಅಲ್ಪಸಂಖ್ಯಾತರ ಪರವಾದ ಪಕ್ಷ' ಎಂಬ ಭಾವನೆ ಮೂಡಿತು. ಇದರಿಂದಾಗಿ ಬಿಜೆಪಿಗೆ ಲಾಭವಾಗಿದೆ ಎಂದು ಸಮಿತಿ ತಿಳಿಸಿತ್ತು.

ಉತ್ತರ ಪ್ರದೇಶ: ಅತೃಪ್ತಿ ಶಮನಕ್ಕೆ ಬಿಜೆಪಿ ಕ್ರಮ

ಪ್ರಜಾವಾಣಿ ವಾರ್ತೆ

ಯೋಗಿ

ಲಖನೌ: ಮುಂದಿನ ವರ್ಷ ಉತ್ತರ ಪ್ರದೇಶ ವಿಧಾನ ಸಭೆಗೆ ನಡೆಯಲಿರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು, ಬಿಜೆಪಿಯು ಪಕ್ಷದೊಳಗಿನ ಅತೃಪ್ತರನ್ನು ಸಮಾಧಾನಪಡಿಸುವ ಕೆಲಸಕ್ಕೆ ಮುಂದಾಗಿದೆ.

ಅಸಮಾಧಾನಗೊಂಡಿರುವ ಶಾಸಕರು, ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರಿಗೆ ಪಕ್ಷದಲ್ಲಿ ಹುದ್ದೆಗಳನ್ನು ನೀಡುವುದು ಅಥವಾ ನಿಗಮ, ಮಂಡಳಿಗೆ ನೇಮಕ ಮಾಡುವ ಯೋಜನೆಯನ್ನು ಪಕ್ಷ ರೂಪಿಸುತ್ತಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ ಹಾಗೂ ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿಮಾಡಿದ ನಂತರ ಈ ಬೆಳವಣಿಗೆ ನಡೆಯುತ್ತಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಅಸಮಾಧಾನಗೊಂಡಿರುವ ನಾಯಕರನ್ನು ವಿವಿಧ ನಿಗಮ ಮಂಡಳಿಗಳಿಗೆ ನೇಮಕ ಮಾಡುವ ಸಾಧ್ಯತೆ ಇದೆ. ಇವುಗಳಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇವೆ. ಪಕ್ಷದ ಕಾರ್ಯಕರ್ತರಿಗೆ ಈ ಹುದ್ದೆಗಳನ್ನು ನೀಡುವ ಮೂಲಕ ಅವುಗಳನ್ನು ಭರ್ತಿಗೊಳಿಸಲು ಚಿಂತನೆ ನಡೆದಿದೆ ಎಂದು ಪಕ್ಷದ ಮುಖಂಡರೊಬ್ಬರು ಹೇಳಿದ್ದಾರೆ.

ಪಕ್ಷದ ಹುದ್ದೆಗಳಿಗೆ ನೇಮಕ ಮಾಡುವಾಗ ಜಾತಿ ಹಾಗೂ ಪ್ರಾದೇಶಿಕತೆಯನ್ನು ಗಮನದಲ್ಲಿಡಲಾಗುವುದು. ಇದು ಪಕ್ಷದಲ್ಲಿ ನಡೆಯುವ ಸಾಮಾನ್ಯ ಪ್ರಕ್ರಿಯೆ ಎಂದು ಅವರು ಹೇಳಿದ್ದಾರೆ.

ಆದರೆ, ಕೆಲವು ನಾಯಕರು ರಾಜ್ಯದ ಆಡಳಿತ ಹಾಗೂ ಆದಿತ್ಯನಾಥ ಅವರ ಕಾರ್ಯವೈಖರಿಯ ಬಗ್ಗೆ ಅಪಸ್ವರಗಳನ್ನೆತ್ತಿದ್ದು, ಅವರ ಕೋಪವನ್ನು ಶಮನಗೊಳಿಸುವ ಉದ್ದೇಶದಿಂದ ಈ ನೇಮಕಾತಿಗಳನ್ನು ಮಾಡಲಾಗುತ್ತಿದೆ. ಅತೃಪ್ತಿಯನ್ನು ಶಮನಗೊಳಿಸಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗೆ ಕೇಂದ್ರದ ನಾಯಕರು ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎರಡು ವಾರಗಳ ಹಿಂದೆ ಇಲ್ಲಿ ನಡೆದಿದ್ದ ಸಭೆಯಲ್ಲಿ, ಪಕ್ಷದ ಅನೇಕ ಶಾಸಕರು ಹಾಗೂ ಮುಖಂಡರು ಕೋವಿಡ್ ಎರಡನೇ ಅಲೆಯನ್ನು ಸರ್ಕಾರವು ನಿರ್ವಹಿಸಿದ ರೀತಿಗೆ ಅಸಮಾಧಾನ ವ್ಯಕ್ತಪಡಿಸಿದ್ದರಲ್ಲದೆ ಮುಖ್ಯಮಂತ್ರಿಯ ಬದಲಾವಣೆಗೂ ಬೇಡಿಕೆ ಇಟ್ಟಿದ್ದರು. ಮುಖ್ಯಮಂತ್ರಿಯ ಬದಲಾವಣೆಗೆ ಕೇಂದ್ರ ನಾಯಕತ್ವ ನಿರಾಕರಿಸಿದ್ದರೂ, ಸಂಪುಟ ಪುನಾರಚನೆ ಮಾಡಿ, ಅತೃಪ್ತರಿಗೆ ಸ್ಥಾನಗಳನ್ನು ನೀಡುವಂತೆ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಜಮ್ಮು ಮತ್ತು ಕಾಶ್ಮೀರದ ಆಡಳಿತವು ದಾಲ್ ಸರೋವರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ತೆರವು ಕಾರ್ಯಾಚರಣೆ ನಡೆಸುತ್ತಿದೆ. ರೋಹಿಂಗ್ಯಾ ಜಿಹಾದಿಗಳು ಅಕ್ರಮವಾಗಿ ಕಟ್ಟಿಕೊಂಡಿದ್ದ ಕಟ್ಟಡಗಳನ್ನು ನೆಲಸಮ ಮಾಡಲಾಗುತ್ತಿದೆ ಎಂಬ ಮಾಹಿತಿಯುಳ್ಳ ಪೋಸ್ಟರ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಅಕ್ರಮ ಕಟ್ಟಡ ನೆಲಸಮ ಮಾಡುತ್ತಿರುವ ದೃಶ್ಯಗಳನ್ನು ಹಲವು ಸುದ್ದಿವಾಹಿನಿಗಳು ಪ್ರಸಾರ ಮಾಡಿವೆ. ಕಟ್ಟಡ ಧ್ವಂಸ ಮಾಡದಂತೆ ಸ್ಥಳೀಯರು ಮನವಿ ಮಾಡುತ್ತಿರುವ ಚಿತ್ರಣ ಇಲ್ಲಿದೆ.



ರೋಹಿಂಗ್ಯಾ ಸಮುದಾಯದ ಕಟ್ಟಡಗಳು ನೆಲಸಮ?

ಜೂನ್ 5ರಂದು ವಿಡಿಯೊ ಅಪ್‌ಲೋಡ್ ಮಾಡಿರುವ ಜಮ್ಮು ಲಿಂಕ್ಸ್ ನ್ಯೂಸ್ ಯೂಟ್ಯೂಬ್ ಚಾನೆಲ್‌ನ ವರದಿ ಪ್ರಕಾರ, ದಾಲ್ ಸರೋವರ ಸಂರಕ್ಷಣಾ ಪ್ರಾಧಿಕಾರವು ಅಕ್ರಮ ಕಟ್ಟಡ ನೆಲಸಮ ಕಾರ್ಯ ನಡೆಸಿತು. ಕಾಶ್ಮೀರಿ ಅಬ್ಸರ್ವರ್ಸ್, ಕಾಶ್ಮೀರ್‌ಡಾಟ್‌ಕಾಮ್ ವಾಹಿನಿಗಳೂ ತೆರವು ಕಾರ್ಯಾಚರಣೆ ಮಾಹಿತಿ ನೀಡಿವೆ. ಆದರೆ ಎಲ್ಲಿಯೂ ರೋಹಿಂಗ್ಯಾ ಜಿಹಾದಿಗಳಿಗೆ ಸೇರಿದ ಕಟ್ಟಡಗಳನ್ನು ನೆಲಸಮ ಮಾಡಲಾಗಿದೆ ಎಂದು ಉಲ್ಲೇಖಿಸಿಲ್ಲ. ರೋಹಿಂಗ್ಯಾ ಜನರ ಕಟ್ಟಡ ತೆರವು ಮಾಡಲಾಗಿದೆ ಎಂಬ ಆರೋಪವನ್ನು ತೆರವು ಕಾರ್ಯಾಚರಣೆ ಅಧಿಕಾರಿ ಅಬ್ದುಲ್ ಅಜೀಜ್ ತಿರಸ್ಕರಿಸಿದ್ದಾರೆ ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ವರದಿ ಮಾಡಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮಾಂಗಲೀಕ ಆನೆಯ ದಾನ

ರಾಜ ಏನು ಬೇಕೋ ಬೇಡಿ ಎಂದು ಕೇಳಿದಾಗ ಒಬ್ಬ ಬ್ರಾಹ್ಮಣ ಮುಂದೆ ಬಂದು ಹೇಳಿದ, 'ಮಹಾರಾಜಾ, ನಾವು ಕಲಿಂಗದೇಶದ ಪ್ರಜೆಗಳು. ನಮ್ಮ ದೇಶದಲ್ಲಿ ಕಲ್ಪನಾತೀತವಾದ ಬರಗಾಲ ಬಂದಿದೆ. ಬದುಕು ಅಸಹನೀಯವಾಗಿದೆ. ನಮ್ಮ ರಾಜ ಏನೆಲ್ಲ ಧಾರ್ಮಿಕ ಕಾರ್ಯಗಳನ್ನು ಮಾಡಿದರೂ ಮಳೆಯಾಗಲಿಲ್ಲ. ನಮಗೆ ಜ್ಞಾನಿಗಳು ಹೇಳಿದಂತೆ ತಾವು ಎಲ್ಲಿ ಕಾಲಿಡುತ್ತೀರೋ ಅಲ್ಲಿ ಸಮೃದ್ಧತೆ ಬರುತ್ತದೆ. ತಾವು ಬರುವುದಾಗದಿದ್ದರೆ ತಮ್ಮ ಮಾಂಗಲೀಕ ಆನೆ ಬಂದರೂ ಮಳೆ ಬಂದು ದೇಶ ಸುಭಿಕ್ಷವಾಗುತ್ತದಂತೆ. ಅದಕ್ಕಾಗಿ ತಮ್ಮ ಆನೆಯನ್ನು ದಾನವಾಗಿ ಕೇಳಲು ಬಂದಿದ್ದೇವೆ'. ಒಂದು ಕ್ಷಣ ಬೋಧಿಸತ್ವ ವೆಸ್ಸಂತರ ಕಣ್ಣುಮುಚ್ಚಿ ಚಿಂತಿಸಿದ. ತಾನು ತನ್ನ ಹೃದಯವನ್ನೇ, ಇಡೀ ದೇಹವನ್ನೇ ಬೇಡಿದವರಿಗೆ ಕೊಡುತ್ತೇನೆಂದು ಮಹಾಪ್ರತಿಜ್ಞೆ ಮಾಡಿದವನು. ಇವರು ಕೇವಲ ಬಾಹ್ಯವಸ್ತುವನ್ನು ಕೇಳುತ್ತಿದ್ದಾರೆ. ಅವರ ಅಪೇಕ್ಷೆಯನ್ನು ಪೂರೈಸುತ್ತೇನೆ. ನಂತರ ಅವರಿಗೆ ವಚನವನ್ನು ನೀಡಿದ. 'ನಾನು ಈಗ ಸವಾರಿಮಾಡುತ್ತಿರುವ ಅಪರೂಪದ ಮಾಂಗಲೀಕ ಆನೆಯನ್ನು ಇವರಿಗೆ ಕೊಟ್ಟುಬಿಡುತ್ತಿದ್ದೇನೆ. ಇದು ಅತ್ಯಂತ ಶ್ರೇಷ್ಠವಾದ ಆನೆ. ಅದರ ನಾಲ್ಕು ಕಾಲುಗಳಲ್ಲಿ ನಾಲ್ಕು ಲಕ್ಷ ಬೆಲೆಬಾಳುವ ಆಭರಣಗಳಿವೆ. ಹೊಟ್ಟೆಯ ಕೆಳಗಿನ ರತ್ನಗಂಬಳಿಗೆ ಒಂದು ಲಕ್ಷ, ಆನೆಯ ಬೆನ್ನಿನ ಮೇಲೆ ಹರಡಿರುವ ಮುತ್ತು, ಮಣಿ ಹಾಗೂ ಚಿನ್ನದ ಜಾಲದ ಬೆಲೆ ಪ್ರತಿಯೊಂದಕ್ಕೆ ಮೂರು ಲಕ್ಷ. ಎರಡೂ ಕಿವಿಗಳಿಗೆ ಹಾಕಿರುವ ಗಂಟೆಗಳಿಗೆ ಎರಡು ಲಕ್ಷ. ಹಣೆಯ ಮೇಲಿನ ಆಭರಣಕ್ಕೆ ಒಂದು ಲಕ್ಷ. ಇದಲ್ಲದೆ ಕಿವಿಯ ಚೂಡಾಲಂಕಾರ, ದಂತಗಳ ಅಲಂಕಾರ, ಸೊಂಡಿಲಿಗೆ ಹಾಕಿದ ಆಭರಣಗಳು, ಹೀಗೆ ಆನೆಯ ಆಭರಣಗಳ ಬೆಲೆಯೇ ಇಪ್ಪತ್ತೆರಡು ಲಕ್ಷ. ಆನೆಯನ್ನು ಹತ್ತಲು ಬಳಸುವ ಮೆಟ್ಟಿಲು ಮತ್ತು ಆನೆಯ ಆಹಾರಕ್ಕೆ ಬಳಸುವ ಕಡಾಯಿ ಇವು ಕೂಡ ಲಕ್ಷ ಬೆಲೆಬಾಳುವಂಥವುಗಳು. ಈ ಆನೆಯೊಂದಿಗೆ ಅದರ ರಕ್ಷಣೆಗೆ ಮತ್ತು ಆರೈಕೆಗೆಂದು ಇರುವ ಐದು ಮಾವಟಿಗರು ಮತ್ತು ಐದು ನೂರು ಜನ ಸೇವಕರು ಇವರೆಲ್ಲರನ್ನು ದಾನವಾಗಿ ಕಲಿಂಗದೇಶಕ್ಕೆ ಕೊಡುತ್ತಿದ್ದೇನೆ' ಎಂದು ಘೋಷಣೆ ಮಾಡಿದ.

ಆನೆಯನ್ನು ದಾನವಾಗಿ ಕೊಟ್ಟ ಘೋಷಣೆಯಾದೊಡನೆ ಭೂಮಿ ನಡುಗಿತು, ಜನ ಗಲಾಟೆ ಮಾಡಿದರು. ನಗರದ ಎಲ್ಲ ಹಿರಿಯರು ಕ್ಷುಬ್ಧರಾದರು. ತಮ್ಮ ನಗರದ ಮಂಗಳದ ಸಂಕೇತವಾದ ಆನೆಯನ್ನು ಬೇರೆ ದೇಶಕ್ಕೆ ಕೊಟ್ಟಿದ್ದು ತಪ್ಪಾಯಿತು, ಇದರಿಂದ ದೇಶಕ್ಕೆ ಅನಿಷ್ಟ ಬರುವುದೆಂದು ಅವರು ಭೀತರಾದರು. ಅವರೆಲ್ಲ ಗುಂಪುಕಟ್ಟಿಕೊಂಡು ರಾಜನ ಬಳಿಗೆ ಬಂದರು. ಅದರಲ್ಲಿ ಸಮಾಜದ ಎಲ್ಲ ಸ್ತರದ ಜನರಿದ್ದರು. ಅವರು, 'ಪ್ರಭು, ದೇಶಕ್ಕೆ ದೊಡ್ಡ ಅನ್ಯಾಯವಾಗುತ್ತಿದೆ. ನಿಮ್ಮ ಪುತ್ರ ವೆಸ್ಸಂತರ ಬೇಡಿದವರಿಗೆ ಅನ್ನ, ವಸ್ತ್ರ, ಪಾನಗಳನ್ನು, ಧನಕನಕಗಳನ್ನು ದಾನ ಮಾಡಿದ್ದಲ್ಲಿ ಯಾರಿಗೂ ಅಭ್ಯಂತರವಿಲ್ಲ. ಆದರೆ ನಮ್ಮ ದೇಶದ ಮಂಗಲವಾದ, ರಾಜಪೂಜಿತವಾದ ಆನೆಯನ್ನು ಹೇಗೆ ದಾನ ಕೊಟ್ಟ? ಅದು ಮಹಾನ್ ಯುದ್ಧಗಳನ್ನು ಜಯಿಸಿದ, ಶತ್ರುಮರ್ದನ ಮಾಡುವ, ದೊಡ್ಡ ದಂತಗಳುಳ್ಳ, ಕೈಲಾಸಗಿರಿಯಂತೆ ಬೆಳ್ಳಗಿರುವ, ಮಹಾನ್ ಆನೆಯನ್ನು ದಾನ ಕೊಟ್ಟಿರುವುದು ಸರಿಯಲ್ಲ, ನೀವು ನಿಮ್ಮ ಸಿವಿ ರಾಜ್ಯದ ಜನತೆಯ ಮಾತುಗಳನ್ನು ಕೇಳದಿದ್ದರೆ, ನಾಗರಿಕರು ತಮ್ಮನ್ನು ಮತ್ತು ತಮ್ಮ ಪುತ್ರನನ್ನು ಅಧಿಕಾರದಿಂದ ಕೆಳಗಿಳಿಸಿ ವಶಪಡಿಸಿಕೊಳ್ಳುತ್ತಾರೆ' ಎಂದು ಎಚ್ಚರಿಸಿದರು. ರಾಜನಿಗೆ ಇದೊಂದು ಇಕ್ಕಟ್ಟಿನ ಪರಿಸ್ಥಿತಿಯಾಯಿತು. ❖

ದಿನ ಭವಿಷ್ಯ

ಸೋಮವಾರ ಜೂನ್ 14, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮೃಗಶಿರ ಚತುರ್ಥೀ ಗಂ. 33-6 (ರಾ. 7-16) ಸೋಮವಾರ ನಿತ್ಯ ನಕ್ಷತ್ರ ಪುಷ್ಯ ಗಂ. 30-11 (ಸಾ. 6-6) ಧ್ರುವ ನಾಮ ಯೋಗ ಗಂ. 4-37 ವಣಿಜ ಕರಣ ಗಂ. 2-34 ವಿಷಾಭಾವಃ ಅಮೃತ ಗಂ. 12-43 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 5-57 ಸೂರ್ಯಾಸ್ತ: 6-42 ಅದೃಷ್ಟ ಸಂಖ್ಯೆ 29

ಮೇಷ: ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವ ಸಾಧ್ಯತೆ. ನೌಕರಿಯಲ್ಲಿ ಉನ್ನತ ಸ್ಥಾನ ಅಥವಾ ಬದಲಾವಣೆ ಕಂಡುಬರುವುದು. ಆರ್ಥಿಕ ಅನುಕೂಲತೆ ಉತ್ತಮಗೊಳ್ಳುವುದು.

ವೃಷಭ: ಅನವಶ್ಯಕ ಖರ್ಚು ತಲೆದೋರಬಹುದು. ಬಂಧುಗಳ ಭೇಟಿಯ ಸಾಧ್ಯತೆ. ಉದ್ಯೋಗದಲ್ಲಿ ಹೆಚ್ಚಿನ ಒತ್ತಡ ಬಂದೊದಗಬಹುದು. ಆಹಾರದಲ್ಲಿನ ವ್ಯತ್ಯದಿಂದಾಗಿ ಅಜೀರ್ಣ ಸಂಬಂಧಿ ರೋಗಗಳು ಕಂಡುಬರಬಹುದು.

ಮಿಥುನ: ಬರಬೇಕಾದ ಹಣ ಹಿಂದಿರುಗಿ ಬರುವ ಸಾಧ್ಯತೆ. ಆರೋಗ್ಯದಲ್ಲಿ ಸುಧಾರಣೆ. ಸಂತಾನ ಭಾಗ್ಯ ಪ್ರಾಪ್ತಿ ಆಗುವ ಕಾಲ ಸನ್ನಿಹಿತವಾಗಿದೆ. ನಿಂತುಹೋದ ಯೋಜನೆಗಳು ಪುನರಾರಂಭಗೊಳ್ಳುವವು.

ಕರ್ಕಾಟಕ: ಅಪಹಾಸ್ಯಕ್ಕೆ ಗುರಿಯಾಗುವ ಸಾಧ್ಯತೆಯಿದ್ದು ಗಂಭೀರ ನಡವಳಿಕೆ ಅಗತ್ಯ. ಚಂಚಲತೆಯುಂಟಾಗಿ ದುಃಸ್ವಪ್ನಗಳು ಉಂಟಾಗಬಹುದು. ನಿರಾಶೆಗೊಳ್ಳುವ ಅವಶ್ಯಕತೆ ಇಲ್ಲ.

ಸಿಂಹ: ನೌಕರರು ಮತ್ತು ಸ್ವಂತ ಉದ್ಯೋಗಿಗಳು ತಪ್ಪುಗಳಿಗೆ ಅವಕಾಶವಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ವಾಸದ ಸ್ಥಾನ ಪಲ್ಲಟವಾಗುವ ಸಾಧ್ಯತೆ. ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಉತ್ತಮ ಸ್ಥಾನ ದೊರಕುವುದು.

ಕನ್ಯಾ: ಆರ್ಥಿಕ ಅನುಕೂಲ ನಿಮ್ಮನ್ನರಸಿ ಬರುವುದು. ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ವೆಚ್ಚವನ್ನೂ ಮಾಡುವಿರಿ. ನಿಮ್ಮ ಉತ್ತಮ ನಡವಳಿಕೆಯಿಂದಾಗಿ ಗೌರವಾದರಗಳು ಲಭ್ಯ.

ತುಲಾ: ಕಣ್ಣು ಅಥವಾ ತಲೆನೋವಿನಿಂದ ಬಳಲುವ ಸಾಧ್ಯತೆ. ಅತಿಯಾದ ವಾದವಿವಾದದಿಂದಾಗಿ ವೈರತ್ವ ಬರಬಹುದು. ಅಮೂಲ್ಯ ವಸ್ತುಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿದ್ದು ಜಾಗ್ರತೆ ವಹಿಸಿ.

ವೃಶ್ಚಿಕ: ನಿಮ್ಮ ಕೆಲಸಕಾರ್ಯಗಳು ಮಂದಗತಿಯಲ್ಲೂ ಪ್ರಗತಿಯನ್ನು ಕಾಣುವುದು. ಉದರ ಶೂಲೆ ಮುಂತಾದ ಉದರ ಸಂಬಂಧಿ ಸಣ್ಣಪುಟ್ಟ ತೊಂದರೆಗಳು ಕಂಡುಬರಬಹುದು.

ಧನು: ಸಂಕಷ್ಟಗಳು ಕಡಿಮೆಯಾಗಿ ಕೆಲಸ ಕಾರ್ಯಗಳು ಸುಗಮ ಚಾಲನೆ ಪಡೆದುಕೊಳ್ಳುವವು. ಅನಿರೀಕ್ಷಿತ ಅನವಶ್ಯಕ ಖರ್ಚು ಸಂಭವಿಸುವವು. ಆರೋಗ್ಯದಲ್ಲಿ ಸುಧಾರಣೆ. ಲಾಭದ ಹರಿವು ಕಂಡುಬರುವುದು.

ಮಕರ: ಆರ್ಥಿಕ ಉನ್ನತಿ ಕಂಡುಬರುವುದು. ಶತ್ರುಗಳ ವಿರುದ್ಧ ಜಯದ ಸವಾರಿ ಮಾಡುವ ಯೋಗ ಕೂಡಿದೆ. ಬಹುದಿನಗಳ ಸಮಸ್ಯೆಯಿಂದ ಪರಿಹಾರ ದೊರೆತು ಜೀವನದಲ್ಲಿ ನೆಮ್ಮದಿ.

ಕುಂಭ: ನಿಮ್ಮ ನಿರ್ಣಯಗಳು ಫಲ ನೀಡುವವು. ಆದಾಯದಲ್ಲಿ ಹೆಚ್ಚಳ ಕಂಡುಬಂದು ಪರಿಸ್ಥಿತಿ ಸುಧಾರಿಸುವುದು. ವಾಹನ ಖರೀದಿ ಭಾಗ್ಯ ನಿಮ್ಮದಾಗಲಿದೆ. ನಿಮ್ಮ ಪಾಲಿಗೆ ಉದ್ಯೋಗ ಕ್ಷೇತ್ರದಲ್ಲಿ ಗೌರವಾದರಗಳು.

ಮೀನ: ಹಿರಿಯರೊಂದಿಗೆ ವಿಧೇಯತೆಯಿಂದ ನಡೆದುಕೊಳ್ಳಿ. ವೃಥಾ ವೈಮನಸ್ಸು ಎದುರಾಗಬಹುದು. ಆರ್ಥಿಕ ವಿಷಯದಲ್ಲಿ ಯಥಾಸ್ಥಿತಿ ಮುಂದುವರೆದು, ಕೆಲಸ ಕಾರ್ಯಗಳಲ್ಲಿ ಉತ್ಸಾಹ ಮೂಡುವುದು.

ನಿಮ್ಮ ಜನ್ಮದಿನ 14-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ವಿವಾಹ ಸಂಬಂಧಗಳು ಕೂಡಿಬರಲಿದೆ. ವಿದೇಶ ಪ್ರವಾಸದ ಸವಿಯನ್ನು ಉಣ್ಣುವ ಸಾಧ್ಯತೆ ಕಂಡುಬರುತ್ತದೆ. ಮಕ್ಕಳ ಕಡೆಯಿಂದ ಗೌರವಾನ್ವಿತ ಸ್ಥಾನಮಾನಗಳು ಲಭ್ಯವಾಗುವವು. ಸಮಾಜದಲ್ಲಿನ ಘನತ ಗಾಂಭೀರ್ಯಗಳು ವೃದ್ಧಿಯಾಗುವ ಲಕ್ಷಣಗಳು ತೋರುತ್ತಿವೆ.

ಪದಬಂಧ 4627

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈ ರೂಪ ಬಲು ವಿರಳ! (4)
3.ನಾಪಿತನ ಬಳಿಯಿರುವವ ಹಳಬ (4)
5.ಅಧಿಕಕ್ಕೊಂದು ಪರ್ಯಾಯ ಪದ (3)
7.ಸೊಂಟಕ್ಕೆ ಸುತ್ತುವ ಪಂಜೆ (2)
8.ಒತ್ತುವ ಮುದ್ರೆ (2)
9.ಗುಗ್ಗುರಿಯನ್ನು ತಿನ್ನುವತ್ತಲೇ ಈ ಲಕ್ಷ್ಯ! (2)
10.ಮಕರ ಸಂಕ್ರಾಂತಿಯಿಂದ ಕರ್ಕಾಟಕ ಸಂಕ್ರಾಂತಿಯವರೆಗಿನ ಕಾಲ (5)
12.ಪ್ರತಿಜ್ಞೆಯೂ ಆಗಿರುವ ನುಡಿ (2)
13.ವರ ತಿರುಗಿದಾಗ ಕೇಳಿದ ದನಿ (2)
14.ಜಾಗರೂಕತೆಯಿಂದ ಹುಡುಕಿದ ಸ್ಥಳ (2)
15.ಪವಿತ್ರವಾದ ಮಣ್ಣು (3)
17.ಒಳಗಿನ ಅಭಿಪ್ರಾಯವಿದು (4)
18.ಸನ್ನಿಗೊಳಗಾದವನ ಎದುರು! (4)

ಮೇಲಿಂದ ಕೆಳಕ್ಕೆ
1.ಮುಖ ಪರದೆ (5)
2.ಪದ ಹೇಳಿ ಪಡೆದ ಡಿಗ್ರಿ! (3)
3.ಇದೇ ಯುಕ್ತವಾದ ವೇಳೆ (3)
4.ತರಿ ಹಿಡಿದಿರುವ ಚಲುವಾದ ಹೆಂಗಸು (4)
6.ಮತ್ತೆ ಮತ್ತೆ ಉಂಟಾಗುವುದು (5)
9.ಗುಡಾಣದಂತಿರುವವನ ಸ್ವಭಾವ! (2)
10.ಅರುಣೋದಯದ ಕಾಲ (2)
11.ಅವನ ಲೋಕವನ್ನು ನೋಡುವುದು (5)
12.ಪಾಲು ಹಿಡಿದಿರುವ ಹರಿದಾಸ! (4)
15.ಎಲ್ಲರೂ ದಂಗಾಗುವಂತೆ ನುಡಿಸಿದ ಚರ್ಮವಾದ್ಯ (3)
16.ಕೆಲವರಷ್ಟೇ ಮಾಡುವ ಕಾರ್ಯ (3)



4626ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಡವಿ 2.ಸಮೀಕ್ಷಕ 5.ಪ್ರಥಮಾ 6.ಕಟುಕ 8.ಸುಭಗ 10.ಆನಂದಾಶ್ರು 11.ರಸದಾಳಿ 12.ತಮಾಳ 14.ಕದಂಬ 16.ಲಾಲಸ 18.ಅವಧಾನಿ 19.ಖರೀದಿ

ಮೇಲಿಂದ ಕೆಳಕ್ಕೆ: 2.ವಿಪ್ರ 3.ಸಮಾರಂಭ 4.ಕ್ಷಣಿಕ 7.ಕದಳಿ 8.ಸುಶ್ರುತ 9.ಗರಳ 10.ಆಸ್ತಿಕ 13.ಮಾತುಲಾನಿ 15.ಬಡವ 17.ಸಖ

ಸುಡೊಕು 5013

		6		4		3		5
	3		5					
	9	2		3		7		1
2	1		9		3	6		
				1			5	3
3	8			5			7	
9		8						7
				9			3	
4		3			1	2		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5012 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

10ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ. ಗೋವಿಂದಮ್ಮ
W/o ಲೇಟ್ ಜಿ. ಮುನಿನಾರಾಯಣಪ್ಪ
ಅಸ್ತಂಗತ: 14.06.2011
ಕಾವಲ್ ಭೈರಸಂದ್ರ
ನಿಮ್ಮ ಆತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತಿರುವ
ಇಂತಿ: ಎಂ.ಎನ್. ಕುಟುಂಬದವರು

ಚಿರಸ್ಮರಣೆ



ಶ್ರೀ ಕೆ.ಚನ್ನಪ್ಪನವರು
ನಿಧನ: 14-06-1993
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು,
ತಾಮ್ರ ಪತ್ರ ಪ್ರಶಸ್ತಿ ಪುರಸ್ಕೃತರು,
ಸಂಪಂಗಿರಾಮ ಬಸ್ ಮಾಲೀಕರು
ಕಾಳೀಪಾಳ್ಯ, ಮಾಗಡಿ ತಾಲ್ಲೂಕು.
ಇವರ ಆತ್ಮಕ್ಕೆ ಚಿರಶಾಂತಿ ಕೋರುವ
ಕುಟುಂಬವರ್ಗದವರು ಫೋ: 9380096404

ವೈಕುಂಠ ಸಮಾರಾಧನೆ

ಶ್ರೀಮತಿ ಜಯಮ್ಮರವರು
(ದಿ. ಗಣಗಲು ಚೌಡಪ್ಪನವರ ಧರ್ಮಪತ್ನಿ)
ಆತ್ಮೀಯರೇ, ನಮ್ಮ ಪೂಜ್ಯ ಮಾತೃಶ್ರೀ ಶ್ರೀಮತಿ ಜಯಮ್ಮರವರು ತಾ. 06-06-2021ನೇ ಭಾನುವಾರ ಬೆಳಿಗ್ಗೆ 11.25ಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ತತ್ಸಂಬಂಧವಾದ ಕಾರ್ಯಗಳು ತಾ. 16-06-2021ನೇ ಬುಧವಾರ ಬೆಳಿಗ್ಗೆ 9:00 ಘಂಟೆಗೆ ಪುಣ್ಯಾಹ ಹಾಗೂ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹ ಹುಳಿಮಾವುನಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು ಶ್ರೀಮತಿ ಪ್ರೀತಿ ಮತ್ತು ಶ್ರೀ ಸಿ. ಲಕ್ಷ್ಮೀನಾರಾಯಣ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

'ಜಿ–7' ಶೃಂಗಸಭೆ: 100 ಕೋಟಿ ಡೋಸ್‌ಗಳ ಸರಬರಾಜಿಗೆ ವಾಗ್ದಾನ

ಬಡ ರಾಷ್ಟ್ರಗಳಿಗೆ ಲಸಿಕೆ ಪೂರೈಕೆಗೆ ಸಂಕಲ್ಪ

ಫಾಲ್‌ಮೌತ್ (ಇಂಗ್ಲೆಂಡ್) (ಎಪಿ): ಸಾಂಕ್ರಾಮಿಕ ರೋಗವಾದ ಕೋವಿಡ್ ಪಿಡುಗಿಗೆ ವಿಶ್ವದ ಬಡ ರಾಷ್ಟ್ರಗಳಿಗೆ ಲಸಿಕೆ ಪೂರೈಕೆ ಮತ್ತು ಜಾಗತಿಕ ತಾಪಮಾನ ವಿಷಯಕ್ಕೆ ಸಂಬಂಧಿಸಿದಂತೆ 'ಜಿ-7' ರಾಷ್ಟ್ರಗಳು ಬದ್ಧತೆ ಪ್ರದರ್ಶಿಸಿವೆ.

ಜಿ-7 ಶೃಂಗಸಭೆ ಭಾನುವಾರ ಮುಕ್ತಾಯವಾಗಿದ್ದು, ಅಮೆರಿಕ, ಬ್ರಿಟನ್, ಕೆನಡ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್ ದೇಶಗಳು ಈ ಕುರಿತು ವಾಗ್ದಾನಗಳ ಮೂಲಕ ಘೋಷಣೆ ಮಾಡಿವೆ.

ತುರ್ತಾಗಿ ಅಗತ್ಯವಿರುವ ಬಡ ಮತ್ತು ಮಧ್ಯಮ ದೇಶಗಳಿಗೆ ಕೋವಿಡ್ ಲಸಿಕೆಯನ್ನು ಹಂಚಿಕೊಳ್ಳುವುದಾಗಿ 'ಜಿ-7' ನಾಯಕರು ಹೇಳಿದ್ದಾರೆ. ಅಂದಾಜು 100 ಕೋಟಿ ಡೋಸ್‌ಗಳನ್ನು ಈ ಗುಂಪಿನ ರಾಷ್ಟ್ರಗಳು ಒದಗಿಸಲಿವೆ. ಈ ಪೈಕಿ ಶೇ 50ರಷ್ಟು ಅಮೆರಿಕ ಪೂರೈಸಲಿದ್ದು, ಬ್ರಿಟನ್ 10 ಕೋಟಿ ಡೋಸ್‌ಗಳನ್ನು ಒದಗಿಸಲಿದೆ ಎಂದು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ತಿಳಿಸಿದರು.

ಎಲ್ಲಾ ಜಿ -7 ದೇಶಗಳು 2050ರ ವೇಳೆಗೆ ನಿವ್ವಳ ಶೂನ್ಯ ಇಂಗಾಲದ ಹೊರಸೂಸುವಿಕೆಯ ಗುರಿ ತಲುಪುವುದಾಗಿ ಹೇಳಿವೆ.

ಕೋವಿಡ್ ಉಗಮ–ಚರ್ಚೆ: ಶೃಂಗಸಭೆಯಲ್ಲಿ ವಿಶ್ವವನ್ನು ಕಾಡುತ್ತಿರುವ ಕೋವಿಡ್ ಪಿಡುಗಿನ ಉಗಮದ ಕುರಿತ ಚರ್ಚೆ ನಡೆದಿದ್ದು, ಚೀನಾದ ವುಹಾನ್ ನಗರದ ವೈರಾಲಜಿ ಪ್ರಯೋಗಾಲಯದಲ್ಲಿ ನಡೆದಿರಬಹುದಾದ ಸೋರಿಕೆಯ ಬಗ್ಗೆ ವಿಚಾರ ಮಂಥನ ನಡೆಸಿದ್ದಾರೆ.

ವುಹಾನ್ ಲ್ಯಾಬ್‌ನಿಂದ ಸೋರಿಕೆಯಾಗಿ ಕೊರೊನಾ ವೈರಸ್ ಹುಟ್ಟಿಕೊಂಡಿರಬಹುದು ಎಂಬುದರ ಕುರಿತು ಸಮಗ್ರ ತನಿಖೆ ಆಗಬೇಕು ಎಂದು ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಡೊಮಿನಿಕ್ ರಾಬ್ ಆಗ್ರಹಿಸಿದ್ದಾರೆ. ಈ ಕುರಿತು ಇರುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಚೀನಾಕ್ಕೆ ಹೋಗಿ ಪರಿಶೀಲನೆ ನಡೆಸಬೇಕಾದ ಅಗತ್ಯವಿದೆ ಎಂದು ಅವರು 'ಸ್ಕೈ ನ್ಯೂಸ್'ಗೆ ಭಾನುವಾರ ಪ್ರತಿಕ್ರಿಯಿಸಿದ್ದಾರೆ.

ಬ್ರಿಟನ್‌ನ ಕೋರ್ನ್‌ವಾಲ್‌ನ ಕರ್ಬಿಸ್ ಬೇಯಲ್ಲಿ ನಡೆದ ಜಿ–7 ಶೃಂಗಸಭೆಯ ವೇಳೆ ಬ್ರಿಟಿಷ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಪತ್ನಿ ಕ್ಯಾರಿ ಜಾನ್ಸನ್, ಜರ್ಮನಿಯ ಛಾನ್ಸಲರ್ ಆಂಗೆಲಾ ಮಾರ್ಕೆಲ್ ಮತ್ತು ಅವರ ಪತಿ ಜೋಚಿಮ್ ಸವೂರ್ ಜತೆಗೆ ಫೋಟೊಗೆ ಪೋಸ್ ನೀಡಿದರು –ರಾಯಿಟರ್ಸ್ ಚಿತ್ರ

'ಜಿ–7' ರಾಷ್ಟ್ರಗಳಿಗೆ ಭಾರತ ಸಹಜ ಮಿತ್ರ: ಪ್ರಧಾನಿ

ನವದೆಹಲಿ (ಪಿಟಿಐ): ಸರ್ವಾಧಿಕಾರ, ಭಯೋತ್ಪಾದನೆ, ಹಿಂಸಾತ್ಮಕ ಉಗ್ರಗಾಮಿತ್ವ, ತಪ್ಪು ಮಾಹಿತಿ ಮತ್ತು ಆರ್ಥಿಕ ಬಲಾತ್ಕಾರವನ್ನು ಸಮರ್ಪಕವಾಗಿ ಎದುರಿಸುವಲ್ಲಿ ಹಾಗೂ ಮೌಲ್ಯಗಳ ರಕ್ಷಣೆ ವಿಚಾರದಲ್ಲಿ ಭಾರತವು 'ಜಿ-7' ರಾಷ್ಟ್ರಗಳಿಗೆ ಸಹಜ ಮಿತ್ರರಾಷ್ಟ್ರವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

'ಜಿ 7'ರ ಶೃಂಗಸಭೆಯಲ್ಲಿ ವರ್ಚುವಲ್ ಆಗಿ ನಡೆದ 'ಮುಕ್ತ ಸಮಾಜಗಳು ಮತ್ತು ಮುಕ್ತ ಆರ್ಥಿಕತೆಗಳು' ಕುರಿತು ಗೋಷ್ಠಿಯಲ್ಲಿ ಪ್ರಧಾನಿ ಅವರು ಮಾತನಾಡಿ, ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಬಗ್ಗೆ ಭಾರತದ ನಾಗರಿಕ ಬದ್ಧತೆಯನ್ನು ಎತ್ತಿ ತೋರಿಸಿದ್ದಾರೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಪ್ರಕಟಣೆಯಲ್ಲಿ ತಿಳಿಸಿದೆ.

ಕೋವಿಡ್ ಲಸಿಕೆಗಳ ಮೇಲಿನ ಪೇಟೆಂಟ್ ಮನ್ನಾಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ದಕ್ಷಿಣ ಆಫ್ರಿಕಾದ ಪ್ರಸ್ತಾವನೆಯ ಕುರಿತ ಮಾತುಕತೆಗೆ ಶೃಂಗಸಭೆಯಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸಣ್ಣ ಗುಂಪು'ಗಳ ನಿರ್ದೇಶನಗಳು ಈಗ ನಡೆಯಲ್ಲ'

ಬೀಜಿಂಗ್ (ಪಿಟಿಐ): ಜಾಗತಿಕ ನಿರ್ಧಾರಗಳನ್ನು 'ಸಣ್ಣ ಗುಂಪು' ದೇಶಗಳು ನಿರ್ದೇಶಿಸುತ್ತಿದ್ದ ದಿನಗಳು ಬಹಳ ಹಿಂದೆಯೇ ಕಳೆದು ಹೋಗಿವೆ ಎಂದು ಚೀನಾ 'ಜಿ–7' ರಾಷ್ಟ್ರಗಳನ್ನು ಟೀಕಿಸಿದೆ.

ಜಿ–7 ಶೃಂಗಸಭೆಯ ನಿರ್ಧಾರಗಳ ಬಗ್ಗೆ ಚೀನಾ ಸರ್ಕಾರ ನೇರವಾಗಿ ಪ್ರತಿಕ್ರಿಯಿಸದಿದ್ದರೂ ಲಂಡನ್‌ನಲ್ಲಿರುವ ಚೀನಾದ ರಾಯಭಾರ ಕಚೇರಿಯು, ಶೃಂಗಸಭೆಯಲ್ಲಿ ಚೀನಾ ವಿರುದ್ಧ ನಡೆದ ಚರ್ಚೆ, ನಿರ್ಧಾರಗಳನ್ನು ಟೀಕಿಸಿ ಪ್ರಕಟಣೆ ಹೊರಡಿಸಿದೆ.

ಜಗತ್ತಿನಲ್ಲಿ ಸದ್ಯ ಚಾಲ್ತಿಯಲ್ಲಿ ಇರುವುದು ಒಂದೇ ವ್ಯವಸ್ಥೆ. ಅದು ವಿಶ್ವಸಂಸ್ಥೆಯ ನೇತೃತ್ವದ ಅಂತರಾಷ್ಟ್ರೀಯ ವ್ಯವಸ್ಥೆ. ಅದು ಅಂತರರಾಷ್ಟ್ರೀಯ ಕಾನೂನಿನ ಆಧಾರದ ಮೇಲೆ ನಡೆಯುತ್ತದೆಯೇ ಹೊರತು, ಬೆರಳೆಣಿಕೆಯ ದೇಶಗಳು ಪ್ರತಿಪಾದಿಸುವ ವ್ಯವಸ್ಥೆ ಮತ್ತು ನಿರ್ಧಾರಗಳಿಂದ ಅಲ್ಲ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಅರುಣ್ ಸಿಂಗ್ ಭೇಟಿ ವೇಳೆ ಮೇಲುಗೈ ಸಾಧಿಸುವ ತವಕ

ಬಿಜೆಪಿಯಲ್ಲಿ ಇಬ್ಬಣಗಳ ಚಟುವಟಿಕೆ ಬಿರುಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಭೇಟಿ ನಿಗದಿಯಾಗುತ್ತಿದ್ದಂತೆಯೇ ರಾಜ್ಯ ಬಿಜೆಪಿಯಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪರ ಮತ್ತು ವಿರೋಧಿ ಬಣಗಳ ಚಟುವಟಿಕೆ ಮತ್ತಷ್ಟು ಬಿರುಸಾಗಿದೆ.

ಇದೇ 16 ರಂದು ಅರುಣ್ ಸಿಂಗ್ ಬೆಂಗಳೂರಿಗೆ ಭೇಟಿ ನೀಡುವುದು ಶನಿವಾರವಷ್ಟೇ ಅಧಿಕೃತಗೊಂಡಿತ್ತು. ಈ ಮಾಹಿತಿ ಹೊರಬೀಳುತ್ತಿದ್ದಂತೆ ಯಡಿಯೂರಪ್ಪ ಬೆಂಬಲಿಗರು ಮತ್ತು ವಿರೋಧಿ ಪಾಳೆಯದ ಪ್ರಮುಖರು ಅಹವಾಲುಗಳನ್ನು ಸಲ್ಲಿಸಲು ತೆರೆಮರೆಯಲ್ಲಿ ಕಸರತ್ತು ಆರಂಭಿಸಿದ್ದಾರೆ.

16 ರಂದು ಪಕ್ಷದ ಕಚೇರಿಯಲ್ಲಿ ಸಚಿವರ ಸಭೆ ನಡೆಸಲಿರುವ ಅರುಣ್ ಸಿಂಗ್, 17 ರಂದು ಶಾಸಕರ ಸಭೆ ಮತ್ತು ಜೂನ್ 18 ರಂದು ಪಕ್ಷದ ಪ್ರಮುಖರ ಸಮಿತಿ ಸಭೆ ನಡೆಸುವ ಸಾಧ್ಯತೆ ಇದೆ. ಈ ಎಲ್ಲ ಸಂದರ್ಭಗಳಲ್ಲಿ ನಾಯಕತ್ವ ಬದಲಾವಣೆಯ ವಿಚಾರವನ್ನು ಮುನ್ನೆಲೆಗೆ ತರಲು ಸಚಿವ ಸಿ.ಪಿ. ಯೋಗೇಶ್ವರ್, ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದ ಗುಂಪು ಸಿದ್ಧತೆ ನಡೆಸಿದೆ.

ದೆಹಲಿಯಲ್ಲಿರುವ ಶಾಸಕ ಅರವಿಂದ ಬೆಲ್ಲದ ಬೆಂಗಳೂರಿಗೆ ವಾಪಸಾದ ಬಳಿಕ ಈ ಪ್ರಕ್ರಿಯೆ ಮತ್ತಷ್ಟು ಚುರುಕಾಗಲಿದೆ ಎಂದು ಗೊತ್ತಾಗಿದೆ.ಪಕ್ಷ ಸಂಘಟನೆ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದ ಚರ್ಚೆಗೆ ಸಭೆಗಳನ್ನು ಸೀಮಿತಗೊಳಿಸುವ ಮೂಲಕ ಭಿನ್ನಮತೀಯರ ಗುಂಪಿನ ಪ್ರಯತ್ನವನ್ನು ವಿಫಲಗೊಳಿಸಲು ಯಡಿಯೂರಪ್ಪ ಬೆಂಬಲಿಗರು ಪ್ರತಿತಂತ್ರ ರೂಪಿಸುತ್ತಿದ್ದಾರೆ. ಇದಕ್ಕಾಗಿಯೇ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ನೇತೃತ್ವದಲ್ಲಿ ಶಾಸಕರ ಸಹಿ ಸಂಗ್ರಹ ಚಟುವಟಿಕೆಯೂ ಮುಂದುವರಿದಿದೆ.

ಶಾಸಕಾಂಗ ಪಕ್ಷದ ಸಭೆಗೆ ಒತ್ತಡ: ಎಲ್ಲ ಶಾಸಕರ ಅಹವಾಲು, ಅಭಿಪ್ರಾಯ ಆಲಿಸುವುದಕ್ಕಾಗಿ ಶಾಸಕಾಂಗ ಪಕ್ಷದ ಸಭೆ ಕರೆಯುವಂತೆ ಒಂದು ಗುಂಪು ಒತ್ತಡ ಹೇರುತ್ತಿದೆ. ಆದರೆ, ಅರುಣ್ ಸಿಂಗ್ ಶಾಸಕಾಂಗ ಪಕ್ಷದ ಸಭೆಯ ಬದಲಿಗೆ ಪಕ್ಷದ ಕಚೇರಿಯಲ್ಲೇ ಶಾಸಕರ ಸಭೆ ನಡೆಸುವುದಕ್ಕೆ ಒಲವು ತೋರಿದ್ದಾರೆ. ಈ ಬೆಳವಣಿಗೆಯಿಂದ ಕೆಲವು ಶಾಸಕರು ಅಸಮಾಧಾನಗೊಂಡಿದ್ದಾರೆ. ಶಾಸಕಾಂಗ ಪಕ್ಷದ ಸಭೆ ನಡೆಸಲು ಉಸ್ತುವಾರಿಗೆ ಸೂಚಿಸುವಂತೆ ವರಿಷ್ಠರ ಮೇಲೆ ಒತ್ತಡ ತರುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ ಎಂಬ ಮಾಹಿತಿ ಲಭಿಸಿದೆ.

'ಸಭೆಗೆ ಸಂಪೂರ್ಣ ಸಹಕಾರ': ಶಿವಮೊಗ್ಗ ಮತ್ತು ಹಾಸನ ಜಿಲ್ಲಾ ಪ್ರವಾಸ ಮುಗಿಸಿ ಭಾನುವಾರ ಸಂಜೆ ಬೆಂಗಳೂರಿಗೆ ಹಿಂತಿರುಗಿದ ಬಳಿಕ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಯಡಿಯೂರಪ್ಪ, 'ಪಕ್ಷದ ಉಸ್ತುವಾರಿಯಾಗಿ ಪಕ್ಷ ಸಂಘಟನೆ, ಅಭಿವೃದ್ಧಿ ಕಾರ್ಯಗಳ ಕುರಿತು ಸಮಾಲೋಚಿಸಿ ಮಾಹಿತಿ ಪಡೆಯುವುದು ಅರುಣ್ ಸಿಂಗ್ ಅವರ ಜವಾಬ್ದಾರಿ. ಅದಕ್ಕಾಗಿ ಅವರು ಬರುತ್ತಿದ್ದಾರೆ' ಎಂದರು.

ಅರುಣ್ ಸಿಂಗ್ ಬದಲಾವಣೆಗೆ ಬೇಡಿಕೆ?

ಉಸ್ತುವಾರಿ ಅರುಣ್ ಸಿಂಗ್ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪರ ಇದ್ದಾರೆ ಎಂಬ ಅನುಮಾನ ವಿರೋಧಿ ಬಣದಲ್ಲಿ ಬೇರೂರಿದೆ. ರಾಜ್ಯ ಭೇಟಿಯ ಸಂದರ್ಭದಲ್ಲಿ 'ಭಿನ್ನಮತೀಯ ಚಟುವಟಿಕೆ ನಡೆಸಬೇಡಿ' ಎಂದು ಸಿಂಗ್ ತಾಕೀತು ಮಾಡಲಿದ್ದಾರೆ ಎಂಬ ಮಾಹಿತಿ ಅವರಿಗೆ ಲಭಿಸಿದೆ.

ಇದಕ್ಕೆ ಪ್ರತಿತಂತ್ರ ರೂಪಿಸುತ್ತಿರುವ ಯಡಿಯೂರಪ್ಪ ವಿರೋಧಿ ಬಣ, ಪಕ್ಷದ ರಾಜ್ಯ ಉಸ್ತುವಾರಿಯನ್ನೇ ಬದಲಾವಣೆ ಮಾಡುವಂತೆ ಬಿಜೆಪಿ ವರಿಷ್ಠರ ಮುಂದೆ ಬೇಡಿಕೆ ಇಡಲು ಚಿಂತನೆ ನಡೆಸಿದೆ ಎಂದು ಹೇಳಲಾಗಿದೆ.

ಜಿಲ್ಲೆಗಳಲ್ಲಿ ಸಾವಿನ ಲೆಕ್ಕ ಮರುಪರಿಶೀಲನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌ನಿಂದ ಮೃತರಾದವರ ಲೆಕ್ಕಾಚಾರದಲ್ಲಿ ಏರುಪೇರಾಗಿರುವ ಕುರಿತು ಗೊಂದಲ ಉಂಟಾಗಿದ್ದು, ಪ್ರತಿಯೊಂದು ಸಾವಿನ ಲೆಕ್ಕಪರಿಶೋಧನೆ ಆಗಬೇಕು ಎಂದು ಎಲ್ಲ ಜಿಲ್ಲಾಡಳಿತಗಳಿಗೆ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಸೂಚನೆ ನೀಡಿದೆ.

ಸಾವಿನ ಲೆಕ್ಕಪರಿಶೋಧನೆಯಿಂದ ಸಮುದಾಯ ಮತ್ತು ಆಸ್ಪತ್ರೆಯ ಮಟ್ಟದಲ್ಲಿ ತಡೆಗಟ್ಟಬಹುದಾಗಿದ್ದ ಸಾವಿನ ಕಾರಣಗಳನ್ನು ಗುರುತಿಸಬಹುದು. ಅಲ್ಲದೇ ಆಂಬ್ಯುಲೆನ್ಸ್‌ಗಳ ಲಭ್ಯತೆ ಮತ್ತು ಚಿಕಿತ್ಸೆಯಲ್ಲಿನ ನ್ಯೂನತೆಗಳನ್ನು ಸಹ ತಿಳಿಬಹುದು ಎಂದು ವರದಿ ತಿಳಿಸಿದೆ.

ಪಟ್ನಾ ಹೈಕೋರ್ಟ್‌ನ ಸೂಚನೆಯ ಮೇರೆಗೆ ಪ್ರತಿ ಜಿಲ್ಲೆಯಲ್ಲೂ ಸಾವಿನ ಲೆಕ್ಕಪರಿಶೋಧನೆ ನಡೆಸಿದ್ದ ಬಿಹಾರದಲ್ಲಿ ಕೋವಿಡ್ ಸಾವಿನ ಸಂಖ್ಯೆಯಲ್ಲಿ ಭಾರಿ ವ್ಯತ್ಯಾಸ ಕಂಡುಬಂದಿತ್ತು. ಇದೇ ಸಮಯದಲ್ಲಿ ಚೆನ್ನೈನಲ್ಲಿರುವ ಐಸಿಎಂಆರ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಪಿಡೆಮಿಯಾಲಜಿ ಸಿದ್ಧಪಡಿಸಿದ ವರದಿಯೂ ಪ್ರಕಟವಾಗಿದೆ.

ಕಳೆದ ಮೂರು ದಿನಗಳಿಂದ, ಮಹಾರಾಷ್ಟ್ರವು ತನ್ನ ಕೋವಿಡ್ ಸಾವಿನ ಸಂಖ್ಯೆಗಳನ್ನು ಪರಿಷ್ಕರಿಸುತ್ತಿದೆ. ಕಳೆದ 72 ಗಂಟೆಗಳಲ್ಲಿ 6,490 ಕೋವಿಡ್ ಸಾವುಗಳನ್ನು ಪಟ್ಟಿಗೆ ಸೇರಿಸಿದೆ. ಮಧ್ಯಪ್ರದೇಶ ಮತ್ತು ಗುಜರಾತ್ ಮಂಡಿಸಿದ ಅಧಿಕೃತ ಕೋವಿಡ್-19 ಸಾವಿನ ಸಂಖ್ಯೆಯಲ್ಲಿ ಅನುಮಾನ ಮೂಡುತ್ತಿರುವ ವರದಿಗಳಿವೆ.

ಕಡಿಮೆ ಸಂಖ್ಯೆಯ ದೈನಂದಿನ ಸಾವುಗಳನ್ನು ನಿರಂತರವಾಗಿ ವರದಿ ಮಾಡುವ ರಾಜ್ಯಗಳು ತಮ್ಮ ದತ್ತಾಂಶವನ್ನು ಮರುಪರಿಶೀಲಿಸುವಂತೆ ಕೇಳಿಕೊಳ್ಳಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

'ಕೋವಿಡ್‌ನಂತಹ ದೀರ್ಘಕಾಲದ ಸಾಂಕ್ರಾಮಿಕ ರೋಗದ ಸಮಯದಲ್ಲಿ ಸಾವಿನ ಸಂಖ್ಯೆಯಲ್ಲಿ ವ್ಯತ್ಯಾಸಗಳು ಆಗುವುದು ಸಾಮಾನ್ಯ. ಆದರೆ ಭಾರತದ ಕೋವಿಡ್ ನಿಯಂತ್ರಣ ವ್ಯವಸ್ಥೆಯಲ್ಲಿ ಡ್ಯಾಶ್‌ಬೋರ್ಡ್ ಅನುಪಸ್ಥಿತಿಯಿಂದ ಈ ರೀತಿ ಆಗಿದೆ. ಪ್ರತಿ ಜಿಲ್ಲೆಯು ಪ್ರತೀವಾರವೂ ಸಾವಿನ ಲೆಕ್ಕ ಹಾಕಬೇಕು. ಮೃತರ ಲಿಂಗ, ವಯಸ್ಸು, ಪ್ರದೇಶ ಮೊದಲಾದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಬೇಕು' ಎಂದು ಸಂಸ್ಥೆ ತಿಳಿಸಿದೆ.

ಇಂದಿನಿಂದ ಲಾಕ್‌ಡೌನ್ ಭಾಗಶಃ ಸಡಿಲಿಕೆ

ಒಂದನೇ ಪುಟದಿಂದ

ಉದ್ಯಾನಗಳಲ್ಲಿ ಬೆಳಿಗ್ಗೆ 5ರಿಂದ 10 ಗಂಟೆಯವರೆಗೆ ವಾಯುವಿಹಾರಕ್ಕೆ ಅವಕಾಶ ದೊರೆಯಲಿದೆ. ಕೈಗಾರಿಕೆಗಳು ಶೇ 50ರಷ್ಟು ಸಿಬ್ಬಂದಿ ಬಳಸಿಕೊಂಡು ಕಾರ್ಯಾಚರಣೆ ನಡೆಸಲು ಮತ್ತು ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ನಡೆಸುವುದಕ್ಕೂ ಈ ಜಿಲ್ಲೆಗಳಲ್ಲಿ ಅನುಮತಿ ನೀಡಲಾಗಿದೆ. ಅದಕ್ಕೆ ಪೂರಕವಾಗಿ ನಿರ್ಮಾಣ ಸಾಮಗ್ರಿಗಳ ಮಾರಾಟಕ್ಕೂ ಅವಕಾಶ ದೊರಕಲಿದೆ.

'ಲಾಕ್‌ಡೌನ್ ಸಡಿಲಿಕೆಯಾಗಲಿರುವ ಜಿಲ್ಲೆಗಳಲ್ಲಿ ಕೈಗಾರಿಕಾ ಸಂಸ್ಥೆಗಳು ಮಾತ್ರ ಶೇ 50ರಷ್ಟು ಸಿಬ್ಬಂದಿ ಬಳಸಿಕೊಂಡು ಕಾರ್ಯಾಚರಣೆ ನಡೆಸಬಹುದು. ಸಿದ್ಧ ಉಡುಪು ಕಾರ್ಖಾನೆಗಳಲ್ಲಿ ಶೇ 30ರಷ್ಟು ಸಿಬ್ಬಂದಿ ಮಾತ್ರ ಕೆಲಸ ಮಾಡಲು ಅವಕಾಶ ಕಲ್ಪಿಸಬಹುದು. ಇತರ ಯಾವುದೇ ರೀತಿಯ ಸಂಸ್ಥೆಗಳು ಮತ್ತು ಕಚೇರಿಗಳನ್ನು ತೆರೆಯಲು ಅವಕಾಶ ನೀಡಿಲ್ಲ' ಎಂದು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಸ್ಪಷ್ಟಪಡಿಸಿದ್ದಾರೆ.

ನಗರಗಳತ್ತ ಮರು ವಲಸೆ: ಲಾಕ್‌ಡೌನ್ ಸಡಿಲಿಕೆ ಆಗಲಿರುವ ಜಿಲ್ಲೆಗಳಿಂದ ಅಂತರ ಜಿಲ್ಲಾ ಪ್ರಯಾಣಕ್ಕೆ ಅವಕಾಶ ನೀಡಲಾಗಿದೆ. ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದಂತೆಯೇ ಲಕ್ಷಾಂತರ ಮಂದಿ ನಗರಗಳನ್ನು ತೊರೆದು ಹಳ್ಳಿಗಳಿಗೆ ಹೋಗಿದ್ದರು. ಅವರಲ್ಲಿ ಬಹುತೇಕರು ಸೋಮವಾರದಿಂದ ನಗರಗಳಿಗೆ ಹಿಂದಿರುಗಲಿದ್ದಾರೆ. ಬೆಂಗಳೂರು ನಗರಕ್ಕೆ ಭಾರಿ ಪ್ರಮಾಣದ ಜನರು ಹಿಂದಿರುಗುವ ಸಾಧ್ಯತೆ ಇದೆ.

ಲಾಕ್‌ಡೌನ್ ಸಡಿಲಿಕೆ ಆಗಿರುವ ಪ್ರದೇಶಗಳಲ್ಲಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಸಂಚರಿಸುವ ಜನರಿಗೆ ಕೋವಿಡ್ ಪರೀಕ್ಷೆ ಕಡ್ಡಾಯಗೊಳಿಸಿಲ್ಲ. ಅಂತಹ ಯಾವುದೇ ಆದೇಶವನ್ನು ಹೊರಡಿಸಿಲ್ಲ ಎಂದು ಮಂಜುನಾಥ್ ಪ್ರಸಾದ್ ತಿಳಿಸಿದ್ದಾರೆ.

ರಾಯ್ ಡಿಸೋಜಾ ಸಾವಿನ ಪ್ರಕರಣ: ಪೊಲೀಸರ ವಿಚಾರಣೆ

ಒಂದನೇ ಪುಟದಿಂದ

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ರಾಯ್ ಅವರ ತಾಯಿ ಮೆಟಿಲ್ಡಾ ಲೊಬೊ ಜೊತೆ ದೂರವಾಣಿ ಮೂಲಕ ಘಟನೆಯ ಮಾಹಿತಿ ಪಡೆದುಕೊಂಡರು.

ರಾಯ್ ಡಿಸೋಜಾ ಅವರು ಹಲ್ಲೆಗೊಳಗಾಗಿ ಮಡಿಕೇರಿಯ ಆಸ್ಪತ್ರೆಯಲ್ಲಿ ಶನಿವಾರ ಮೃತಪಟ್ಟಿದ್ದಾರೆ. ಪೊಲೀಸರು ನಡೆಸಿದ ಹಲ್ಲೆಯಿಂದಲೇ ಮೃತಪಟ್ಟಿದ್ದಾರೆ ಎಂದು ಸಂಬಂಧಿಕರು ಆರೋಪಿಸಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ್ದವು. ಸಂಘಟನೆಗಳೂ ತನಿಖೆಗೆ ಆಗ್ರಹಿಸಿದ್ದವು. ಪ್ರಾಥಮಿಕ ವರದಿ ಆಧರಿಸಿ, ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್, ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಿದ್ದಾರೆ.

'ಕುಟುಂಬಕ್ಕೆ ನ್ಯಾಯ ಕೊಡಿಸಿ':ರಾಯ್ ಕುಟುಂಬಕ್ಕೆ ನ್ಯಾಯ ಕೊಡಿಸುವಂತೆ ಕೋರಿ, ಮೈಸೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷ ಡಾ.ಕೆ. ಎಂ.ವಿಲಿಯಂ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪಗೆ ಪತ್ರ ಬರೆದಿದ್ದಾರೆ.

> **ಘಟನೆಯು ಕ್ರೈಸ್ತ ಸಮುದಾಯಕ್ಕೆ ನೋವು ತಂದಿದೆ. ತಪ್ಪಿತಸ್ಥ ಸಿಬ್ಬಂದಿಗೆ ಶಿಕ್ಷೆ ಆಗಬೇಕು. ಇಂತಹ ಘಟನೆ ಮತ್ತೆ ರಾಜ್ಯದಲ್ಲಿ ಎಲ್ಲೂ ಮರುಕಳುಹಿಸದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು**
> **ಡಾ.ಕೆ.ಎಂ.ವಿಲಿಯಂ,** ಧರ್ಮಾಧ್ಯಕ್ಷ, ಮೈಸೂರು ಧರ್ಮಕ್ಷೇತ್ರ

'ಕೆಲವು ಪೊಲೀಸರು ರಾಯ್ ಡಿಸೋಜಾ ಅವರ ತಾಯಿಯನ್ನು ಮಡಿಕೇರಿಯಲ್ಲಿ ಭೇಟಿ ಮಾಡಿ, ದೂರು ನೀಡಿದಂತೆ ಹಾಗೂ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದಂತೆ ಕೋರಿದ್ದರು. ಮಂಗಳೂರಿಗೆ ಕರೆದೊಯ್ದು, ಚಿಕಿತ್ಸಾ ವೆಚ್ಚವನ್ನು ತಾವೇ ಭರಿಸುವುದಾಗಿ ಹೇಳಿ ಮನವೊಲಿಸಲು ಯತ್ನಿಸಿದ್ದಾರೆ. ತಮ್ಮ ಮೇಲೆ ಹಲ್ಲೆ ನಡೆಸಲು ಮುಂದಾದ ಎನ್ನುವ ಕಾರಣಕ್ಕೆ ಮಾನಸಿಕ ಅಸ್ವಸ್ಥ ವ್ಯಕ್ತಿಯನ್ನು ಪೊಲೀಸರೇ ಹೊಡೆದು ಕೊಂದಿರುವುದು ಸರಿಯೇ' ಎಂದು ವಿಲಿಯಂ ಪ್ರಶ್ನಿಸಿದ್ದಾರೆ.

ವಲಸೆ ಕಾರ್ಮಿಕರಿಗೆ ರಾಜ್ಯಗಳು ಪಡಿತರ ವಿತರಿಸಿಲ್ಲ: ಕೇಂದ್ರ ಆರೋಪ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ವಲಸೆ ಕಾರ್ಮಿಕರಿಗೆ ವಿತರಿಸಲಿ ಎಂದು ರಾಜ್ಯ ಸರ್ಕಾರಗಳಿಗೆ ಹೆಚ್ಚುವರಿ ಪಡಿತರವನ್ನು ಪೂರೈಕೆ ಮಾಡಿದ್ದೆವು. ಆದರೆ ರಾಜ್ಯ ಸರ್ಕಾರಗಳು ಅದನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿಲ್ಲ' ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ.

ಕೋವಿಡ್ ಲಾಕ್‌ಡೌನ್‌ನ ಸಂದರ್ಭದಲ್ಲಿ ತೊಂದರೆಗೆ ಈಡಾಗಿದ್ದ ವಲಸೆ ಕಾರ್ಮಿಕರಿಗೆ ಪಡಿತರ ಒದಗಿಸುವುದಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿವಾಗಿ ವಿಚಾರಣೆ ನಡೆಸುತ್ತಿದೆ.

'ಯಾವುದೇ ಯೋಜನೆ ಅಡಿ ಬರದೇ ಇರುವ ವಲಸೆ ಕಾರ್ಮಿಕರಿಗೆ ನೀಡಲೆಂದೇ 2020ರ ಮೇ ತಿಂಗಳಲ್ಲಿ ಹೆಚ್ಚುವರಿಯಾಗಿ 8 ಲಕ್ಷ ಟನ್ ಪಡಿತರವನ್ನು ರಾಜ್ಯ ಸರ್ಕಾರಗಳಿಗೆ ಪೂರೈಕೆ ಮಾಡಲಾಗಿತ್ತು. ಆದರೆ ರಾಜ್ಯ ಸರ್ಕಾರಗಳು ಆ ಪಡಿತರವನ್ನು ಪೂರ್ಣ ಪ್ರಮಾಣದಲ್ಲಿ ವಿತರಣೆ ಮಾಡಿಲ್ಲ. ರಾಜ್ಯ ಸರ್ಕಾರಗಳು 2020ರ ಆಗಸ್ಟ್ 31ರ ವೇಳೆಗೆ 2.74 ಲಕ್ಷ ಟನ್ ಪಡಿತರವನ್ನಷ್ಟೇ ವಿತರಣೆ ಮಾಡಿದ್ದವು. ರಾಜ್ಯ ಸರ್ಕಾರಗಳು ಒಟ್ಟು 2.8 ಕೋಟಿ ಅಸಂಘಟಿತ ವಲಸೆ ಕಾರ್ಮಿಕರನ್ನು ಗುರುತಿಸಿದ್ದವು. ಅವರಲ್ಲಿ 2.74 ಕೋಟಿ ಜನರಿಗೆ ಪಡಿತರ ವಿತರಿಸಲಾಗಿದೆ' ಎಂದು ಕೇಂದ್ರ ಸರ್ಕಾರವು ವಿವರಿಸಿದೆ.

2022ರ ಮಾರ್ಚ್‌ವರೆಗೆ ಹಂಚಿಕೆ: 'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಅಡಿಯಲ್ಲಿ ಬರದೇ ಇರುವ, ಆದರೆ ರಾಜ್ಯ ಸರ್ಕಾರಗಳ ವಿವಿಧ ಯೋಜನೆ ಅಡಿ ಪಡಿತರ ಚೀಟಿ ಹೊಂದಿರುವವರಿಗೆ 2022ರ ಮಾರ್ಚ್ 31ರವರೆಗೆ ನೀಡಲು ಅಗತ್ಯವಾದ ಪಡಿತರವನ್ನು ಈಗಾಗಲೇ ಹಂಚಿಕೆ ಮಾಡಿದ್ದೇವೆ' ಎಂದು ಕೇಂದ್ರ ಸರ್ಕಾರವು ತನ್ನ ಪ್ರಮಾಣ ಪತ್ರದಲ್ಲಿ ವಿವರಿಸಿದೆ.

'ಮುಕ್ತ ಮಾರುಕಟ್ಟೆ ನೀತಿ ಅಡಿಯಲ್ಲಿ ಪ್ರತಿ ಕೆಜಿ ಅಕ್ಕಿ ಮತ್ತು ಗೋಧಿಯನ್ನು ಕ್ರಮವಾಗಿ ₹ 21 ಮತ್ತು ₹ 22ರ ದರದಲ್ಲಿ ಎಲ್ಲಾ ರಾಜ್ಯಗಳಿಗೆ ಭಾರತೀಯ ಆಹಾರ ನಿಗಮ ವಿತರಿಸಲಿದೆ. ತಮಗೆ ಅಗತ್ಯವಿರುವ ಹೆಚ್ಚುವರಿ ಪಡಿತರವನ್ನು ಪಡೆದುಕೊಳ್ಳಲು, ಸಾಧ್ಯವಿರುವ ಎಲ್ಲಾ ವಿನಾಯಿತಿಗಳನ್ನು ರಾಜ್ಯ ಸರ್ಕಾರಗಳು ಬಳಸಿಕೊಳ್ಳಬೇಕು. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಮತ್ತು ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಅಡಿ ಬಾರದೆ ಇರುವ ವಲಸೆ ಕಾರ್ಮಿಕರಿಗೆ ಪಡಿತರ ವಿತರಿಸಲು ತಮ್ಮಲ್ಲಿರುವ ವಿವಿಧ ಪಡಿತರ ಯೋಜನೆಗಳ ಅಡಿ, ಕೇಂದ್ರ ಸರ್ಕಾರದಿಂದ ಪಡಿತರ ಪಡೆದುಕೊಳ್ಳಿ ಎಂದು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದ್ದೇವೆ' ಎಂದು ಸರ್ಕಾರವು ವಿವರಿಸಿದೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಅಡಿ ನೀಡಲಾಗುತ್ತಿರುವ ಪಡಿತರದ ಜತೆಗೆ ಹೆಚ್ಚುವರಿಯಾಗಿ ಪ್ರತಿ ವ್ಯಕ್ತಿಗೆ 5 ಕೆ.ಜಿ. ಪಡಿತರವನ್ನು ಉಚಿತವಾಗಿ ನೀಡಲಾಗುತ್ತಿದೆ. ಮೇ ಮತ್ತು ಜೂನ್ ತಿಂಗಳಲ್ಲಿ ವಿತರಿಸಲು ಅಗತ್ಯವಿರುವ ಪಡಿತರವನ್ನು ಈಗಾಗಲೇ ರಾಜ್ಯ ಸರ್ಕಾರಗಳಿಗೆ ವಿತರಿಸಿದ್ದೇವೆ ಎಂದು ಸರ್ಕಾರವು ಹೇಳಿದೆ.

ಸರ್ಕಾರ ಹೇಳಿದ್ದು...

- ರಾಜ್ಯಗಳಿಗೆ 8 ಲಕ್ಷ ಟನ್ ಹೆಚ್ಚುವರಿ ಪಡಿತರ ಪೂರೈಕೆ
- ರಾಜ್ಯ ಸರ್ಕಾರಗಳು ವಿತರಿಸಿದ್ದು 2.74 ಲಕ್ಷ ಟನ್ ಮಾತ್ರ
- 2.8 ಕೋಟಿಯಲ್ಲಿ 2.74 ಕೋಟಿ ಕಾರ್ಮಿಕರಿಗೆ ಪಡಿತರ ವಿತರಣೆ

'ಅಕ್ರಮ ವಲಸಿಗರನ್ನು ರಾಜ್ಯದಿಂದ ಹೊರಗೆ ಕಳುಹಿಸುವೆ'

ಒಂದನೇ ಪುಟದಿಂದ

'ಇನ್ನೂ ಅನೇಕರು ಬರುತ್ತಿದ್ದಾರೆ. ಅವರನ್ನು ಪತ್ತೆ ಹಚ್ಚಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ. ಈ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ' ಎಂದು ಮಾಧ್ಯಮದವರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ರಾಜ್ಯದಲ್ಲಿ ನಿವೇಶನ ರಹಿತರಿಗೆ ಎರಡು ವರ್ಷದ ಅಧಿಕಾರವಧಿಯಲ್ಲಿ ನಿವೇಶನ ಹಂಚಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ. ರಾಜ್ಯದಲ್ಲಿ ಯಾರೊಬ್ಬರೂ ನಿವೇಶನ ರಹಿತವಾಗಿ ಇರಬಾರದು. ಇನ್ನೆರಡು ವರ್ಷದಲ್ಲಿ ಎಲ್ಲರಿಗೂ ನಿವೇಶನ ನೀಡಲು ಪ್ರಯತ್ನಿಸಲಾಗುತ್ತಿದೆ. ಪ್ರಸ್ತುತ ಲಾಕ್‌ಡೌನ್ ಮುಂದುವರಿಸಿರುವ ಜಿಲ್ಲೆಗಳಲ್ಲಿ ಕೋವಿಡ್ ಸೋಂಕಿತರ ಪ್ರಮಾಣ ಕಡಿಮೆಯಾದರೆ ಲಾಕ್‌ಡೌನ್ ತೆರವುಗೊಳಿಸುತ್ತೇವೆ' ಎಂದರು.

'ರಾಜ್ಯದಲ್ಲಿ ಮುಂಗಾರು ಮಳೆ ಉತ್ತಮವಾಗಿದೆ. ಜಲಾಶಯಗಳಲ್ಲಿ ಹೆಚ್ಚಿನ ನೀರು ಹರಿದು ಬರುತ್ತಿದೆ. ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ. ಒಳ್ಳೆಯ ಬೆಳೆಯ ನಿರೀಕ್ಷೆ ಇದೆ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ
Four Wheelers Selling
Others

TATA MAGIC EXPRESS AMBULANCE
ರೋಗಿಗಳನ್ನು ತ್ವರಿತವಾಗಿ ಆಸ್ಪತ್ರೆಗೆ ದಾಖಲಿಸಲು
AIS 125 Part 1 Compliant

magic express BS6
ಟಾಟಾ ಮೋಟಾರ್ಸ್‌ರವರಿಂದ ಸಾಂಕ್ರಾಮಿಕ ಖಾಯಿಲೆಯ ಈ ಅವಧಿಯಲ್ಲಿ ದೇಶಕ್ಕೆ ಉತ್ತಮ ಸೇವೆ ಒದಗಿಸಲು ಆಂಬ್ಯುಲೆನ್ಸ್‌ಗಳನ್ನು ಸಿದ್ಧಪಡಿಸಲಾಗಿದೆ
ಪ್ರಾರಂಭಿಕ ಬೆಲೆ ₹8.09* ಲಕ್ಷದಿಂದ
ವಿಶೇಷ ಸೌಲಭ್ಯಗಳು ರೋಗಿ ಮತ್ತು ವೈದ್ಯರಿಗೆ

ವಿಶಾಲವಾದ ಮತ್ತು ಆರಾಮದಾಯಕ ಒಳಾಂಗಣ

95%* ದವರೆಗೆ ಸಾಲ ಸೌಲಭ್ಯ
2 ವರ್ಷ/72,000 ಕಿ.ಮೀ ವಾರಂಟಿ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Rural 9845321559/ 9900205018/8050296988
Mysore/Mandya/ Chamrajnagar 9900205018
Tumkur/Davanagere/ Chitradurga 9071001373
Mangalore/Shivamogga/ Udupi/Hassan/ Chikkamagalur/Karwar 9845118186
Sirsi - 7829909087
Hubli/Haveri/Gadag- 990025580/9945658060/ 8660786293
Bagalkot/Bijapur 9606044611
Gangavathi -9606095180
Raichur - 9731888150
* ಷರತ್ತುಗಳು ಅನ್ವಯಿಸುತ್ತದೆ.

ಯಶಸ್ಸು ಮೂರು ಚಿನ್ನದ ಆನೆಗಳೊಂದಿಗೆ
Ace GOLD ಪೆಟ್ರೋಲ್, ಡೀಸಲ್ ಮತ್ತು ಸಿಎನ್‌ಜಿ ವಾಹನ ಆಕರ್ಷಕ ಕೊಡುಗೆಗಳೊಂದಿಗೆ

ACE GOLD BS6
ಇಂದೇ ಕೊಳ್ಳಿರಿ
ನಿಮ್ಮ ಮಾಸಿಕ ಕಂತನ್ನು 2 ತಿಂಗಳ* ನಂತರ ಪ್ರಾರಂಭಿಸಿ
1.99%* ಬಡ್ಡಿದರ
ಎಕ್ಸ್‌ಚೇಂಜ್ ಬೋನಸ್ ₹15,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95389 35533
Bangalore -7259784441
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 96209 55858
Bagalkot/Bijapur/Gulbarga/ Bidar - 73899 44057
Hubli/Belgaum 91088 64572
* ಷರತ್ತುಗಳು ಅನ್ವಯಿಸುತ್ತದೆ.

ಭವಿಷ್ಯ
Astrology
ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಸ್ತ್ರೀಪುರುಷ ವಶಕ್ಕೆ "ಕೇರಳ ಕಾಶ್ಮೋರ" ಪೂಜಾ ಶಕ್ತಿಯಿಂದ 'ರತಿ ಕಾಮರಾಜ' ಮಂತ್ರದಿಂದ ಕೇವಲ 24 ಘಂಟೆಗಳಲ್ಲಿ ಪರಿಹಾರ ನೀಡಲಾಗುವುದು. 9686007334

ಉದ್ಯೋಗಾವಕಾಶ
Part-Time Jobs
ಲಾಕ್-ಡೌನ್ ಸಮಯದಲ್ಲಿ ಸುವರ್ಣಾವಕಾಶ ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000- 25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ.9108059956, 9901929956

General
WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
condition apply*
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE JOB NOTICE NAME CHANGE ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassified@deccanherald.co.in

ಸಾರ್ಥಕ ಸೇವೆಗೆ ನಿಮ್ಮ ಕೊಡುಗೆ ಸಮರ್ಪಣೆ

ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್‌ನಿಂದ ಏಳು ಸಂಸ್ಥೆಗಳು ತಲಾ ₹ 5 ಲಕ್ಷ ನೆರವನ್ನು ಮೊದಲ ಹಂತದಲ್ಲಿ ಕೋವಿಡ್ ಪರಿಹಾರ ಕಾರ್ಯಗಳಿಗೆ ಪಡೆಯಲಿವೆ. ಈ ಸಂಸ್ಥೆಗಳ ಚಟುವಟಿಕೆಯ ಮಾಹಿತಿ ಇಲ್ಲಿದೆ.

ಇಂಡಿಯಾ ಕೇರ್ಸ್ ಫೌಂಡೇಷನ್

ಇಂಡಿಯಾ ಕೇರ್ಸ್ ಫೌಂಡೇಷನ್ ಅನ್ನು 2000ರಲ್ಲಿ ಪ್ರಾಥಮಿಕವಾಗಿ ಬೆಂಗಳೂರು ನಗರವನ್ನು ಗಮನದಲ್ಲಿ ಇಟ್ಟುಕೊಂಡು ಸ್ಥಾಪಿಸಲಾಯಿತು. ಕೋವಿಡ್ ಪಿಡುಗು ಆರಂಭವಾದಂದಿನಿಂದಲೂ ಈ ಸಂಸ್ಥೆ ಪರಿಹಾರ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಕಳೆದ ವರ್ಷ ಆಹಾರ ಕಿಟ್ ಮತ್ತು ಪಡಿತರ ಕಿಟ್ ಅನ್ನು ನೀಡಿತ್ತು. ಈ ವರ್ಷ ಪ್ರಮುಖವಾಗಿ ವೈದ್ಯಕೀಯ ಪರಿಹಾರ ಒದಗಿಸಲು ಆದ್ಯತೆ ನೀಡಿದೆ. ಹೊಸಕೋಟೆಯಲ್ಲಿ ಬಿಬಿಎಂಪಿಯ ಆಸ್ಪತ್ರೆಯಲ್ಲಿ ಆಮ್ಲಜನಕ ಘಟಕವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುತ್ತಿದೆ. ಗ್ರಾಮೀಣ ಭಾಗದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೌಲಭ್ಯ ಬಲಪಡಿಸಲು ಯೋಜನೆ ಹೊಂದಿದೆ. ಆರಂಭಿಕವಾಗಿ ಚಿಕ್ಕೋಡಿ (ಬೆಳಗಾವಿ ಜಿಲ್ಲೆ), ತೀರ್ಥಹಳ್ಳಿಯಲ್ಲಿ (ಶಿವಮೊಗ್ಗ ಜಿಲ್ಲೆ) ಆಮ್ಲಜನಕ ಸಾಂದ್ರಕಗಳು, ಮಲ್ಟಿ ಪ್ಯಾರಾ ಮಾನಿಟರ್‌ಗಳು, ವಿದ್ಯುತ್ ಜನರೇಟರ್‌ಗಳು, ಫ್ಲವರ್ ಬೆಡ್ ಒದಗಿಸಲು ಮುಂದಾಗಿದೆ.

ಸಹಯೋಗ್

ಸಹಯೋಗ್ ಎಂಬುದು ಬೆಂಗಳೂರು ಮೂಲದ ಎನ್‌ಜಿಒ. ಇದು, ಕ್ಯಾನ್ಸರ್ ಸೇರಿದಂತೆ ವಿವಿಧ ರೋಗಗಳ ಚಿಕಿತ್ಸೆಗೆ ವೈದ್ಯಕೀಯ ವೆಚ್ಚ ಭರಿಸುವುದು ಹಾಗೂ ಆಸ್ಪತ್ರೆಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಗೆ ನೆರವು ನೀಡುತ್ತಿದೆ. ಕೋವಿಡ್ ಸೋಂಕಿನ ಸಂದರ್ಭದಲ್ಲಿ ಸಮಾಜದಲ್ಲಿನ ನಿರ್ಗತಿಕರಾದ ಮತ್ತು ಕಡುಬಡತನದಲ್ಲಿ ಇರುವ ವರ್ಗಗಳ ಜನರಿಗೆ ಉತ್ತಮ ವೈದ್ಯಕೀಯ ಸೌಲಭ್ಯ ಪಡೆಯಲು ಆಗುವಂತೆ ಪರಿಹಾರ ಕಾರ್ಯಗಳನ್ನು ಹಮ್ಮಿಕೊಂಡಿದೆ. ಸಹಯೋಗ್ ಸಂಸ್ಥೆಯು ಬಿಬಿಎಂಪಿ ಸಹಯೋಗದಲ್ಲಿ 50 ಹಾಸಿಗೆ ಸಾಮರ್ಥ್ಯದ ಟ್ರಯಾಜ್ ಕೇಂದ್ರವನ್ನು ಬೆಂಗಳೂರಿನ ಕುಮಾರಸ್ವಾಮಿ ಲೇಔಟ್‌ನಲ್ಲಿ ಸ್ಥಾಪಿಸಿದೆ. ಅಲ್ಲದೆ, ನಿರ್ಗತಿಕ ವರ್ಗದವರಿಗೆ ಚಿಕಿತ್ಸೆ ಒದಗಿಸಲು ಮೊಬೈಲ್ ಕೇರ್ ಘಟಕವನ್ನು ಆರಂಭಿಸಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಮಾರ್ಗ ಅಳವಡಿಸಲು ಉದ್ದೇಶಿಸಿದೆ. ಸಂಸ್ಥೆ ಈಗ ಕೋವಿಡ್ ನಂತರದ ಅನಾರೋಗ್ಯದಿಂದ ಬಳಲುತ್ತಿರುವ ಬಡ ರೋಗಿಗಳಿಗೆ ವೈದ್ಯಕೀಯ ನೆರವು ಒದಗಿಸುವ ಕಾರ್ಯದಲ್ಲಿ ತೊಡಗಿದೆ.

ರೈಟ್ ಟು ಲಿವ್

ಬೆಂಗಳೂರು ಮೂಲದ ಎನ್‌ಜಿಒ ಆಗಿರುವ 'ರೈಟ್ ಟು ಲಿವ್' ಕೋಟಿ ಫೌಂಡೇಷನ್‌ನ ಸೇವಾಕ್ರಮವಾಗಿದೆ. ಇದು, ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಕೋವಿಡ್ ಚಿಕಿತ್ಸಾ ಸೇವೆಯನ್ನು ನೀಡುತ್ತಿದೆ. ಇದು, ಡಾ.ಅನಿಲ್ ಕುಮಾರ್, ಕಾರ್ಯಕರ್ತರು ಮತ್ತು ಇತರೆ ಸಂಘಟನೆಗಳ ಸಹಯೋಗದಲ್ಲಿ ಜಿಲ್ಲೆಯ 100 ಗ್ರಾಮಗಳಲ್ಲಿ ಕೋವಿಡ್ ಪ್ರಥಮ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಿದೆ. ಬೆಂಗಳೂರಿನಲ್ಲಿ 'ಡಾಕ್ಟರ್ ಆನ್ ವ್ಹೀಲ್' (ಡಾ.ಸುನಿಲ್ ಹೆಬ್ಬಿ ಸಹಯೋಗ) ಕಾರ್ಯಗತಗೊಳಿಸಿದ್ದು, ಕೊಳೆಗೇರಿಗಳ ನಿವಾಸಿಗಳು ಮತ್ತು ಹಿರಿಯ ನಾಗರಿಕರಿಗೆ ಅವರ ಮನೆಯ ಬಾಗಿಲಿನಲ್ಲೇ ಕೋವಿಡ್ ಚಿಕಿತ್ಸೆಯನ್ನು ಒದಗಿಸುತ್ತಿದೆ. ಇದಲ್ಲದೆ, ದಕ್ಷಿಣ ಕನ್ನಡ ಜಿಲ್ಲೆ ಗ್ರಾಮೀಣ ಭಾಗಗಳು ಮತ್ತು ಹೊಸೂರುನಲ್ಲಿ ಕೋವಿಡ್ ಪರಿಸ್ಥಿತಿ ಎದುರಿಸಲು ಆಸ್ಪತ್ರೆಗಳಿಗೆ ಸೌಲಭ್ಯಗಳನ್ನು ಒದಗಿಸುತ್ತಿದೆ. ದಕ್ಷಿಣ ಕನ್ನಡ ಮತ್ತು ಬೆಂಗಳೂರಿನಲ್ಲಿ ಕೋವಿಡ್‌ನಿಂದ ಬಾಧಿತರಾದ ಸರ್ಕಾರಿ ಶಾಲೆಗಳ ಮಕ್ಕಳಿಗೆ, ಚಿಕಿತ್ಸೆಗಾಗಿ ಹಣಕಾಸು ನೆರವು, ಆಹಾರ ಮತ್ತು ಔಷಧಗಳನ್ನು ಸಂಸ್ಥೆಯು ಒದಗಿಸುತ್ತಿದೆ. ಅಲ್ಲದೆ, ಬಡಕುಟುಂಬಗಳಲ್ಲಿನ ಗರ್ಭಿಣಿಯರು, ಪಿಂಚಣಿದಾರರು, ವಿಧವೆಯರು, ದೈಹಿಕ ಮತ್ತು ಮಾನಸಿಕ ಅಂಗವಿಕಲರಿಗೆ ಮೈಸೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುತ್ತಿದೆ.

ರೋಟರಿ ಬೆಂಗಳೂರು ಸೌತ್‌ವೆಸ್ಟ್ ಚಾರಿಟಬಲ್ ಟ್ರಸ್ಟ್

ಬೆಂಗಳೂರಿನಲ್ಲಿ ಕಳೆದ ಒಂದು ದಶಕದಿಂದ ರೋಟರಿ ಬೆಂಗಳೂರು ಸೌತ್‌ವೆಸ್ಟ್ ಚಾರಿಟಬಲ್ ಟ್ರಸ್ಟ್ ಆರೋಗ್ಯ ಚಿಕಿತ್ಸಾ ಸೇವೆಯನ್ನು ಒದಗಿಸುತ್ತಿದೆ. ಕಳೆದ ಹಲವು ವರ್ಷಗಳಿಂದ ಬೆಂಗಳೂರು ಕಿಡ್ನಿ ಫೌಂಡೇಷನ್‌ನಲ್ಲಿ ರೋಗಿಗಳಿಗೆ ಉಚಿತವಾಗಿ ಡಯಾಲಿಸಿಸ್ ಸೇವೆಯನ್ನು ಒದಗಿಸುತ್ತಿದೆ. ಕ್ಯಾನ್ಸರ್‌ನಿಂದ ಬಳಲುತ್ತಿದ್ದ 100ಕ್ಕೂ ಹೆಚ್ಚು ಜನರಿಗೆ ಕಿದ್ವಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ನೆರವು ಒದಗಿಸಿದೆ. ಕೋವಿಡ್ ಸಂದರ್ಭದಲ್ಲಿ ಈ ಸಂಸ್ಥೆಯು ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ಒದಗಿಸುವ ಆಸ್ಪತ್ರೆಗಳಿಗೆ ಎಚ್‌ಎನ್‌ಎಫ್‌ಸಿ ಮಷೀನ್‌ಗಳು, ಬಿಐಪಿಎಪಿ (BiPAP) ಮಷೀನ್‌ಗಳು, ವೆಂಟಿಲೇಟರ್‌ಗಳು, ಆಮ್ಲಜನಕ ಸಾಂದ್ರಕಗಳನ್ನು ನೀಡಿದೆ. ಹೆಚ್ಚಿನ, ಸರ್ಕಾರಿ ಆಸ್ಪತ್ರೆಗಳಿಗೆ ಸೌಲಭ್ಯಗಳನ್ನು ಒದಗಿಸಲು ಕಾರ್ಯನಿರತವಾಗಿದೆ. ಮುಂದಿನ ದಿನಗಳಲ್ಲೂ ಈ ಆಸ್ಪತ್ರೆಗಳು ಕೋವಿಡ್ ಸ್ಥಿತಿ ಎದುರಿಸಲು ಆಗುವಂತೆ ಸಜ್ಜುಗೊಳಿಸಲು ಅಗತ್ಯ ನೆರವು ಕಲ್ಪಿಸುವ ಉದ್ದೇಶವನ್ನು ಹೊಂದಿದೆ.



ರೋಟರಿ ಬೆಂಗಳೂರು ಲೇಕ್ ಸೈಡ್

ರೋಟರಿ ಬೆಂಗಳೂರು ಲೇಕ್ ಸೈಡ್ ಸಂಸ್ಥೆಯು ಬೆಂಗಳೂರಿನಲ್ಲಿ ಸಮುದಾಯ ಸೇವೆ ಮತ್ತು ಅಭಿವೃದ್ಧಿಗೆ ಒತ್ತು ನೀಡಿ ಪ್ರಮುಖವಾಗಿ ಕಾರ್ಯನಿರ್ವಹಿಸುತ್ತಿದೆ. ಕೋವಿಡ್ ಸಂದರ್ಭದಲ್ಲಿ ಸಂಸ್ಥೆಯು ಅಗತ್ಯವಿರುವ ಕುಟುಂಬಗಳಿಗೆ ಪಡಿತರ ಕಿಟ್ ಮತ್ತು ವೈದ್ಯಕೀಯ ಕಿಟ್‌ಗಳನ್ನು ವಿತರಿಸಿದೆ. ಅಲ್ಲದೆ, ಬೆಂಗಳೂರಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇರುವ ಮುಂಚೂಣಿ ಆರೋಗ್ಯ ಕಾರ್ಯಕರ್ತರಿಗೆ ಪಿಪಿಇ ಕಿಟ್‌ಗಳನ್ನು ವಿತರಿಸಿದೆ. ದೀರ್ಘಾವಧಿಯಲ್ಲಿ ಬೆಂಗಳೂರು, ಕೋಲಾರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಆಸ್ಪತ್ರೆಗಳು, ಕೋವಿಡ್ ಕೇರ್ ಕೇಂದ್ರಗಳಿಗೆ ವೆಂಟಿಲೇಟರ್‌ಗಳು, ಆಮ್ಲಜನಕ ಸಾಂದ್ರಕಗಳನ್ನು ಒದಗಿಸುವ ಗುರಿ ಹೊಂದಿದೆ.

ಕಾಪುಚಿನ್ ಕೃಷಿಕ್ ಸೇವಾ ಕೇಂದ್ರ

ಕಾಪುಚಿನ್ ಕೃಷಿಕ್ ಸೇವಾ ಕೇಂದ್ರವು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಗ್ರಾಮೀಣ ಭಾಗದ ಹಿಂದುಳಿದ ಸಮುದಾಯಗಳ ಸಬಲೀಕರಣ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ. ಕೋವಿಡ್ ಮೊದಲ ಅಲೆಯ ಅವಧಿಯಲ್ಲಿ ಈ ಸಂಸ್ಥೆಯು 836 ಕುಟುಂಬಗಳಿಗೆ ಆಹಾರ ಕಿಟ್‌ಗಳನ್ನು ಒದಗಿಸಿತ್ತು. ಅಲ್ಲದೆ, ಪಿಪಿಇ ಕಿಟ್‌ಗಳು, ಥರ್ಮಲ್ ಸ್ಕ್ಯಾನರ್‌ಗಳು, ಮಾಸ್ಕ್, ಗ್ಲೋವ್ಸ್‌ಗಳು, ಆಕ್ಸಿಮೀಟರ್‌ಗಳನ್ನು ತಾಲ್ಲೂಕು ಆಸ್ಪತ್ರೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒದಗಿಸಿದೆ. ಈಗ ಸಂಸ್ಥೆಯು 500 ಡ್ರೈಫುಡ್ ಕಿಟ್‌ಗಳು, ಪಿಪಿಇಗಳು, ಮಾಸ್ಕ್‌ಗಳು, ಗ್ಲೋವ್ಸ್‌ಗಳು, ಸ್ಯಾನಿಟೈಸರ್‌ಗಳು ಮತ್ತು ಮೆಡಿಕಲ್ ಕಿಟ್‌ಗಳನ್ನು ಸುಮಾರು 120 ರೋಗಿಗಳಿಗೆ ವಿತರಿಸಿದೆ. ತಾಲ್ಲೂಕು ಆಸ್ಪತ್ರೆಗಳ ಆರೋಗ್ಯದ ತಂಡದ ಜೊತೆಗೂಡಿ ಕೆಲಸ ಮಾಡಲಿದ್ದು, ಕೋವಿಡ್ ಪರೀಕ್ಷೆಗಳು ಮತ್ತು ಲಸಿಕೆ ಕಾರ್ಯಕ್ರಮವನ್ನು ಅಂಗವಿಕಲರು ಮತ್ತು ಅವರನ್ನು ನೋಡಿಕೊಳ್ಳುವವರಿಗಾಗಿ ಆಯೋಜಿಸಲಿದೆ. ಅಲ್ಲದೆ, ತಾಲ್ಲೂಕಿನಲ್ಲಿ ಕೋವಿಡ್ ಸೋಂಕಿನಿಂದಾಗಿ ಕುಟುಂಬಕ್ಕೆ ಆಧಾರವಾಗಿದ್ದ ವ್ಯಕ್ತಿಯನ್ನೇ ಕಳೆದುಕೊಂಡು ಬಾಧಿತವಾದ ಕುಟುಂಬಗಳಿಗೆ ನೆರವಾಗುವ ಯೋಜನೆಯನ್ನು ಹೊಂದಿದೆ.

ರೀಚ್

ರೀಚ್ (ರೂರಲ್ ಎನ್ವಿರಾನ್‌ಮೆಂಟಲ್ ಅವೇರ್‌ನೆಸ್ ಕಮ್ಯುನಿಟಿ ಹೆಲ್ಪ್) ಸಂಸ್ಥೆಯು ಬಾಗಲಕೋಟೆ ಜಿಲ್ಲೆಯಲ್ಲಿ ಪರಿಸರ, ಮಹಿಳಾ ಸಬಲೀಕರಣ ಮತ್ತು ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಕೋವಿಡ್–19ನ ಮೊದಲ ಅಲೆ ಸಂದರ್ಭದಲ್ಲಿ ರೀಚ್ ಸಂಸ್ಥೆಯು, ಮಹಿಳೆಯರು ಹೊಲಿದು ಸಿದ್ಧಪಡಿಸಿದ ಬಟ್ಟೆ ಮಾಸ್ಕ್‌ಗಳನ್ನು ಖರೀದಿಸಿ ಅವುಗಳನ್ನು ಬಾಗಲಕೋಟೆ ಜಿಲ್ಲೆಯಲ್ಲಿ 600 ಕುಟುಂಬಗಳು, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು, ಪೊಲೀಸ್ ಮತ್ತು ಇತರೆ ಮುಂಚೂಣಿ ಕಾರ್ಯಕರ್ತರಿಗೆ ವಿತರಿಸಿತ್ತು. ಅಲ್ಲದೆ, 500 ಕುಟುಂಬಗಳಿಗೆ ಆಹಾರ ಕಿಟ್ ಅನ್ನು ವಿತರಿಸಿದ್ದು.ಈಗ ಜಿಲ್ಲಾಡಳಿತದ ಜೊತೆಗೆ ನೋಡಲ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಕೋವಿಡ್ ರೋಗಿಗಳ ಕುರಿತ ಅಂಕಿ ಅಂಶ, ಮಾಹಿತಿಗಳನ್ನು ಸಂಗ್ರಹಿಸುತ್ತಿದೆ. ಬಾಧಿತ ಕುಟುಂಬಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ನೆರವಾಗುತ್ತಿದೆ. ಸಂಸ್ಥೆಯು ಪೌಷ್ಟಿಕ ಆಹಾರ, ಸ್ವಚ್ಛತಾ ಕಿಟ್‌ಗಳನ್ನು ಕೋವಿಡ್‌ನಿಂದ ಬಾಧಿತರಾದವರು, ಬಡಕುಟುಂಬಗಳ ಗರ್ಭಿಣಿಯರು, ಬಾಣಂತಿಯರಿಗೆ ಒದಗಿಸಿದೆ. ಪಿಪಿಇ, ಎನ್–95 ಮಾಸ್ಕ್, ಗ್ಲೋವ್ಸ್‌ಗಳು ಹಾಗೂ ಇತರೆ ಸುರಕ್ಷತಾ ಪರಿಕರಗಳು ಇದ್ದ ಕಿಟ್‌ಗಳನ್ನು ಸೋಂಕಿತರ ಆರೈಕೆಯಲ್ಲಿ ನಿರತರಾಗಿರುವವರಿಗೆ ಒದಗಿಸಿದೆ.ಅಲ್ಲದೆ, ಕೋವಿಡ್‌ನಿಂದಾಗಿ ಕುಟುಂಬಕ್ಕೆ ಆಧಾರವಾಗಿದ್ದವರನ್ನು ಕಳೆದುಕೊಂಡು ಸಂಕಷ್ಟದಲ್ಲಿರುವ ಕುಟುಂಬಗಳಿಗೆ ನೆರವಾಗಲು ಸಂಸ್ಥೆಯು ಉದ್ದೇಶಿಸಿದೆ.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 27 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 32 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3iaryCA**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in **ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.**

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಎನ್.ಕೆ.ರಾಘವೇಂದ್ರನ್,** 45, 3ನೇ ಮುಖ್ಯರಸ್ತೆ, ಗಂಗಾನಗರ ಎಕ್ಸ್‌ಟೆನ್ಷನ್, ಬೆಂಗಳೂರು	20,000
2	**ಸ್ಪ್ರಿಂಗ್ ಯಾಟ್ ವಾಟರ್ ಪೋಲೊ ಕ್ಲಬ್,** (ಷಣ್ಮುಗಂ ಸ್ಮರಣಾರ್ಥ) 258, ವಿಕ್ರಮಾದಿತ್ಯ ರಸ್ತೆ, ಲಕ್ಷ್ಮಿಪುರ, ಹನುಮಂತನಗರ	10,000
3	**ಸೋಮಶೇಖರ್ ರೆಡ್ಡಿ,** ಈ–104, ರಂಕಾ ಕಾರ್ನರ್ ಅಪಾರ್ಟ್‌ಮೆಂಟ್, 1ನೇ ಮುಖ್ಯ ರಸ್ತೆ, ಕೇಂಬ್ರಿಡ್ಜ್ ಲೇಔಟ್, ಹಲಸೂರು, ಬೆಂಗಳೂರು	10,000
4	**ಎಂ.ಎಸ್.ಲಕ್ಷ್ಮಿದೇವಮ್ಮ,** 3511/3512, 26/1, 7ನೇ ಅಡ್ಡರಸ್ತೆ, ಗಾಯತ್ರಿನಗರ, ರಾಜಾಜಿನಗರ 2ನೇ ಹಂತ, ಬೆಂಗಳೂರು	10,000
5	**ಚಂದ್ರಶೇಖರ್,** ನಂ 12, ಗಾಯತ್ರಿ ನಿಲಯ, 3ನೇ ಅಡ್ಡರಸ್ತೆ, ಕುವೆಂಪು ನಗರ, ರಾಮಮೂರ್ತಿ ನಗರ, ಬೆಂಗಳೂರು	10,000
6	**ನಾಗರಾಜ ಚಿಕ್ಕಣ್ಣ,** 54, 2ನೇ ಅಡ್ಡರಸ್ತೆ, ಬಿಮಾಜ್ಯೋತಿ ಎಲ್‌ಐಸಿ ಕಾಲೊನಿ, ಬಸವೇಶ್ವರನಗರ, ಬೆಂಗಳೂರು	10,000
7	**ಸಿಲಿಕಾನ್ ಸಿಟಿ ಪಬ್ಲಿಕ್ ಸ್ಕೂಲ್ ಮತ್ತು ಹಜರತ್ ಅಬು ಉಬೈದಾ ಬೈತುಮಾಲ್ ಟ್ರಸ್ಟ್,** ನಂ 3/1, ಎಚ್ ಕಾಲೊನಿ, ಇಂದಿರಾನಗರ 1ನೇ ಹಂತ, ಬೆಂಗಳೂರು	10,000
8	**ಜ್ಞಾನೇಶ್ವರ ಜಿ,** ನಂ 313, 3ನೇ ಅಡ್ಡರಸ್ತೆ, 5ನೇ ಬ್ಲಾಕ್, ಕೆಎಚ್‌ಬಿ ಕಾಲೊನಿ, ಕೋರಮಂಗಲ, ಬೆಂಗಳೂರು	10,000
9	**ಟಿ.ಎಸ್.ಚೇತನಾನಂದ್,** ನಂ 823/1, ತಿಳುವಳ್ಳಿ ಕಾಂಪೌಂಡ್, ರೇಣುಕಾ ಎಕ್ಸ್‌ಟೆನ್ಷನ್, ಪಿ.ಬಿ.ರಸ್ತೆ, ದಾವಣಗೆರೆ	5,000
10	**ಡಾ.ಎಂ.ಆರ್.ವಾರಿಣಿ,** ಜೆ.ಪಿ.ಆಸ್ಪತ್ರೆ, ನೆಲಮಂಗಲ	5,000
11	**ಡಾ.ಎನ್.ವಸಂತಕುಮಾರ್,** ನಿಸರ್ಗ ಕ್ಲಿನಿಕ್, ದ್ವಾರಕಾ ಪ್ಲಾಜಾ, ನೆಲಮಂಗಲ	5,000
12	**ರತ್ನಾಕರ್ ಬಾಗ್ಗಿ,** ಸಿ, 701, ಸಾಲಾರ್‌ಪುರಿಯ ಗ್ರೀನೇಜ್, ಬೊಮ್ಮನಹಳ್ಳಿ, ಹೊಸೂರು ಮುಖ್ಯರಸ್ತೆ, ಬೆಂಗಳೂರು	5,000
13	**ಡಾ.ಗುರುಬಸಪ್ಪ ಎಚ್.ಡಿ,** ಶಿವಕೃಪಾ, 2ನೇ ಮುಖ್ಯ ರಸ್ತೆ, ರಾಜರತ್ನಂ ರಸ್ತೆ , ಸರಸ್ವತಿಪುರ, ತುಮಕೂರು	5,000
14	**ಅಶ್ವಿನಿ ಶ್ರೀನಿವಾಸ್,** 690, 21ನೇ ಮುಖ್ಯ ರಸ್ತೆ, 11ನೇ ಅಡ್ಡರಸ್ತೆ, ಪದ್ಮನಾಭನಗರ, ಬೆಂಗಳೂರು	5,000
15	**ಪ್ರಭಾ ಎನ್.ರಾವ್,** 481/82, ರಂಕಾ ಹೈಟ್ಸ್, 4ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ದೊಮ್ಮಲೂರು ಬಡಾವಣೆ, ಬೆಂಗಳೂರು	5,000
16	**ಗಂಗಮ್ಮ ನರಸಿಂಹಯ್ಯ,** 1ಎ, 4ನೇ ಇ ಅಡ್ಡರಸ್ತೆ, ಕಾಮಾಕ್ಷಿಪಾಳ್ಯ, ಬೆಂಗಳೂರು	5,000
17	**ಬಿ.ಎಚ್.ಶಶಿಕಲಾ,** 39 ಮಾತೃಛಾಯಾ , 4ನೇ ಅಡ್ಡರಸ್ತೆ,ಸಿಂಹಾದ್ರಿ ಉತ್ತರಹಳ್ಳಿ, ಬೆಂಗಳೂರು	4,000
18	**ಅನಂತರಾಮನ್ ಟಿ.ಜಿ.** ಎಫ್.ನಂ 101, ಅಶೀಶ್ ಕ್ಯಾಸಲ್‌ಉರ್ವಾ, ಅಶೋಕನಗರ ರಸ್ತೆ, ಮಂಗಳೂರು	3,000
19	**ಬಸವರಾಜು ಎಚ್.ಆರ್.** 310–ಬಿ, ಪರಿವಾರ್ ಪೆಂಡಂಟ್ ಅಪಾರ್ಟ್‌ಮೆಂಟ್, 1ನೇ ಎ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಸುಪ್ರೀಂ ರೆಸಿಡೆನ್ಸಿ ಬಡಾವಣೆ, ಕೋಡಿಚಿಕ್ಕನಹಳ್ಳಿ, ಬೆಂಗಳೂರು	3,000
20	**ಸಿದ್ದಪ್ಪ ವಿಷ್ಣು ಪತಂಗೆ,** ಮಂಜುಶ್ರೀ, 27, ಗುರುಕುಲ ಹೌಸಿಂಗ್ ಕಾಲೊನಿ, ಖಾನಾಪುರ, ಬೆಳಗಾವಿ	2,500
21	**ಶಿವಯ್ಯ ಕೆ.** ಬೆಂಗಳೂರು	2,100
22	**ನಿರ್ಮಲಾ,** 4122, 2ನೇ ಮುಖ್ಯರಸ್ತೆ, ಬಿ–ಬ್ಲಾಕ್, ಸುಬ್ರಮಣ್ಯನಗರ, ಬೆಂಗಳೂರು	2,005
23	**ಲಲಿತಾ,** ನಿವೃತ್ತ ಶಿಕ್ಷಕಿ, ನಂ 20/3,1ನೇ ಮುಖ್ಯರಸ್ತೆ, ಎಂ.ಎಂ. ರಸ್ತೆ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು	2,001
24	**ಪಿ.ಶ್ರೀಧರನ್** ನಂ 264, 31ನೇ ವಾರ್ಡ್, ನೆಹರೂ ಕಾಲೊನಿ, ಪಿ.ಒ.ಲ್ಯಾಂಡ್‌ಮಾರ್ಕ್–ಹಳೆ ಬಾಲ್ದೋಟಾ ಕಚೇರಿ ಬಳಿ	2,000
25	**ಎಸ್.ಪುರುಷೋತ್ತಮ್,** ನಂ 589, 44ನೇ ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು	2,000
26	**ಎಸ್.ಜಯಂತಿ,** ನಂ 589, 44ನೇ ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು	2,000
27	**ಮಂಜಪ್ಪ ಎ.ಎಸ್,** ಶಿಕ್ಷಕ, ಸಿಂಚನ ನಿಲಯ, ವಿನಾಯಕನಗರ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ	1,100
28	**ವಿ.ಚಂದ್ರಶೇಖರ್,** ವೀಣಾ ಕಾಫಿ ವರ್ಕ್ಸ್, ವಿಡಿಯಾ ಸ್ಕೂಲ್ ಬಸ್ ಸ್ಟಾಪ್, ಹೆಸರಘಟ್ಟ ಮುಖ್ಯರಸ್ತೆ	1,008
29	**ಸಚಿನ್ ಹೆಗ್ಡೆ,** ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ಶೃಂಗೇರಿ	1,001
30	**ಕವಿತಾ ಬಿ.ಎಂ.** ಶ್ರೀ ಸಿದ್ದೇಶ್ವರ ನಿಲಯ, ಟಿ.ಆರ್.ನಗರ, 4ನೇ ಅಡ್ಡರಸ್ತೆ, ಎಡಬದಿ, ಹೊಸಮನೆ, ಭದ್ರಾವತಿ, ಶಿವಮೊಗ್ಗ	1,001
31	**ಎಸ್.ಕೆ.ಜಗದೀಶ್,** ನಂ 1628, ಎಸ್‌ಎಂವಿ ಬಡಾವಣೆ, 7ನೇ ಬ್ಲಾಕ್, ಬೆಂಗಳೂರು	1,001
32	**ರೊಸೆಟ್ಟಾ ಥಾಮಸ್,** ಸಹಕಾರನಗರ, ಬೆಂಗಳೂರು	1,001
33	**ವಿ.ಪ್ರೇಮಾ,** ನಂ 20, ಎಂಐಜಿ–1, ಕೆಎಚ್‌ಬಿ ಕಾಲೊನಿ, 2ನೇ ಮುಖ್ಯರಸ್ತೆ, ಕೆನರಾ ಬ್ಯಾಂಕ್ ಸಮೀಪ, ಹೊಸಕೋಟೆ	1,001
34	**ಆರ್.ನರಸಿಂಹ ಶೆಟ್ಟಿ,** ನಂ 11/12, ಶ್ರೀ ಕೃಷ್ಣ ನಿಲಯ, ಕೆಂಗೇರಿ ರೈಲ್ವೆ ನಿಲ್ದಾಣದ ಎದುರು, ರೈಲ್ವೆ ನಗರ, ಹರ್ಷ ಬಡಾವಣೆ, ಕೆಂಗೇರಿ, ಬೆಂಗಳೂರು	1,001
35	**ಶ್ರೀನಿವಾಸ ಡಿ.** ಕಾಂತೇನಹಳ್ಳಿ, ಕೆ.ಆರ್.ನಗರ ಟೌನ್	1,000
36	**ಎನ್.ರಾಜಣ್ಣ,** ರಾಜಾಜಿನಗರ, ಬೆಂಗಳೂರು	1,000
37	**ಶ್ರೀವಿದ್ಯಾ ಎಂ,** ನ್ಯೂಸಿಟಿ ರೆಜೆನ್ಸಿ ಬಡಾವಣೆ, ಕಿತ್ತಿಗನೂರು ಗ್ರಾಮ, ಕೆ.ಆರ್.ಪುರ (ಅಂಚೆ), ಬೆಂಗಳೂರು	1,000
38	**ಸಂಗಮೇಶ್ ಕಾಶಿನಾಥ್ ಸಾರಂಗಮಠ,** ನವನಗರ, ಹುನಗುಂದ	1,000
39	**ಶಾಹೀನ್ ಯೂಸುಫ್ ,** 718, ಸಿಎಂಎಚ್ ರಸ್ತೆ, ಇಂದಿರಾನಗರ, ಬೆಂಗಳೂರು	1,000
40	**ತಾಹಿರ್ ಅಹ್ಮದ್,** 718, ಸಿಎಂಎಚ್ ರಸ್ತೆ, ಇಂದಿರಾನಗರ, ಬೆಂಗಳೂರು	1,000
41	**ಜಿಶಾನ್ ಇಲ್ಯಾಸ್,** 718, ಸಿಎಂಎಚ್ ರಸ್ತೆ, ಇಂದಿರಾನಗರ, ಬೆಂಗಳೂರು	1,000
42	**ಮೊಹಮ್ಮದ್ ಮುನಾವರ್ ಅಲಾಂ,** 718, ಸಿಎಂಎಚ್ ರಸ್ತೆ, ಇಂದಿರಾನಗರ, ಬೆಂಗಳೂರು	1,000
43	**ಕೌಸರ್ ಯೂಸುಫ್ ,** 718, ಸಿಎಂಎಚ್ ರಸ್ತೆ, ಇಂದಿರಾನಗರ, ಬೆಂಗಳೂರು	1,000
44	**ಗೌಹರ್ ಯೂಸುಫ್ ,** 718, ಸಿಎಂಎಚ್ ರಸ್ತೆ, ಇಂದಿರಾನಗರ, ಬೆಂಗಳೂರು	1,000
45	**ಜಾಕಿಯಾ ಯೂಸುಫ್ ,** 718, ಸಿಎಂಎಚ್ ರಸ್ತೆ, ಇಂದಿರಾನಗರ, ಬೆಂಗಳೂರು	1,000
46	**ಮೊಹಮ್ಮದ್ ಯೂಸುಫ್ ,** 718, ಸಿಎಂಎಚ್ ರಸ್ತೆ, ಇಂದಿರಾನಗರ, ಬೆಂಗಳೂರು	1,000
47	**ಕೃಷ್ಣ ದಾಮೋದರ ಜೋಶಿ,** ನಂ 75, ರವಿನಗರ, ಗೋಕುಲ ರಸ್ತೆ, ಹುಬ್ಬಳ್ಳಿ	1,000
48	**ಪೂರ್ಣಿಮಾ ಪ್ರಸಾದ್,** ಶಾಸ್ತ್ರಿನಗರ, 2ನೇ ಮುಖ್ಯರಸ್ತೆ, ಟಿ.ಆರ್.ನಗರ ಅಂಚೆ, ಬೆಂಗಳೂರು	1,000
49	**ಆನಂದಕುಮಾರ್ ಬಿ.ಎ.** 60/6, 11ನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಕಂದಾಯ ಬಡಾವಣೆ, ಪದ್ಮನಾಭನಗರ, ಬೆಂಗಳೂರು	1,000
50	**ದೇವ ಸುಂದರ್ ಗೋರೆ,** ಯಾದಗಿರಿ	1,000

ಪ್ರಜಾವಾಣಿ facebook LIVE fb.com/prajavani.net

ವಿದ್ಯಾರ್ಥಿಗಳ ಪ್ರಶ್ನೆ.. ತಜ್ಞರ ಉತ್ತರ!

ವಿಶ್ವನಾಥ ನಾಗಠಾಣ, ಎಮ್‌ಎಸ್ಸಿ
ಅಧ್ಯಯನ ನಿರ್ದೇಶಕರು - ಐ ಐ ಸಿ ಇ ಕರಿಯರ್ ಕನಸಲ್ಟಂಟ್, ಧಾರವಾಡ

19 ಜೂನ್ 2021, ಮಂಗಳವಾರ ಸಂಜೆ 5 ರಿಂದ 6

ನೋಂದಣಿ ಕಡ್ಡಾಯ

ಐ ಎ ಎಸ್/ ಕೆ ಎ ಎಸ್/ಸ್ಪರ್ಧಾತ್ಮಕ ಪರೀಕ್ಷೆಗಳ ವಿವರಗಳು, ತಯಾರಿ ವಿಧಾನಗಳು, ಗಣಿತ, ರಿಸೋನಿಂಗ್ ವಿಷಯಗಳು

ಈ ವಿಷಯಗಳ ಮಾಹಿತಿ ನೀಡಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು ನೋಂದಣಿ ಸಂದರ್ಭದಲ್ಲೇ ಕಳುಹಿಸಿ, FB ಲೈವ್ ಮೂಲಕ ಉತ್ತರ ಪಡೆದುಕೊಳ್ಳಿ.

ಅಂತಿಮ ದಿನಾಂಕ ಮಂಗಳವಾರ 15 ಜೂನ್ 2021

https://bit.ly/3yK3kVD

ನೋಂದಣಿ ಕಡ್ಡಾಯವಾಗಿದ್ದು, ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

ಅಪಘಾತ: ನಟ ಸಂಚಾರಿ ವಿಜಯ್ ಸ್ಥಿತಿ ಗಂಭೀರ

ಒಂದನೇ ಪುಟದಿಂದ

'ಔಷಧಿ ತರಲೆಂದು ಸ್ನೇಹಿತನ ಜೊತೆ ವಿಜಯ್ ಬೈಕ್‌ನಲ್ಲಿ ಹೋಗಿದ್ದಾಗಲೇ ಅಪಘಾತ ಸಂಭವಿಸಿರುವುದಾಗಿ ಸಹೋದರ ಸಿದ್ದೇಶ್ ಕುಮಾರ್ ದೂರು ನೀಡಿದ್ದಾರೆ. ನವೀನ್ ನಿರ್ಲಕ್ಷ್ಯದಿಂದಲೇ ಈ ಅಪಘಾತ ಸಂಭವಿಸಿದೆ. ಅವರಿಬ್ಬರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ಹೇಳಿಕೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ಪೊಲೀಸರು ಹೇಳಿದರು.

ಮೆದುಳಿನಲ್ಲಿ ರಕ್ತಸ್ರಾವ: 'ವಿಜಯ್ ಮೆದುಳಿನಲ್ಲಿ ರಕ್ತಸ್ರಾವ ಆಗಿದ್ದು, ಅದಕ್ಕಾಗಿ ಭಾನುವಾರ ಬೆಳಿಗ್ಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ತುರ್ತು ನಿಗಾ ಘಟಕದಲ್ಲಿ ಜೀವ ರಕ್ಷಕದ ನೆರವಿನಿಂದ ಉಸಿರಾಡುತ್ತಿರುವ ಅವರಿಗೆ ಚಿಕಿತ್ಸೆ ಮುಂದುವರಿದಿದೆ. ಆರೋಗ್ಯ ಸ್ಥಿತಿ ಸುಧಾರಣೆ ಬಗ್ಗೆ ಸದ್ಯಕ್ಕೆ ಏನೂ ಹೇಳಲಾಗದು' ಎಂದು ಅಪೋಲೊ ಆಸ್ಪತ್ರೆಯ ನರರೋಗ ತಜ್ಞ ಅರುಣ್ ನಾಯಕ್ ಹೇಳಿದರು.

ರಂಗಭೂಮಿ ಮೂಲಕ ಸಿನಿಮಾ ಕ್ಷೇತ್ರ ಪ್ರವೇಶಿಸಿದ್ದ ಸಂಚಾರಿ ವಿಜಯ್, 'ನಾನು ಅವನಲ್ಲ ಅವಳು', 'ಹರಿವು' ಸೇರಿದಂತೆ ಇನ್ನೂ ಕೆಲವು ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ.

'ಲಾಕ್‌ಡೌನ್ ಜಾರಿಯಲ್ಲಿದ್ದರೂ ಸಂಚಾರ': 'ನಗರದಲ್ಲಿ ರಾತ್ರಿ ಲಾಕ್‌ಡೌನ್ ಜಾರಿಯಲ್ಲಿದ್ದು, ಇದೇ ಸಂದರ್ಭದಲ್ಲೇ ನಟ ವಿಜಯ್ ಬೈಕ್‌ನಲ್ಲಿ ಸಂಚರಿಸಿದ್ದಾರೆ. ಸ್ನೇಹಿತನ ಮನೆಗೆ ಊಟಕ್ಕೆ ಹೋಗಿದ್ದ ಅವರು, ಅಲ್ಲಿಂದ ವಾಪಸು ಮನೆಗೆ ಬರುವಾಗ ಅಪಘಾತವಾಗಿರುವುದಾಗಿ ಕೆಲ ಆಪ್ತರೇ ಹೇಳುತ್ತಿದ್ದಾರೆ. ಈ ಬಗ್ಗೆಯೂ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಎಫ್‌ಪಿಐ: ₹ 13,424 ಕೋಟಿ ಬಂಡವಾಳ ಒಳಹರಿವು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಜೂನ್ 1 ರಿಂದ 11ರವರೆಗಿನ ಅವಧಿಯಲ್ಲಿ ದೇಶದ ಬಂಡವಾಳ ಮಾರುಕಟ್ಟೆಯಲ್ಲಿ ₹ 13,424 ಕೋಟಿ ಹೂಡಿಕೆ ಮಾಡಿದ್ದಾರೆ.

ಹೂಡಿಕೆದಾರರು ಷೇರುಪೇಟೆಯಲ್ಲಿ ₹ 15,520 ಕೋಟಿ ಹೂಡಿಕೆ ಮಾಡಿದ್ದರೆ, ಸಾಲಪತ್ರ ಮಾರುಕಟ್ಟೆಯಿಂದ ₹ 2,096 ಕೋಟಿ ಹಿಂದಕ್ಕೆ ಪಡೆದಿದ್ದಾರೆ. ಹೀಗಾಗಿ ಒಟ್ಟಾರೆ ಹೂಡಿಕೆ ಮೊತ್ತ ₹ 13,424 ಕೋಟಿಗಳಷ್ಟಾಗಿದೆ.

ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಮತ್ತು ಆರ್ಥಿಕ ಚಟುವಟಿಕೆಗಳು ಆದಷ್ಟೂ ಬೇಗನೆ ಆರಂಭವಾಗುವ ಭರವಸೆಯಿಂದಾಗಿ ಈ ಪ್ರಮಾಣದಲ್ಲಿ ಹೂಡಿಕೆ ಮಾಡಿದ್ದಾರೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಐ.ಟಿ, ಹಣಕಾಸು ಮತ್ತು ಇಂಧನ ವಲಯಗಳಲ್ಲಿ ವಿದೇಶಿ ಹೂಡಿಕೆ ಕೇಂದ್ರೀಕೃತವಾಗಿದೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಹೇಳಿದ್ದಾರೆ.

ಕಡಿಮೆ ಬಡ್ಡಿದರ, ರಫ್ತು ಮುನ್ನೋಟ ಉತ್ತಮವಾಗಿರುವುದು ಹಾಗೂ ಜಾಗತಿಕ ಆರ್ಥಿಕ ಚೇತರಿಕೆಯು ಭಾರತದ ಆರ್ಥಿಕತೆಯ ಪುನಶ್ಚೇತನಕ್ಕೆ ಪೂರಕವಾಗಿವೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಕಂಪನಿಗಳ ನಾಲ್ಕನೇ ತ್ರೈಮಾಸಿಕದ ಫಲಿತಾಂಶಗಳು ಆರ್ಥಿಕತೆಯು ಮತ್ತೆ ಚೇತರಿಕೆ ಹಾದಿಗೆ ಮರಳುತ್ತಿದೆ ಎನ್ನುವುದನ್ನು ಸೂಚಿಸುತ್ತಿವೆ. ಈ ಕಾರಣದಿಂದಾಗಿ ಜೂನ್‌ನಲ್ಲಿ ಒಳಹರಿವು ಕಂಡುಬಂದಿದೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಮುಖ್ಯ ಹೂಡಿಕೆ ವಿಶ್ಲೇಷಕ ವಿ.ಕೆ.ವಿಜಯಕುಮಾರ್ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹550
12 ಮೊಟ್ಟೆಗೆ ₹72
ಮೈಸೂರು
100 ಮೊಟ್ಟೆಗೆ ₹550

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹315-345
ದ್ವಿತಳಿ (ಬಿ.ವಿ) ₹339-505

ಮನೆಯ ಮುಖ್ಯಸ್ಥ ಮೃತಪಟ್ಟಾಗ ಹಣಕಾಸು ನಿರ್ವಹಣೆ ಹೇಗೆ?

ಹಣಕಾಸು ಸಾಕ್ಷರತೆ
ಪ್ರಮೋದ್ ಬಿ.ಪಿ.

ಕೋವಿಡ್ ಸಾಂಕ್ರಾಮಿಕವು ಎಷ್ಟೋ ಜನರ ಬದುಕನ್ನು ಮೂರಾಬಟ್ಟೆ ಮಾಡಿದೆ, ಪುಟ್ಟ ಮಕ್ಕಳನ್ನು ಅನಾಥರನ್ನಾಗಿಸಿದೆ, ಕುಟುಂಬಗಳನ್ನು ಬೀದಿಗೆ ತಳ್ಳಿದೆ. ಈ ಮಹಾಮಾರಿ ಸೃಷ್ಟಿಸಿರುವ ನೋವು ಊಹಿಸಲಸಾಧ್ಯ. ಕೋವಿಡ್‌ನಿಂದಾಗಿ ಅಥವಾ ಇತರ ಯಾವುದೋ ಕಾರಣದಿಂದಾಗಿ ಮನೆಯ ಯಜಮಾನ/ಯಜಮಾನಿ ಮೃತಪಟ್ಟಾಗ ಆ ಕುಟುಂಬಕ್ಕೆ ದಿಕ್ಕು ತೋಚದಂತಹ ಸ್ಥಿತಿ ಎದುರಾಗುತ್ತದೆ. ಮನೆಯ ಮುಖ್ಯಸ್ಥರು ಹಠಾತ್ ಸಾವಿಗೀಡಾದಾಗ ಕುಟುಂಬದವರಿಗೆ ಎರಡು ರೀತಿಯ ನಷ್ಟ ಉಂಟಾಗುತ್ತದೆ. ಭಾವನಾತ್ಮಕ ನಷ್ಟ ಮತ್ತು ಆರ್ಥಿಕ ನಷ್ಟ.

ಭಾವನಾತ್ಮಕ ನಷ್ಟ ತುಂಬಿಕೊಡಲು ಯಾರಿಂದಲೂ ಸಾಧ್ಯವಿಲ್ಲ. ಆದರೆ, ಕೆಲವು ಹೆಜ್ಜೆಗಳನ್ನು ಸರಿಯಾಗಿ ಇರಿಸಿದರೆ ಆರ್ಥಿಕ ನಷ್ಟವನ್ನು ಒಂದಷ್ಟು ಕಡಿಮೆ ಮಾಡಿಕೊಳ್ಳಬಹುದು. ಮನೆಯ ಮುಖ್ಯಸ್ಥ ಸಾವನ್ನಪ್ಪಿದಾಗ ಹಣಕಾಸಿನ ವಿಚಾರದಲ್ಲಿ ನಿರ್ವಹಿಸಬೇಕಿರುವ ಜವಾಬ್ದಾರಿಗಳ ಬಗ್ಗೆ ಮಾಹಿತಿ ಇಲ್ಲಿದೆ.

1. ಮರಣ ಪ್ರಮಾಣ ಪತ್ರ ಬೇಗ ಪಡೆಯಿರಿ: ವ್ಯಕ್ತಿ ಮೃತಪಟ್ಟ 21 ದಿನಗಳ ಒಳಗಾಗಿ ಸ್ಥಳೀಯ ಆಡಳಿತ ಸಂಸ್ಥೆಗೆ, ಸಾವನ್ನಪ್ಪಿದ ವ್ಯಕ್ತಿಯ ಹೆಸರು ಮತ್ತು ಇತರ ದಾಖಲೆಗಳನ್ನು ನೀಡಿ ಮರಣ ಪ್ರಮಾಣ ಪತ್ರ ಪಡೆದುಕೊಳ್ಳಬೇಕು. ನಿಧನರಾದ ವ್ಯಕ್ತಿಯ ವಿಮೆ ಕ್ಲೇಮ್ ಸಲ್ಲಿಕೆಗೆ, ಬ್ಯಾಂಕ್ ಖಾತೆಯಲ್ಲಿನ ಹಣ ಪಡೆಯಲು, ಮ್ಯೂಚುವಲ್ ಫಂಡ್, ಷೇರು ಹೂಡಿಕೆಗಳನ್ನು ವರ್ಗಾಯಿಸಲು, ಮೃತಪಟ್ಟ ವ್ಯಕ್ತಿಯ ಹೆಸರಿನಲ್ಲಿರುವ ಆಸ್ತಿ ಮಾರಾಟ ಮಾಡಲು ಹೀಗೆ ಅನೇಕ ಕೆಲಸಗಳಿಗೆ ಮರಣ ಪ್ರಮಾಣ ಪತ್ರ ಕೇಳುತ್ತಾರೆ. ಮರಣ ಪ್ರಮಾಣ ಪತ್ರದಲ್ಲಿ ಎಲ್ಲ ವಿವರಗಳು ಸರಿ ಇವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

2. ಉಯಿಲು (ವಿಲ್) ಮಾಡಿದ್ದಾರಾ?: ವ್ಯಕ್ತಿಯ ನಿಧನದ ನಂತರ, ಆತನ ಆಸ್ತಿ ಯಾರಿಗೆ ಸಲ್ಲಬೇಕು ಎಂದು ತಿಳಿಸಿಕೊಡುವ ದಾಖಲೆಯೇ ಉಯಿಲು ಅಥವಾ ವಿಲ್. ಮೃತಪಟ್ಟ ವ್ಯಕ್ತಿ ವಿಲ್ ಬರೆದಿಟ್ಟಿದ್ದರೆ ಅದರಲ್ಲಿ ಹೇಳಿರುವಂತೆ ಆಸ್ತಿ ಹಂಚಿಕೆಯಾಗಬೇಕಾಗುತ್ತದೆ. ವಿಲ್ ಇಲ್ಲವೆಂದಾದರೆ ಕಾನೂನಿನ ಅನ್ವಯ ಆಸ್ತಿಯ ಪಾಲಾಗುತ್ತದೆ. ವಿಲ್ ಇಲ್ಲದಿದ್ದಾಗ ಕಾನೂನುಬದ್ಧ ಉತ್ತರಾಧಿಕಾರಿ ಪ್ರಮಾಣಪತ್ರ (Succession Certificate) ಪಡೆಯಬೇಕಾಗುತ್ತದೆ. ಈ ಕೆಲಸಕ್ಕೆ ವಕೀಲರ ನೆರವು ಪಡೆಯುವುದು ಒಳಿತು.

3. ದಾಖಲೆಗಳನ್ನು ಒಟ್ಟುಗೂಡಿಸಿ, ಮಾಹಿತಿ ಒದಗಿಸಿ, ನಾಮಿನಿ ಬಗ್ಗೆ ತಿಳಿಯಿರಿ: ಮೃತಪಟ್ಟ ವ್ಯಕ್ತಿಯ ಹೆಸರಿನಲ್ಲಿರುವ ಎಲ್ಲ ದಾಖಲೆಗಳನ್ನು ಒಟ್ಟುಗೂಡಿಸುವ ಕೆಲಸ ಜರೂರಾಗಿ ಆಗಬೇಕು. ಜೀವ ವಿಮೆ, ಆರೋಗ್ಯ ವಿಮೆ, ವಾಹನ ವಿಮೆ, ವಿವಿಧ ಹೂಡಿಕೆಗಳು, ಸಾಲದ ಕಂತುಗಳು, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, ನೀರಿನ ಬಿಲ್, ವಿದ್ಯುತ್ ಬಿಲ್, ಎಲ್‌ಪಿಜಿ ನೋಂದಣಿ, ಆಸ್ತಿ ದಾಖಲೆಗಳು ಹೀಗೆ ಎಲ್ಲವನ್ನೂ ಪ್ರತ್ಯೇಕಿಸಿಕೊಳ್ಳಬೇಕು. ಎಲ್ಲಿಗೆ ಹಣ ಸಂದಾಯವಾಗಬೇಕು, ಎಲ್ಲಿಂದ ಹಣ ಬರಬೇಕಿದೆ ಎನ್ನುವುದನ್ನು ಅರಿತುಕೊಳ್ಳಬೇಕು. ನಂತರ ಆಯಾ ಸಂಸ್ಥೆಗಳಿಗೆ ನಿರ್ದಿಷ್ಟ ವ್ಯಕ್ತಿ ನಿಧನರಾಗಿರುವ ಬಗ್ಗೆ ಮಾಹಿತಿ ನೀಡಬೇಕು. ಕ್ಲೇಮ್ ಸಲ್ಲಿಸಲು, ಸಾಲದ ಬಾಕಿ ಪಾವತಿಸಲು ಮುಂತಾದ ಕಾರಣಗಳಿಗೆ ವ್ಯವಹರಿಸಬೇಕಿರುವುದರಿಂದ ವ್ಯಕ್ತಿಯ ನಿಧನದ ಬಗ್ಗೆ ಮಾಹಿತಿ ನೀಡುವುದು ಅಗತ್ಯ. ಇನ್ನು, ಬ್ಯಾಂಕ್ ಖಾತೆ, ವಿಮೆ, ಪಿಪಿಎಫ್, ಇಪಿಎಫ್, ಮ್ಯೂಚುವಲ್ ಫಂಡ್, ಷೇರು, ಎನ್‌ಪಿಎಸ್ ಮುಂತಾದ ಹೂಡಿಕೆಗಳಿದ್ದರೆ ಅವುಗಳಿಗೆ ನಾಮಿನಿ (ನಾಮ ನಿರ್ದೇಶನ) ಮಾಡಿದ್ದಾರಾ ಎಂಬುದನ್ನು ಗಮನಿಸಬೇಕು. ಇಲ್ಲವೆಂದಾದರೆ ಕಾನೂನು ಸಲಹೆ ಪಡೆದು ಮುಂದುವರಿಯಿರಿ.

4. ವಿಮೆ ಕ್ಲೇಮ್, ನಾಮಿನಿ ಅರ್ಜಿ ಸಲ್ಲಿಸಿ: ವಿಮೆ ಕ್ಲೇಮ್ ನೀಡಲು ವಿಮಾ ಕಂಪನಿಗಳು ಸುಮಾರು 45 ದಿನಗಳನ್ನು ತೆಗೆದುಕೊಳ್ಳುತ್ತವೆ. ಹಾಗಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕ್ಲೇಮ್ ಅರ್ಜಿ ಸಲ್ಲಿಸಬೇಕು. ಪಿಪಿಎಫ್, ಎನ್‌ಪಿಎಸ್, ಇಪಿಎಫ್, ಮ್ಯೂಚುವಲ್ ಫಂಡ್ ಮತ್ತು ಷೇರು ಹೂಡಿಕೆಗಳ ಹಣವನ್ನು ನಾಮಿನಿಗಳು ಪಡೆದುಕೊಳ್ಳುವುದಕ್ಕೂ ಕೆಲವು ಅರ್ಜಿಗಳನ್ನು ಸಲ್ಲಿಸಬೇಕಾಗುತ್ತದೆ. ಸಂಬಂಧಪಟ್ಟ ಇಲಾಖೆಗಳ ವೆಬ್‌ಸೈಟ್‌ನಲ್ಲಿ ಕ್ಲೇಮ್ ಮಾಹಿತಿ ಸಿಗುತ್ತದೆ.

5. ಸಾಲದ ಜವಾಬ್ದಾರಿ: ಜಂಟಿ ಖಾತೆಯಲ್ಲಿ ಮನೆ ಸಾಲ ಪಡೆದಿದ್ದು ಮುಖ್ಯ ಅರ್ಜಿದಾರ ಸಾವನ್ನಪ್ಪಿದರೆ ಸಹ ಅರ್ಜಿದಾರನಿಗೆ ಸಾಲದ ಹೊಣೆ ವರ್ಗಾವಣೆಯಾಗುತ್ತದೆ. ಸಹ ಅರ್ಜಿದಾರ ಸಾಲ ಕಟ್ಟುವುದಿಲ್ಲ ಎಂದರೆ ಬ್ಯಾಂಕಿನವರು ಕಾನೂನಿನ ಮೊರೆ ಹೋಗಬಹುದು. ಸಾಲಕ್ಕೆ ಒಬ್ಬನೇ ಅರ್ಜಿದಾರನಿದ್ದರೆ ವಿಲ್ ಅನುಷ್ಠಾನಕ್ಕೆ ತರುವ ವ್ಯಕ್ತಿಗೆ ಸಾಲ ತೀರಿಸುವ ಜವಾಬ್ದಾರಿ ಇರುತ್ತದೆ. ವಿಲ್ ಬರೆದಿಲ್ಲ ಎಂದರೆ ಕೋರ್ಟ್, ಆಡಳಿತಾಧಿಕಾರಿಯೊಬ್ಬರನ್ನು ನೇಮಿಸಿ ಸಮಸ್ಯೆಗೆ ಪರಿಹಾರ ಸೂಚಿಸುವಂತೆ ಹೇಳುತ್ತದೆ.

6. ಎಲ್ಲ ದಾಖಲೆಗಳಲ್ಲಿ ಹೆಸರು ಬದಲಿಸಿ: ಮನೆಯ ಮುಖ್ಯಸ್ಥರು ಮೃತಪಟ್ಟ ನಂತರದಲ್ಲಿ ಎಲ್ಲ ದಾಖಲೆಗಳನ್ನು ಉತ್ತರಾಧಿಕಾರಿಯ ಹೆಸರಿಗೆ ವರ್ಗಾಯಿಸಿಕೊಳ್ಳಬೇಕಾಗುತ್ತದೆ. ಆಸ್ತಿ ಪತ್ರ, ನೀರಿನ ಬಿಲ್, ವಿದ್ಯುತ್ ಬಿಲ್, ಆಸ್ತಿ ತೆರಿಗೆ ದಾಖಲೆಗಳು, ವಾಹನ ವಿಮೆ, ವಾಹನ ನೋಂದಣಿ, ಆರೋಗ್ಯ ವಿಮೆ ಮುಂತಾದ ದಾಖಲೆಗಳಲ್ಲಿ ಈ ತಿದ್ದುಪಡಿ ಅಗತ್ಯ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಸತತ 4ನೇ ವಾರ ಗಳಿಕೆ ಕಂಡ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ನಾಲ್ಕನೇ ವಾರ ಗಳಿಕೆ ಕಂಡಿವೆ. ಕೋವಿಡ್ ಪ್ರಕರಣಗಳಲ್ಲಿ ಇಳಿಕೆ, ಮುಂಗಾರಿನ ಶುಭಾರಂಭ, ಲಸಿಕೆ ನೀಡುವಲ್ಲಿ ಪ್ರಗತಿ ಮತ್ತು ವೇಗದ ಆರ್ಥಿಕ ಚೇತರಿಕೆ ನಿರೀಕ್ಷೆ ಸೇರಿ ಹಲವು ಅಂಶಗಳು ಜಿಗಿತಕ್ಕೆ ಕಾರಣವಾಗಿವೆ. 52,474 ಅಂಶಗಳಿಗೆ ಏರಿಕೆ ಕಂಡಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.71ರಷ್ಟು ಗಳಿಕೆ ಕಂಡಿದೆ. 15,799 ಅಂಶಗಳಿಗೆ ಹೆಚ್ಚಳ ಕಂಡಿರುವ ನಿಫ್ಟಿ ಶೇ 0.82ರಷ್ಟು ಏರಿದೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಅತಿ ಹೆಚ್ಚು ಅಂದರೆ ಶೇ 4.5ರಷ್ಟು ಜಿಗಿದಿದೆ. ನಿಫ್ಟಿ ಮಾಧ್ಯಮ ವಲಯ ಶೇ 3.5ರಷ್ಟು ಸುಧಾರಿಸಿದೆ. ನಿಫ್ಟಿ ಫಾರ್ಮಾ ವಲಯ ಶೇ 2.5ರಷ್ಟು ಹೆಚ್ಚಳವಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,738.22 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 823.54 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಪವರ್ ಗ್ರಿಡ್ ಶೇ 9ರಷ್ಟು, ಎನ್‌ಟಿಪಿಸಿ ಶೇ 6.5ರಷ್ಟು, ಕೋಲ್ ಇಂಡಿಯಾ ಶೇ 6.5ರಷ್ಟು, ಎಚ್‌ಸಿಎಲ್ ಟೆಕ್ ಶೇ 5ರಷ್ಟು, ಟೆಕ್ ಮಹೀಂದ್ರ ಶೇ 5.5ರಷ್ಟು, ಟಿಸಿಎಸ್ ಶೇ 4ರಷ್ಟು ಇನ್ಫೊಸಿಸ್ ಶೇ 4.5ರಷ್ಟು, ಟಾಟಾ ಮೋಟರ್ಸ್ ಶೇ 5ರಷ್ಟು, ಟಾಟಾ ಕನ್ಸ್ಯೂಮರ್ ಶೇ 4ರಷ್ಟು, ಟಾಟಾ ಸ್ಟೀಲ್ ಶೇ 3ರಷ್ಟು ಮತ್ತು ಟೈಟಾನ್ ಶೇ 3ರಷ್ಟು ಹೆಚ್ಚಳವಾಗಿವೆ. ಎಚ್‌ಡಿಎಫ್‌ಸಿ ಶೇ 2.5ರಷ್ಟು, ಬಜಾಜ್ ಫಿನ್‌ಸರ್ವ್ ಶೇ 2ರಷ್ಟು, ಬಜಾಜ್ ಆಟೋ ಶೇ 2ರಷ್ಟು ಮತ್ತು ಒಎನ್‌ಜಿಸಿ ಶೇ 2ರಷ್ಟು ಇಳಿಕೆ ಕಂಡಿವೆ.

ಮುನ್ನೋಟ: ಕೋಲ್ ಇಂಡಿಯಾ, ಐಡಿಎಫ್‌ಸಿ, ಗ್ರೀನ್ ಪ್ಲೇ, ಈಸ್ ಮೈ ಟ್ರಿಪ್, ಎಲ್‌ಐಸಿ ಹೌಸಿಂಗ್ ಫೈನಾನ್ಸ್, ಎಚ್‌ಸಿಜಿ, ಪವರ್ ಗ್ರಿಡ್, ವರ್ಲ್ ಪೂಲ್, ಲೆಮನ್ ಟ್ರೀ, ಎನ್‌ಟಿಪಿಸಿ ಸೇರಿ ಪ್ರಮುಖ ಕಂಪನಿಗಳು ಈ ವಾರ ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಷೇರುಪೇಟೆ ಸತತ ನಾಲ್ಕು ವಾರ ಹೆಚ್ಚಳ ಕಂಡು ಸಾರ್ವಕಾಲಿಕ ಏರಿಕೆ ದಾಖಲಿಸಿದ್ದರೂ ಇದೇ ವೇಗದಲ್ಲಿ ಸೂಚ್ಯಂಕಗಳು ಮುಂದುವರಿಯುವ ಸಾಧ್ಯತೆ ಕಡಿಮೆ. ಸದ್ಯಕ್ಕೆ ಪೇಟೆಯಲ್ಲಿ ಏರಿಳಿತದ ಹಾದಿ ಇದ್ದೇ ಇರಲಿದೆ.

ಈ ವಾರ ಷೇರುಪೇಟೆಗೆ ನಾಲ್ಕು ಕಂಪನಿಗಳ ಐಪಿಒ

ಮುಖ್ಯಾಂಶಗಳು
- ಸೆಬಿ ಒಪ್ಪಿಗೆಗೆ ಕಾದಿರುವ 26 ಐಪಿಒಗಳು
- ಈ ವರ್ಷದಲ್ಲಿ ಈವರೆಗೆ 17 ಕಂಪನಿಗಳಿಂದ ₹ 17,503 ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಈ ವಾರ ನಾಲ್ಕು ಕಂಪನಿಗಳು ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ (ಐಪಿಒ) ಮುಕ್ತವಾಗಿಸಲಿದ್ದು, ಒಟ್ಟಾರೆ ₹ 9,123 ಕೋಟಿ ಬಂಡವಾಳ ಸಂಗ್ರಹವಾಗುವ ನಿರೀಕ್ಷೆಇದೆ.

ಷೇರುಪೇಟೆಗಳಲ್ಲಿ ಇರುವ ಮಾಹಿತಿಯ ಪ್ರಕಾರ, ಶ್ಯಾಮ್ ಮೆಟಾಲಿಕ್ಸ್ ಆ್ಯಂಡ್ ಎನರ್ಜಿ ಲಿಮಿಟೆಡ್ ಮತ್ತು ಸೋನಾ ಬಿಎಲ್‌ಡಬ್ಲ್ಯು ಪ್ರಿಸಿಷನ್ ಫೋರ್ಜಿಂಗ್ಸ್ (ಸೋನಾ ಕಾಮ್‌ಸ್ಟಾರ್ಸ್) ಕಂಪನಿಗಳ ಐಪಿಒ ಸೋಮವಾರದಿಂದ ಆರಂಭವಾಗಲಿದೆ. ಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಮತ್ತು ದೊಡ್ಲಾ ಡೇರಿ ಕಂಪನಿಗಳ ಐಪಿಒ ಬುಧವಾರದಿಂದ ಆರಂಭವಾಗಲಿದೆ.

ಕ್ಲೀನ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಜುಲೈ ತಿಂಗಳ ಮೊದಲ ವಾರದಲ್ಲಿ ಷೇರುಪೇಟೆ ಪ್ರವೇಶಿಸುವ ನಿರೀಕ್ಷೆ ಇದೆ. ಇಂಡಿಯಾ ಪೆಸ್ಟಿಸೈಡ್ಸ್ ಕಂಪನಿಯು ಇದೇ ತಿಂಗಳು ಅಥವಾ ಜುಲೈನಲ್ಲಿ ಐಪಿಒ ಬಿಡುಗಡೆ ಮಾಡುವ ಸಾಧ್ಯತೆ ಇದೆ ಎಂದು ಏಂಜಲ್ ಬ್ರೋಕಿಂಗ್‌ನ ಷೇರು ಸಂಶೋಧನಾ ಸಹಾಯಕ ಯಶ್ ಗುಪ್ತಾ ತಿಳಿಸಿದ್ದಾರೆ.

ಶ್ಯಾಮ್ ಮೆಟಾಲಿಕ್ಸ್ ಆ್ಯಂಡ್ ಎನರ್ಜಿ ಕಂಪನಿಯು ಐಪಿಒ ಮೂಲಕ ₹ 909 ಕೋಟಿ ಸಂಗ್ರಹಿಸುವ ನಿರೀಕ್ಷೆ ಇಟ್ಟುಕೊಂಡಿದೆ. ಪ್ರತಿ ಷೇರಿನ ಬೆಲೆ ₹ 303–306ರಂತೆ ನಿಗದಿಪಡಿಸಲಾಗಿದೆ. ಸೋಮವಾರದಿಂದ ಬುಧವಾರದವರೆಗೆ ಷೇರು ಖರೀದಿಗೆ ಅವಕಾಶ ಇರಲಿದೆ.

ಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಕಂಪನಿಯು ಐಪಿಒದಿಂದ ₹ 2,144 ಕೋಟಿ ಸಂಗ್ರಹಿಸುವ ನಿರೀಕ್ಷೆ ಹೊಂದಿದೆ. ಬುಧವಾರದಿಂದ ಶುಕ್ರವಾರದವರೆಗೆ ಖರೀದಿಗೆ ಅವಕಾಶ ಇರಲಿದೆ. ಸೋನಾ ಕಾಮ್‌ಸ್ಟಾರ್ಸ್ ಕಂಪನಿಯು ₹ 5,550 ಕೋಟಿ ಮೊತ್ತದ ಹಾಗೂ ದೊಡ್ಲಾ ಡೇರಿ ₹ 520 ಕೋಟಿ ಮೊತ್ತದ ಐಪಿಒ ಬಿಡುಗಡೆ ಮಾಡಲಿವೆ.

ರುಚಿ ಸೋಯಾ: ಪತಂಜಲಿ ಆಯುರ್ವೇದ ಸಂಸ್ಥೆಯ ಒಡೆತನದಲ್ಲಿ ಇರುವ ರುಚಿ ಸೋಯಾ ಕಂಪನಿಯು ₹ 4,300 ಕೋಟಿ ಮೊತ್ತದ ಐಪಿಒಗಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ದಾಖಲೆಪತ್ರಗಳನ್ನು ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ.

ಕೈಲಿ ಮೆಕಿಯೊನ್ – ಎಎಫ್‌ಪಿ ಚಿತ್ರ

ಕೈಲಿ ಮೆಕಿಯೊನ್ ವಿಶ್ವ ದಾಖಲೆ

ಅಡಿಲೇಡ್ (ಎಪಿ): ಆಸ್ಟ್ರೇಲಿಯಾದ ಈಜುಪಟು ಕೈಲಿ ಮೆಕಿಯೊನ್ ಅವರು ಮಹಿಳೆಯರ 100 ಮೀಟರ್ ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ವಿಶ್ವದಾಖಲೆ ಬರೆದಿದ್ದಾರೆ. ಆಸ್ಟ್ರೇಲಿಯನ್ ಒಲಿಂಪಿಕ್ಸ್ ಟ್ರಯಲ್ಸ್‌ನಲ್ಲಿ ಭಾನುವಾರ ಅವರು ಈ ಸಾಧನೆ ಮಾಡಿದರು.

19 ವರ್ಷದ ಮೆಕಿಯೊನ್ 57.45 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಅಮೆರಿಕದ ರೇಗನ್ ಸ್ಮಿತ್ ಅವರು 2019ರಲ್ಲಿ ನಿರ್ಮಿಸಿದ್ದ ದಾಖಲೆಯನ್ನು (57.57 ಸೆಕೆಂಡು) ಅಳಿಸಿಹಾಕಿದರು.

ಮೆಕಿಯೊನ್ ಕಳೆದ ತಿಂಗಳು 100 ಮೀ. ಬ್ಯಾಕ್‌ಸ್ಟ್ರೋಕ್‌ಅನ್ನು 57.63 ಸೆಕೆಂಡುಗಳಲ್ಲಿ ಕೊನೆಗೊಳಿಸುವುದರೊಂದಿಗೆ ಕಾಮನ್‌ವೆಲ್ತ್ ಮತ್ತು ಆಸ್ಟ್ರೇಲಿಯನ್ ದಾಖಲೆ ಸ್ಥಾಪಿಸಿದ್ದರು.

ಫ್ರೆಂಚ್ ಓಪನ್: ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಾಸ್ ಕನಸು ಭಗ್ನ; ಬರ್ಬೊರಾ – ಕಟೆರಿನಾಗೆ ಪ್ರಶಸ್ತಿ

ನೊವಾಕ್‌ಗೆ ದಾಖಲೆಯ ಚಾಂಪಿಯನ್ ಪಟ್ಟ

ಪ್ಯಾರಿಸ್ (ರಾಯಿಟರ್ಸ್): ಮೊತ್ತ ಮೊದಲ ಗ್ರ್ಯಾನ್ ಸ್ಲಾಂ ಪ್ರಶಸ್ತಿ ಗೆಲ್ಲುವ ಕನಸಿನೊಂದಿಗೆ ಕಣಕ್ಕೆ ಇಳಿದ ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಾಸ್ ಅವರನ್ನು ಮಣಿಸಿದ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಚಾಂಪಿಯನ್ ಆದರು.

ಭಾನುವಾರ ರಾತ್ರಿ ಇಲ್ಲಿ ನಡೆದ ಐದು ಸೆಟ್‌ಗಳ ಜಿದ್ದಾಜಿದ್ದಿಯ ಫೈನಲ್ ಪಂದ್ಯದಲ್ಲಿ ನೊವಾಕ್ 6-7 (6), 2-6, 6-3, 6-2, 6-4ರಲ್ಲಿ ಗೆಲುವು ಸಾಧಿಸಿದರು. ಈ ಮೂಲಕ ಎಲ್ಲ ಗ್ರ್ಯಾನ್‌ಸ್ಲಾಂ ಟೂರ್ನಿಗಳಲ್ಲಿ ಎರಡು ಬಾರಿ ಪ್ರಶಸ್ತಿ ಗೆದ್ದ ಮೊದಲ ಆಟಗಾರ ಎಂಬ ದಾಖಲೆ ತಮ್ಮದಾಗಿಸಿಕೊಂಡರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ ಒಂದನೇ ಸ್ಥಾನದಲ್ಲಿರುವ ಜೊಕೊವಿಚ್ ಐದನೇ ಶ್ರೇಯಾಂಕದ ಸ್ಟೆಫನೊಸ್‌ಗೆ ಮೊದಲ ಎರಡು ಸೆಟ್‌ಗಳನ್ನು ಬಿಟ್ಟುಕೊಟ್ಟರೂ ನಂತರ ಚೇತರಿಸಿಕೊಂಡರು. ಮುಂದಿನ ಮೂರೂ ಸೆಟ್‌ಗಳನ್ನು ಏಕಪಕ್ಷೀಯವಾಗಿ ಗೆದ್ದುಕೊಂಡರು. ಇದು ಅವರು ಗೆದ್ದ ಒಟ್ಟಾರೆ 19ನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿಯಾಗಿದೆ. ಇನ್ನು ಒಂದು ಪ್ರಶಸ್ತಿ ಗೆದ್ದರೆ ಪುರುಷರ ವಿಭಾಗದಲ್ಲಿ ಅತಿಹೆಚ್ಚು ಗ್ರ್ಯಾನ್‌ಸ್ಲಾಂ ಗೆದ್ದಿರುವ ರೋಜರ್ ಫೆಡರರ್ ಮತ್ತು ರಫೆಲ್ ನಡಾಲ್ ದಾಖಲೆಯನ್ನು ಸರಿಗಟ್ಟಲಿದ್ದಾರೆ.

ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ನೊವಾಕ್ ಜೊಕೊವಿಚ್– ರಾಯಿಟರ್ಸ್ ಚಿತ್ರ

ಬರ್ಬೊರಾ-ಕಟೆರಿನಾಗೆ ಪ್ರಶಸ್ತಿ ಗರಿ: ಜೆಕ್ ಗಣರಾಜ್ಯದ ಬರ್ಬೊರಾ ಕ್ರೆಚಿಕೊವಾ ಟೂರ್ನಿಯ ಮಹಿಳಾ ವಿಭಾಗದಲ್ಲಿ 'ಡಬಲ್' ಸಾಧನೆ ಮಾಡಿದರು. ಶನಿವಾರ ಸಿಂಗಲ್ಸ್ ವಿಭಾಗದ ಚಾಂಪಿ ಯನ್ ಆಗಿದ್ದ ಅವರು ಭಾನುವಾರ ತಮ್ಮದೇ ದೇಶದ ಕಟೆರಿನಾ ಸಿನಿಯಾ ಕೊವಾ ಜೊತೆಗೂಡಿ ಡಬಲ್ಸ್ ವಿಭಾಗದಲ್ಲೂ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ರನ್ನರ್ ಅಪ್ ಪ್ರಶಸ್ತಿಯೊಂದಿಗೆ ಸ್ಟೆಫನೊಸ್ ಸಿಟ್ಸಿಪಾಸ್ –ರಾಯಿಟರ್ಸ್ ಚಿತ್ರ

ಫೈನಲ್ ಹಣಾಹಣಿಯಲ್ಲಿ ಜೆಕ್ ಆಟಗಾರ್ತಿಯರು 6-4, 6-2ರಿಂದ ಪೋಲೆಂಡ್‌ನ ಇಗಾ ಶ್ವಾಟೆಕ್ ಹಾಗೂ ಅಮೆರಿಕದ ಬೆಥನಿ ಮೆಟೆಕ್ ಸ್ಯಾಂಡ್ಸ್ ಅವರನ್ನು ಪರಾಭವಗೊಳಿಸಿದರು.

2000 ಇಸ್ವಿಯ ಬಳಿಕ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಮಹಿಳಾ ಸಿಂಗಲ್ಸ್ ಮತ್ತು ಡಬಲ್ಸ್ ಎರಡೂ ಟ್ರೋಫಿಗಳನ್ನು ಗೆದ್ದ ಮೊದಲ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಬರ್ಬೊರಾ ಕ್ರೆಚಿಕೊವಾ ಪಾತ್ರರಾಗಿದ್ದಾರೆ.

2000ರಲ್ಲಿ ಫ್ರಾನ್ಸ್‌ನ ಮೇರಿ ಪಿಯರ್ಸ್ ಈ ಶ್ರೇಯ ಗಳಿಸಿದ್ದರು.

25 ವರ್ಷದ ಕ್ರೆಚಿಕೊವಾ ಶನಿವಾರ ತಮ್ಮ ಮೊದಲ ಗ್ರ್ಯಾನ್‌ಸ್ಲಾಮ್ ಗೆಲ್ಲುವ ಮೂಲಕ ಸಿಂಗಲ್ಸ್ ರ್‍ಯಾಂಕಿಂಗ್‌ನಲ್ಲಿ 15ನೇ ಸ್ಥಾನ ಗಳಿಸಿದ್ದರು. ಸೋಮವಾರ ಪ್ರಕಟವಾಗುವ ಡಬಲ್ಸ್ ರ್‍ಯಾಂಕಿಂಗ್‌ನಲ್ಲಿ ಅವರು ಅಗ್ರಸ್ಥಾನಕ್ಕೇರಲಿದ್ದಾರೆ.

2020ರ ಆವೃತ್ತಿಯ ಸಿಂಗಲ್ಸ್ ವಿಭಾಗದ ಚಾಂಪಿಯನ್ ಸ್ವಾಟೆಕ್ ಮತ್ತು ಮ್ಯಾಟೆಕ್ ಸ್ಯಾಂಡ್ಸ್ ಮೂರನೇ ಬಾರಿ ಒಟ್ಟಾಗಿ ಕಣಕ್ಕಿಳಿದಿದ್ದರು. ಸಿನಿಯಾಕೊವಾ ಅವರ ವೇಗದ ಚಲನೆ ಹಾಗೂ ಕ್ರೆಚಿಕೊವಾ ಅವರ ಪ್ರಬಲ ಬೇಸ್‌ಲೈನ್ ಹೊಡೆತಗಳ ಮುಂದೆ ಅವರ ಆಟ ನಡೆಯಲಿಲ್ಲ.

ಸುದ್ದಿ 2 ನಿಮಿಷ

ಲಿಥುವೇನಿಯನ್ ಬ್ಯಾಡ್ಮಿಂಟನ್: ಫೈನಲ್‌ಗೆ ಭಾರತದ ಮಾಳವಿಕ

ಕೌನಾಸ್, ಲಿಥುವೇನಿಯ (ಪಿಟಿಐ): ಭಾರತದ ಮಾಳವಿಕ ಬಾನ್ಸೊದ್ ಇಲ್ಲಿ ನಡೆಯುತ್ತಿರುವ ಆರ್‌ಎಸ್‌ಎಲ್ ಲಿಥುವೇನಿಯನ್ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್ ಪ್ರವೇಶಿಸಿದ್ದಾರೆ. ಭಾನುವಾರ ನಡೆದ ಸೆಮಿಫೈನಲ್‌ನಲ್ಲಿ ಅವರು ಫ್ರಾನ್ಸ್‌ನ ಅನಾ ತತ್ರನೋವಾ ಎದುರು 21-13, 21-10ರಲ್ಲಿ ಜಯ ಗಳಿಸಿದರು.

ಮೂರನೇ ಶ್ರೇಯಾಂಕದ ಭಾರತದ ಆಟಗಾರ್ತಿ ಪ್ರಶಸ್ತಿಗಾಗಿ ನಾಲ್ಕನೇ ಶ್ರೇಯಾಂಕದ ರಾಚೆಲ್ ಡರಾಗ್ ಎದುರು ಸೆಣಸುವರು. ಮೊದಲ ಸುತ್ತಿನಲ್ಲಿ ಮಾಳವಿಕ ಸ್ಥಳೀಯ ಆಟಗಾರ್ತಿ ವಿಲ್ಟೆ ಪೌಲಾಸ್ಕೇಟ್ ಎದುರು 21-6, 21-10ರಲ್ಲಿ ಜಯ ಗಳಿಸಿದ್ದರು. ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಇಸ್ರಾಯೆಲ್‌ನ ಹೇಲಿ ನೇಮನ್ ಎದುರು 21-10, 21-11ರಲ್ಲಿ ಜಯ ಗಳಿಸಿದ್ದ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಆಸ್ಟ್ರಿಯಾದ ಕ್ಯಾತ್ರಿನ್ ನೆಡಲ್ಕ್ ವಿರುದ್ಧ 21-12, 21-9ರಲ್ಲಿ ಗೆಲುವು ಸಾಧಿಸಿದ್ದರು.

ಚೇತರಿಸಿಕೊಳ್ಳುತ್ತಿರುವ ಫಫ್

ಅಬುಧಾಬಿ: ಕಂಕಷನ್ ಗಾಯಕ್ಕೆ ಒಳಗಾಗಿದ್ದ ದಕ್ಷಿಣ ಆಫ್ರಿಕಾ ಬ್ಯಾಟ್ಸ್‌ಮನ್ ಫಫ್ ಡು ಪ್ಲೆಸಿ ಚೇತರಿಸಿಕೊಳ್ಳುತ್ತಿದ್ದಾರೆ. ಈ ವಿಷಯವನ್ನು ಸ್ವತಃ ಫಫ್ ಭಾನುವಾರ ತಿಳಿಸಿದ್ದಾರೆ. ಆಸ್ಪತ್ರೆಯಿಂದ ಹೋಟೆಲ್‌ಗೆ ಮರಳಿರುವುದಾಗಿಯೂ ಅವರು ವಿವರಿಸಿದ್ದಾರೆ.

ಪಾಕಿಸ್ತಾನ ಸೂಪರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕ್ವೆಟ್ಟಾ ಗ್ಲೇಡಿಯೇಟರ್ಸ್ ಪರ ಆಡಿದ್ದ ಅವರು ಶನಿವಾರ ರಾತ್ರಿ ಪೇಶಾವರ್ ಜಲ್ಮಿ ಎದುರಿನ ತಂಡದ ಎದುರಿನ ಪಂದ್ಯದಲ್ಲಿ ಗಾಯಗೊಂಡಿದ್ದರು. ಬೌಂಡರಿ ಬಳಿ ಚೆಂಡನ್ನು ತಡೆಯುವ ಪ್ರಯತ್ನದ ವೇಳೆ ಮತ್ತೊಬ್ಬ ಆಟಗಾರ ಮೊಹಮ್ಮದ್ ಹೊಸ್ನೈನ್‌ಗೆ ಡಿಕ್ಕಿ ಹೊಡೆದ ಕಾರಣ ಅವರ ತಲೆಗೆ ಪೆಟ್ಟುಬಿದ್ದಿತ್ತು.

ನೋವಿನಿಂದ ಒದ್ದಾಡುತ್ತಿದ್ದ ಅವರಿಗೆ ತಂಡದ ವೈದ್ಯರು ಪ್ರಥಮ ಚಿಕಿತ್ಸೆ ನೀಡಿದ್ದರು. ಡಗ್ ಔಟ್‌ಗೆ ನಡೆದುಕೊಂಡೇಹೋಗಿದ್ದ ಅವರನ್ನು ನಂತರ ಸ್ಯಾನಿಂಗ್‌ಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಪಂದ್ಯದಲ್ಲಿ ಅವರ ಬದಲಿಗೆ ಸೈಮ್ ಆಯೂಬ್ ಆಡಿದ್ದರು. ಇದರೊಂದಿಗೆ ಎರಡು ದಿನಗಳಲ್ಲಿ ಗ್ಲೇಡಿಯೇಟರ್ ತಂಡದ ಇಬ್ಬರು ಕಂಕಷನ್‌ಗೆ ಒಳಗಾದಂತಾಗಿದೆ.

ವಿಶ್ವನಾಥನ್ ಆನಂದ್‌ಗೆ ಕಠಿಣ ಸ್ಪರ್ಧೆ ನೀಡಿದ ಕಿಚ್ಚ ಸುದೀಪ್

ಬೆಂಗಳೂರು: ಐದು ಬಾರಿ ವಿಶ್ವ ಚೆಸ್ ಚಾಂಪಿಯನ್ ಆಗಿರುವ ವಿಶ್ವನಾಥನ್ ಆನಂದ್ ಅವರಿಗೆ ನಟ ಕಿಚ್ಚ ಸುದೀಪ್ ಚೆಸ್ ಸ್ಪರ್ಧೆಯಲ್ಲಿ ಕಠಿಣ ಸ್ಪರ್ಧೆಯನ್ನೇ ನೀಡಿದ್ದಾರೆ!

ಕೋವಿಡ್ ಪರಿಹಾರ ನಿಧಿ ಸಂಗ್ರಹಕ್ಕಾಗಿ ಅಕ್ಷಯಪಾತ್ರ ಪ್ರತಿಷ್ಠಾನದ ಸಹಯೋಗದಲ್ಲಿ ಚೆಸ್. ಕಾಮ್ ಭಾನುವಾರ ಆಯೋಜಿಸಿದ್ದ 'ಚೆಕ್‌ಮೇಟ್ ಕೋವಿಡ್' ಸೆಲೆಬ್ರಿಟಿ ಆವೃತ್ತಿಯಲ್ಲಿ, ನಟರಾದ ಸುದೀಪ್, ರಿತೇಷ್ ದೇಶ್‌ಮುಖ್, ಕ್ರಿಕೆಟಿಗ ಯಜುವೇಂದ್ರ ಚಾಹಲ್ ಸೇರಿದಂತೆ ಕೆಲ ಗಣ್ಯರೊಂದಿಗೆ 30 ನಿಮಿಷಗಳ ಟೈಂಔಟ್‌ನಲ್ಲಿ ಆನಂದ್ ಏಕಕಾಲದಲ್ಲಿ ಆಡಿದರು.

ಟೈಂಔಟ್‌ನಲ್ಲಿ ಸುದೀಪ್ ಅವರು ವಿಶ್ವನಾಥನ್ ಆನಂದ್ ಅವರೆದುರು ಸೋತರು. ಗೆದ್ದ ಆನಂದ್ ಅವರ ಕ್ಲಾಕ್‌ನಲ್ಲಿ 46 ಸೆಕೆಂಡ್‌ಗಳಷ್ಟೇ ಉಳಿದಿದ್ದವು.

ಆಟದ ಬಳಿಕ ಸ್ಪರ್ಧಿಗಳ ಜೊತೆ ಆನಂದ್ ಸಂವಾದ ನಡೆಸಿದರು. ಈ ವೇಳೆ ಮಾತನಾಡಿದ ಸುದೀಪ್, 'ನನ್ನ ಹಂತದ ಸ್ಪರ್ಧಿಗಳೊಂದಿಗೆ ಚೆನ್ನಾಗಿ ಆಡುತ್ತೇನೆ. ಆದರೆ ದಿಗ್ಗಜರ ಜೊತೆ ಆಡುವುದೇ ನಮಗೆ ಸಿಕ್ಕ ದೊಡ್ಡ ಅವಕಾಶ. ಇಲ್ಲಿ ಯಾರು ಗೆಲ್ಲುತ್ತಾರೆ ಸೋಲುತ್ತಾರೆ ಎನ್ನುವುದು ಮುಖ್ಯವಲ್ಲ. ಯಾರು ಹೆಚ್ಚು ಹೊತ್ತು ಆನಂದ್ ವಿರುದ್ಧ ಕಣದಲ್ಲಿ ಇರುತ್ತಾರೆ ಎನ್ನುವುದು ಮುಖ್ಯ. ಆನ್‌ಲೈನ್ ಚೆಸ್ ಬಗ್ಗೆ ನನಗೇ ಯಾವುದೇ ಮಾಹಿತಿ ಇರಲಿಲ್ಲ. ನಮಗೆ ಸೋಲುವ ಭಯವಿರಲಿಲ್ಲ, ಏಕೆಂದರೆ ನಾವು ಆಡುತ್ತಿರುವುದು ವಿಶ್ವನಾಥನ್ ಆನಂದ್ ವಿರುದ್ಧ. ಈ ಅನುಭವ ಜೀವನಪೂರ್ತಿ ಇರಲಿದೆ. ಈ ಆಟ ಕೇವಲ ಮನರಂಜನೆಗಾಗಿ ಆಗಿರಲಿಲ್ಲ. ಒಂದು ಉದ್ದೇಶ ಇದರ ಹಿಂದೆ ಇತ್ತು' ಎಂದರು.

ಸುದೀಪ್

ಆನಂದ್

ಇನ್ನು ಎರಡನೇ ಹಂತದಲ್ಲಿ ವಿಶ್ವನಾಥನ್ ಆನಂದ್, ಬಾಲಿವುಡ್ ನಟ ಅಮೀರ್ ಖಾನ್ ವಿರುದ್ಧವೂ ಆಡಿದರು. 'ವಿಶ್ವನಾಥನ್ ಆನಂದ್ ಅವರ ಜೀವನದ ಬಗ್ಗೆ ಸಿನಿಮಾ ಆದರೆ ಅದರಲ್ಲಿ ನಟಿಸುತ್ತೀರಾ?' ಎನ್ನುವ ಜನರ ಪ್ರಶ್ನೆಗೆ ಉತ್ತರಿಸಿದ ಅಮೀರ್ ಖಾನ್, 'ಖಂಡಿತವಾಗಿಯೂ.. ಅದಕ್ಕಾಗಿ ಎದುರು ನೋಡುತ್ತಿದ್ದೇನೆ' ಎಂದರು.

ಆನ್‌ಲೈನ್‌ನಲ್ಲಿ ನಡೆದ ಈ ಸ್ಪರ್ಧೆಯನ್ನು 20 ಸಾವಿರಕ್ಕೂ ಅಧಿಕ ಜನರು ವೀಕ್ಷಿಸಿದ್ದು, ₹6.65 ಲಕ್ಷ ದೇಣಿಗೆ ಸಂಗ್ರಹವಾಗಿದೆ.

ಇಂಗ್ಲೆಂಡ್ ಎದುರಿನ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಭರ್ಜರಿ ಗೆಲುವು

ನ್ಯೂಜಿಲೆಂಡ್‌ಗೆ ಸರಣಿ ಜಯ

ಬರ್ಮಿಂಗ್‌ಹ್ಯಾಮ್ (ರಾಯಿಟರ್ಸ್): ನ್ಯೂಜಿಲೆಂಡ್ ತಂಡ ಎರಡನೇ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ತಂಡವನ್ನು ಭಾನುವಾರ ಎಂಟು ವಿಕೆಟ್‌ಗಳಿಂದ ಮಣಿಸಿ ಎರಡು ಪಂದ್ಯಗಳ ಸರಣಿ 1–0ಯಿಂದ ಗೆದ್ದುಕೊಂಡಿದೆ.

ಗೆಲುವಿಗೆ ಕೇವಲ 38 ರನ್‌ಗಳ ಗುರಿ ಪಡೆದಿದ್ದ ಪ್ರವಾಸಿ ತಂಡವು ಎರಡು ವಿಕೆಟ್ ಕಳೆದುಕೊಂಡು ಜಯದ ಸಂಭ್ರಮ ಆಚರಿಸಿತು. ಈ ಮೂಲಕ 1999ರ ಬಳಿಕ ಇಂಗ್ಲೆಂಡ್ ನೆಲದಲ್ಲಿ ಸರಣಿ ಜಯಿಸಿದ ಸಾಧನೆ ಮಾಡಿತು.

ಪಂದ್ಯದ ಮೂರನೇ ದಿನವಾದ ಶನಿವಾರ ಇಂಗ್ಲೆಂಡ್ ಎರಡನೇ ಇನಿಂಗ್ಸ್‌ನಲ್ಲಿ 9 ವಿಕೆಟ್ ಕಳೆದುಕೊಂಡು 122 ರನ್ ಗಳಿಸಿತ್ತು. ಭಾನುವಾರ ಮೊದಲ ಓವರ್‌ನ ಮೊದಲ ಎಸೆತದಲ್ಲಿ ಕೊನೆಯ ವಿಕೆಟ್ ಕಳೆದುಕೊಂಡಿತು. ಉತ್ತರವಾಗಿ ನ್ಯೂಜಿಲೆಂಡ್ 33 ರನ್‌ಗಳಾಗುವಷ್ಟರಲ್ಲಿ ಎರಡು ವಿಕೆಟ್ ಕಳೆದುಕೊಂಡಿತು. ಹಂಗಾಮಿ ನಾಯಕ ಟಾಮ್ ಲಥಾಮ್ ಮತ್ತು ರಾಸ್ ಟೇಲರ್ ತಂಡವನ್ನು ಗೆಲುವಿನ ದಡ ಸೇರಿಸಿದರು.

ಟ್ರೋಫಿಯೊಂದಿಗೆ ಸಂಭ್ರಮಿಸಿದ ನ್ಯೂಜಿಲೆಂಡ್ ತಂಡದ ಆಟಗಾರರು– ರಾಯಿಟರ್ಸ್ ಚಿತ್ರ

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್:ಇಂಗ್ಲೆಂಡ್: 101 ಓವರ್‌ಗಳಲ್ಲಿ 303: **ನ್ಯೂಜಿಲೆಂಡ್** 119.1 ಓವರ್‌ಗಳಲ್ಲಿ 388: ಎರಡನೇ ಇನಿಂಗ್ಸ್: **ಇಂಗ್ಲೆಂಡ್:** 41.1 ಓವರ್‌ಗಳಲ್ಲಿ 122: **ನ್ಯೂಜಿಲೆಂಡ್:** 10.5 ಓವರ್‌ಗಳಲ್ಲಿ 2 ವಿಕೆಟ್‌ಗೆ 41 (ಟಾಮ್ ಲಥಾಮ್ ಔಟಾಗದೆ 23, ವಿಲ್ ಯಂಗ್ 8; ಸ್ಟುವರ್ಟ್ ಬ್ರಾಡ್ 13ಕ್ಕೆ 1, ಒಲಿ ಸ್ಟೋನ್ 5ಕ್ಕೆ 1). ಫಲಿತಾಂಶ: ನ್ಯೂಜಿಲೆಂಡ್ ತಂಡಕ್ಕೆ ಎಂಟು ವಿಕೆಟ್‌ಗಳ ಜಯ. 1–0ಯಿಂದ ಸರಣಿ ಗೆಲುವು.

ಮಿಲ್ಖಾ ಸಿಂಗ್ ಪತ್ನಿ ನಿರ್ಮಲ್ ಕೌರ್ ಕೋವಿಡ್‌ನಿಂದ ನಿಧನ

ಚಂಡೀಗಢ(ಪಿಟಿಐ): ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್ ಅವರ ಪತ್ನಿ, ಭಾರತ ಮಹಿಳಾ ವಾಲಿಬಾಲ್ ತಂಡದ ಮಾಜಿ ನಾಯಕಿ ನಿರ್ಮಲ್ ಕೌರ್ (85) ಅವರು ಭಾನುವಾರ ನಿಧನರಾದರು.

ನಿರ್ಮಲ್ ಕೌರ್

ಅವರಿಗೆ ಪತಿ ಮಿಲ್ಖಾಸಿಂಗ್, ಒಬ್ಬ ಮಗ, ಗಾಲ್ಫ್ ತಾರೆ ಜೀವ್ ಮಿಲ್ಖಾಸಿಂಗ್ ಮತ್ತು ಮೂವರು ಪುತ್ರಿಯರು ಇದ್ದಾರೆ.

'ಕೋವಿಡ್ ವಿರುದ್ಧ ಸೆಣಸುತ್ತಿದ್ದ ನಿರ್ಮಲ್ ಭಾನುವಾರ ಸಂಜೆ 4 ಗಂಟೆ ಸುಮಾರಿನಲ್ಲಿ ನಿಧನರಾದರು. ನಂತರ ನಡೆದ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಮಿಲ್ಖಾ ಸಿಂಗ್ ಅವರಿಗೆ ಸಾಧ್ಯವಾಗಲಿಲ್ಲ ಎಂಬುದು ವಿಷಾದಕರ ಸಂಗತಿ. ಮಿಲ್ಖಾ ಅವರು ಇನ್ನೂ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಕುಟುಂಬದ ಮೂಲಗಳು ಮಾಹಿತಿ ನೀಡಿವೆ.

ಐಸಿಸಿ ಹಾಲ್ ಆಫ್ ಫೇಮ್‌ಗೆ ವಿನೂ

ದುಬೈ (ಪಿಟಿಐ): ಭಾರತದ ವಿನೂ ಮಂಕಡ್ ಸೇರಿದಂತೆ ವಿಶ್ವದ ಹತ್ತು ಮಂದಿ ದಿಗ್ಗಜ ಕ್ರಿಕೆಟಿಗರಿಗೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಹಾಲ್ ಆಫ್ ಫೇಮ್ ಗೌರವ ನೀಡಲಾಗಿದೆ.

ಇದೇ 18ರಂದು ಸೌತಾಂಪ್ಟನ್‌ನಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ನಡೆಯಲಿದೆ. ಇದರ ಅಂಗವಾಗಿ 1918ರಿಂದ 2016ರವರೆಗಿನ ಐದು ಕಾಲಘಟ್ಟಗಳಲ್ಲಿ ತಲಾ ಇಬ್ಬರನ್ನು ಆಯ್ಕೆ ಮಾಡಲಾಗಿದೆ.

1918ಕ್ಕೂ ಮೊದಲು ದಕ್ಷಿಣ ಆಫ್ರಿಕಾದ ಆಬ್ರೆ ಫಾಕ್ನರ್ ಮತ್ತು ಆಸ್ಟ್ರೇಲಿಯಾದ ಮಾಂಟಿ ನೊಬೆಲ್; ಮಹಾಯುದ್ಧ ಕಾಲಘಟ್ಟದಲ್ಲಿ ವೆಸ್ಟ್ ಇಂಡೀಸ್‌ನ ಸರ್ ಲೇರಿ ಕಾನ್ಸಟೆಂಟಿನ್, ಆಸ್ಟ್ರೇಲಿಯಾದ ಸ್ಟಾನ್ ಮೆಕ್‌ಕೆಬ್; ಮಹಾಯುದ್ಧಾನಂತರ ಕಾಲದಲ್ಲಿ ಭಾರತದ ವಿನೂ ಮಂಕಡ್ ಮತ್ತು ಇಂಗ್ಲೆಂಡ್‌ನ ಟೆಡ್ ಡೆಕ್ಸ್‌ಟರ್ ಅವರನ್ನು ಆಯ್ಕೆ ಮಾಡಲಾಗಿದೆ.

ಏಕದಿನ ಕ್ರಿಕೆಟ್ ಕಾಲಘಟ್ಟದಲ್ಲಿ ವೆಸ್ಟ್ ಇಂಡೀಸ್‌ನ ಡೆಸ್ಮಂಡ್ ಹೇಯ್ನ್ಸ್, ಇಂಗ್ಲೆಂಡ್‌ನ ಬಾಬ್ ವಿಲ್ಲಿಸ್, ಆಧುನಿಕ ಕಾಲಘಟ್ಟದಲ್ಲಿ ಜಿಂಬಾಬ್ವೆಯ ಆ್ಯಂಡಿ ಫ್ಲವರ್ ಮತ್ತು ಶ್ರೀಲಂಕಾದ ಕುಮಾರ ಸಂಗಕ್ಕಾರ ಆಯ್ಕೆಯಾಗಿದ್ದಾರೆ.

ಭಾರತದ ಸಾರ್ವಕಾಲಿಕ ಶ್ರೇಷ್ಠ ಆಲ್‌ರೌಂಡರ್‌ಗಳಲ್ಲಿ ಒಬ್ಬರಾಗಿರುವ ವಿನೂ ಮಂಕಡ್ ಆರಂಭಿಕ ಬ್ಯಾಟ್ಸ್‌ಮನ್ ಮತ್ತು ಎಡಗೈ ಸ್ಪಿನ್ನರ್ ಆಗಿದ್ದರು. ಅವರು 44 ಟೆಸ್ಟ್ ಪಂದ್ಯಗಳಲ್ಲಿ ಆಡಿದ್ದರು. 2109 ರನ್‌ಗಳನ್ನು 31.47ರ ಸರಾಸರಿಯಲ್ಲಿ ಗಳಿಸಿದ್ದರು. 162 ವಿಕೆಟ್ ಗಳಿಸಿದ್ದರು. ಎಲ್ಲ ಕ್ರಮಾಂಕಗಳಲ್ಲಿಯೂ ಬ್ಯಾಟಿಂಗ್ ಮಾಡಿದ ಭಾರತದ ಮೂವರು ಬ್ಯಾಟ್ಸ್‌ಮನ್‌ಗಳಲ್ಲಿ ಮಂಕಡ್ ಕೂಡ ಒಬ್ಬರು.

'ವಿನೂ ಆತ್ಮವಿಶ್ವಾಸದ ಪ್ರತೀಕವಾಗಿದ್ದರು. ಎಂದಿಗೂ ಸೋಲೊಪ್ಪದ ಮನೋಭಾವ ಅವರದ್ದು. ಶತಕ ಬಾರಿಸಿದಾಗಲೂ ನಿನ್ನತ್ತ ಆಯ್ಕೆದಾರರು ನೋಡಲಿಲ್ಲವೆಂದರೆ, ನಂತರದ ಪಂದ್ಯದಲ್ಲಿ ದ್ವಿಶತಕ ಬಾರಿಸು. ನಿನ್ನ ಸಾಮರ್ಥ್ಯವನ್ನು ಇನ್ನಷ್ಟು ಜೋರಾಗಿ ಜಗಜ್ಜಾಹೀರು ಮಾಡು ಎಂದು ನನಗೆ ಯಾವಾಗಲೂ ಹೇಳುತ್ತಿದ್ದರು. ಅವರ ಮಾತುಗಳೇ ನನಗೆ ಪ್ರೇರಣೆಯಾಗಿದ್ದವು' ಎಂದು ಮಾಜಿ ಕ್ರಿಕೆಟಿಗ ಸುನೀಲ್ ಗಾವಸ್ಕರ್ ಸ್ಮರಿಸಿದ್ದಾರೆ.

ಫಿನ್‌ಲೆಂಡ್‌ಗೆ ಮಣಿದ ಡೆನ್ಮಾರ್ಕ್

ಕೋಪನ್‌ಹೇಗನ್, ಡೆನ್ಮಾರ್ಕ್: ಜೋಯಲ್ ಪೋಜನ್‌ಪಾಲೊ ಗಳಿಸಿದ ಗೋಲಿನ ನೆರವಿನಿಂದ ಫಿನ್‌ಲೆಂಡ್ ತಂಡ ಡೆನ್ಮಾರ್ಕ್ ವಿರುದ್ಧ ಜಯಿಸಿತು. ಇಲ್ಲಿ ಶನಿವಾರ ನಡೆದ ಯೂರೋಪಿಯನ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ 'ಬಿ' ಗುಂಪಿನಲ್ಲಿ ಪ್ರವಾಸಿ ತಂಡ 1–0ಯಿಂದ ಗೆದ್ದಿತು.

ಡೆನ್ಮಾರ್ಕ್ ತಂಡದ ಕ್ರಿಸ್ಟಿಯನ್ ಎರಿಕ್ಸನ್ ಅವರು ಕ್ರೀಡಾಂಗಣದಲ್ಲಿ ಕುಸಿದುಬಿದ್ದ ಕಾರಣ ಪಂದ್ಯವನ್ನು 90 ನಿಮಿಷಗಳ ಕಾಲ ಸ್ಥಗಿತಗೊಳಿಸಲಾಗಿತ್ತು. ಪಂದ್ಯದ 43ನೇ ನಿಮಿಷದಲ್ಲಿ ಈ ಘಟನೆ ನಡೆದಿತ್ತು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

'ಬಿ' ಗುಂಪಿನ ಇನ್ನೊಂದು ಪಂದ್ಯದಲ್ಲಿ ಅಗ್ರ ಕ್ರಮಾಂಕದ ಬೆಲ್ಜಿಯಂ ತಂಡವು 3–0 ಗೋಲುಗಳಿಂದ ರಷ್ಯಾವನ್ನು ಸೋಲಿಸಿತು.

ಆಟಗಾರರಿಗಿಲ್ಲ ಐಸ್ ಬಾತ್!

ದೋಹಾ (ಪಿಟಿಐ): ಇಲ್ಲಿ ನಡೆಯುತ್ತಿರುವ ಫಿಫಾ ವಿಶ್ವಕಪ್ ಮತ್ತು 2023ರ ಏಷ್ಯನ್ ಕಪ್ ಕ್ವಾಲಿಫೈಯಿಂಗ್ ಟೂರ್ನಿಯಲ್ಲಿ ಆಡುತ್ತಿರುವ ಭಾರತದ ಫುಟ್‌ಬಾಲ್ ಆಟಗಾರರಿಗೆ ಕ್ರೀಡಾಂಗಣದಲ್ಲಿ ಪಂದ್ಯಗಳು ಮತ್ತು ತರಬೇತಿ ನಂತರ ಐಸ್ ಬಾತ್ ಮಾಡಲು ಅವಕಾಶ ನೀಡುತ್ತಿಲ್ಲ.

ಕೋವಿಡ್ ಪ್ರಸರಣ ತಡೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ಇಲ್ಲಿ ಜಾರಿಗೊಳಿಸಲಾಗಿದೆ. ಅದರಲ್ಲಿರುವ ನಿಯ ಮದ ಪ್ರಕಾರ ಕ್ರೀಡಾಂಗಣದಲ್ಲಿ ಶೀತಲ ಸ್ನಾನ (ಐಸ್ ಬಾತ್) ವ್ಯವಸ್ಥೆಯನ್ನು ತೆಗೆದುಹಾಕಲಾಗಿದೆ. ಆದ್ದರಿಂದಾಗಿ ಕ್ರೀಡಾಂಗಣದಲ್ಲಿ ಪಂದ್ಯ ಅಥವಾ ತಾಲೀಮಿನ ನಂತರ ಭಾರತದ ಆಟಗಾರರು ತಮ್ಮ ಹೋಟೆಲ್‌ಗಳಿಗೆ ಮರಳಿ ಐಸ್ ಬಾತ್ ಮಾಡಬೇಕಿದೆ.

'ಆಟಗಾರರು ಉಳಿದಿಕೊಂಡಿರುವ ಹೋಟೆಲ್‌ಗಳ ಕೋಣೆಗಳಲ್ಲಿಯೇ ಪ್ರತಿಯೊಬ್ಬರಿಗೂ ಐಸ್ ಬಾತ್ ವ್ಯವಸ್ಥೆ ಕಲ್ಪಿಸಲಾಗಿದೆ. ಸೋಂಕು ಪ್ರಸರಣದ ಅಪಾಯವನ್ನು ತಪ್ಪಿಸಲು ಈ ವ್ಯವಸ್ಥೆ ಮಾಡಲಾಗಿದೆ' ಎಂದು ತಂಡದ ವೈದ್ಯ ಶೆರ್ವಿನ್ ಶರೀಫ್ ತಿಳಿಸಿದ್ದಾರೆ.